# DAMAGE BOOK

# THE BOOK WAS DRENCHED

UNIVERSAL
LIBRARY
OU_200246
UNIVERSAL
LIBRARY

# ಸಹ್ಯಾದ್ರಿ

( ಜೀವನ ಚಿತ್ರಗಳು )

★

ವ್ಹಿ. ಜಿ. ಭಟ್ಟ ಎಂ. ಎ.

★

೧೯೪೭

ಪರ್ಣಕುಟಿ ಗ್ರಂಥಮಾಲೆ, ಗೋಕರ್ಣ

ಮಾರಾಟದ ಪೂರ್ಣಾಧಿಕಾರಿಗಳು:

**ಸಮಾಜ ಪುಸ್ತಕಾಲಯ, ಧಾರವಾಡ.**

ಬೆಲೆ:

**ಒಂದೂ ಕಾಲು ರೂಪಾಯಿ**

(All rights Reserved by the Author)

ಪ್ರಕಾಶಕರು :
**ಶ್ರೀ. ಮ. ಗ. ಶೆಟ್ಟಿ**
ಅಂಕೋಲಾ

ಮುದ್ರಕರು :
**ಶ್ರೀ. ಎಚ್. ಬಿ. ನವಲೂರ**
ಹಿಂದಮಾತಾ ಮುದ್ರಣಾಲಯ,
ಧಾರವಾಡ

# ಪರಿವಿಡಿ


| | | ಪುಟ |
|---|---|---|
| ೧. | ಜಟ್ಗನ ಸಾಕ್ಷಿಯಲ್ಲಿ .... .... | ೧ |
| ೨. | ಬರಿಗೈ .... .... | ೭ |
| ೩. | ಪೋಣಿ .... .... | ೧೪ |
| ೪. | ರಾವಣನ ದುಕ್ಕ .... .... | ೨೯ |
| ೫. | ಜಿಕೈ .... .... | ೩೩ |
| ೬. | ಸಂಧಿಕಾಲ .... .... | ೩೮ |
| ೭. | ಅಂತೆ .... .... | ೪೨ |
| ೮. | ಮನೆಹೊದಿಕೆ .... .... | ೪೫ |
| ೯. | ಬಿದಿರಬೀಸಾಳೆ .... .... | ೪೮ |
| ೧೦. | ಸುಬ್ರಮ್ಮಣ್ಯನ ಮಾಮನೆ .... .... | ೫೧ |
| ೧೧. | ಬಳಚಿಯ ಬುಟ್ಟಿ .... .... | ೫೪ |
| ೧೨. | ದನಗಾಹಿ .... .... | ೫೬ |
| ೧೩. | ಮಂಗಳಾರತಿ .... .... | ೬೧ |
| ೧೪. | ಸುಬ್ಬನ ಮೇಳದ ಪುಟ್ಟ .... .... | ೬೫ |
| ೧೫. | ಮಣ್ಣಿನ ಮಗು .... .... | ೬೮ |
| ೧೬. | ಇಬ್ಬರು ಭಕ್ತರು .... .... | ೭೧ |
| ೧೭. | ಸಕಲ ವಿದ್ಯೆ ಸಣ್ಣಪ್ಪ .... .... | ೭೬ |
| ೧೮. | ಕಂತಪಲಿ .... .... | ೭೯ |
| ೧೯. | ಹೊಯ್ಲೆರೆಯಲ್ಲಿ .... .... | ೮೫ |
| ೨೦. | ಕರಿಕಾನಮ್ಮ .... .... | ೮೮ |

# ಒಪ್ಪೋಲೆ

| ಪುಟ | ಸಾಲು | ತಪ್ಪು | ಒಪ್ಪು |
|---|---|---|---|
| ೩ | ೧ | ಅಕಿ | ಅಕ್ಕಿ |
| ೩ | ೨೬ | ಬಂದಿತು | ಬಂದೀತು |
| ೫ | ೩ | ಸಗ್ಗ | ನನ್ಗ |
| ೯ | ೧೩ | ಅವರ್ಕ್ಕ | ಅವರ |
| ೧೦ | ೧೬ | ಇದು | ಎಂದು |
| ೧೧ | ೮ | ಒಟ್ಟು | ಜಟ್ಟು |
| ೨೨ | ೪ | ಹಾಸಿ | ಹಾರಿ |
| ೨೭ | ೯ | ಸೋಬಗನ್ನ | ಸೋಗನ್ನ |
| ೪೬ | ೧೨ | ಹಾಳಿಗಿ | ಹಾಳಾಗಿ |
| ೪೯ | ೩ | ಕಚ್ಚ್ಯಾಯ | ಕಜ್ಜಾಯ |
| ೫೪ | ೧೯ | ಬುಟ್ಲ | ಬುಟ್ಟ |
| ೫೪ | ೨೧ | ಕೆ ರಿಯ | ಕೇರಿಯ |
| ೫೫ | ೯ | ಅನ್ನು ವರೆಗೂ | ಅನ್ನು ವರೆಗೂ |
| ,, | ೧೦ | ಮ ತಾಡಿದ | ಮಾತಾಡದ |
| ೬೨ | ೧೯ | ಜೋಂಕ | ಯೊಂಕ |
| ೬೭ | ೧೪ | ಅವಲೋಕಿ | ಅವಲೋಕಿಸಿ |
| ೬೮ | ೯ | ಬನ್ಸಿಲ್ಯಾ | ಬಂದ್ಸಿಲ್ಯಾ |
| ,, | ೨೦ | ಹುಕ್ಲಿ | ಹುಡ್ಕಿ |
| ೮೧ | ೭ | ಒಟ್ಟುಗೂಡಿಸು | ಒಟ್ಟುಗೂಡಿಸ |

# ಮುನ್ನುಡಿ

ಪುಸ್ತಕಕ್ಕೆ 'ಮುನ್ನುಡಿ' ಇರಬೇಕೆಂದರೆ ಅದು ಅವಾಸ್ತವ ಪ್ರಶಂಸೆಯೂ ಆಗಿರಬಾರದು; ಒರೆಗಲ್ಲಿಗೆ ಹಚ್ಚಿದ ವಿಮರ್ಶೆಯೂ ಆಗಿರಬಾರದು. ಮುನ್ನುಡಿಕಾರನ ಬಗೆಗಿರುವ ಜನತೆಯ ನಂಬುಗೆಯ ಸದುಪಯೋಗವಾಗುವಂತೆ ಹೊಸ ಲೇಖಕನ—ಅವನ ಕೃತಿಯ—ಪರಿಚಯ ಮಾಡಿಕೊಡುವುದೇ 'ಮುನ್ನುಡಿ'ಯ ಮುಖ್ಯ ಲಕ್ಷಣವಾಗಿರಬೇಕು.

ಸಮಾಜ ಯಾವಾಗಲೂ ಹೊಸದನ್ನು ಅಪೇಕ್ಷಿಸುತ್ತಿದ್ದರೂ ಹೊಸಬರು ಹೇಳಿದುದನ್ನು - ಮಾಡುತ್ತಿರುವುದನ್ನು—ಒಮ್ಮೆಲೆ ಪುರಸ್ಕರಿಸಲಿಕ್ಕೆ ಅದು ಸಿದ್ಧವಾಗುವುದಿಲ್ಲ. ಹೊಸಬರ ಹೊಸಮಾತು—ಕೃತಿಗಳಲ್ಲಿಯ ಗುಣಗಳನ್ನು ತನ್ನ ನಂಬುಗೆಯ ಹಿರಿಯರಾರಾದರೂ ಒಪ್ಪಿ ಹೇಳಿದರೆಯೆ ಸಮಾಜ ಅವನ್ನು ಪುರಸ್ಕರಿಸಲು ಸಿದ್ಧವಾಗುವದು. ಆದುದರಿಂದಲೆ ಹೊಸ ಲೇಖಕರು ಹಲವು ರಿಂದ 'ಮುನ್ನುಡಿ'ಗಳನ್ನು ಅಪೇಕ್ಷಿಸುವರೆಂದು ನನ್ನ ಭಾವನೆ. ಮುನ್ನೋಟ ವಿದ್ದ ಹಳಬ ಯಾವಾಗಲೂ ಹಳೆಯ ಮಾತುಗಳನ್ನೆ ಗೊಣಗುತ್ತ ಕುಳಿತಿರಸು. ಮುಂಬರಿಯುತ್ತಿರುವ ಸಮಾಜ ಜೀವನವನ್ನು ಅನುಲಕ್ಷಿಸಿ 'ಹೊತ್ತು ಹೊತ್ತಿಗೆ ಹೊಸ ಪರಿಯ ಸಿಂಗರಬೇಕು.' ಎಂಬುದನ್ನು ಮನಗಂಡು, ಹಳೆಯ ಕಾಲದಿಂದ ಹೊಸಕಾಲಕ್ಕೆ ವಿಚಾರಸೇತುವೆಯಾಗಿ ಕಾರ್ಯ ಮಾಡುವನು. ಇಂತಹನು ಬರೆದ ಮುನ್ನುಡಿ ಹೊಸ ಸಾಹಿತ್ಯಿಕ ವ್ಯಕ್ತಿ ಕೃತಿಗಳತ್ತ ಜನತೆಯ ಲಕ್ಷ್ಯವನ್ನು ಸೆಳೆಯಬಲ್ಲದು; ಅವುಗಳ ಗುಣಗಳನ್ನು ಜನತೆ ಒಪ್ಪಿ ಪುರಸ್ಕರಿಸಲು ಕಾರಣವಾಗುವುದು.

ಶ್ರೀಮಾನ್ ವಿ. ಜಿ. ಭಟ್ಟರು ತರುಣ ಸಾಹಿತ್ಯಿಕರಾದರೂ ಕನ್ನಡ ಜನತೆಗೆ ಹೊಸಬರೇನೂ ಅಲ್ಲ. ಈಗಾಗಲೆ 'ಪಲಾಯನ' 'ರಕ್ತಾಂಜಲಿ' ಎಂಬೆರಡು ಕವನ ಸಂಗ್ರಹಗಳನ್ನು ಪ್ರಕಟಿಸಿ ಕೊಟ್ಟಿದ್ದಾರೆ. ಬೇರೆ ಬೇರೆ ಪತ್ರಿಕೆಗಳಲ್ಲಿ ಇವರ—ಹೆಚ್ಚಾಗಿ—ಪದ್ಯಗಳು ಆಗಾಗ ಪ್ರಕಟವಾಗುತ್ತಿರುತ್ತವೆ. ಉತ್ತರ ಕನ್ನಡ ಜಿಲ್ಲೆ ಕನ್ನಡ ಸಾಹಿತ್ಯ ಪ್ರಪಂಚಕ್ಕೆ ಒದವಿಸಿಕೊಟ್ಟ ಸತ್ತ್ವಯುಕ

ವಾದ ಒಂದು ಕಾಣಿಕೆ ಎನಿಸುವಂತಿದ್ದಾರೆ. ಶ್ರೀ. ವಿ. ಜಿ. ಭಟ್ಟರು. ಇವರ ಕೃತಿಗಳೂ ಇವರ ಒಳ್ಳೆಯ ಭವಿಷ್ಯಕ್ಕಾಗಿ ಹಿರಿಯರನ್ನು ಆಶೆಯಿಂದ ನಿರೀಕ್ಷಿಸಲು ಹಚ್ಚುವಂತಿವೆ. ಕರ್ನಾಟಕದ ಪ್ರಾದೇಶಿಕ ಪದ್ಧತಿ, ರೀತಿ, ಜನಜೀವನಗಳು ನಮ್ಮ ಸಾಹಿತ್ಯದ ಸೌಂದರ್ಯ ವೈವಿಧ್ಯವನ್ನು ಹೆಚ್ಚಿಸುವುದಕ್ಕೆ ಸಾಕಷ್ಟು ಮೂಲವಸ್ತುಗಳನ್ನು ಒದವಿಸಿಕೊಡುವ ಸತ್ತ್ವ-ಸೌಂದರ್ಯದಿಂದ ತುಂಬಿಕೊಂಡಿವೆ. ಶ್ರೀ. ಗೊರೂರ ರಾಮಸ್ವಾಮಿ ಅಯ್ಯಂಗಾರರು, ಶ್ರೀ. ಶಿವರಾಮ ಕಾರಂತರು ತಂತಮ್ಮ ಪ್ರಾದೇಶಿಕ ಜನಜೀವನ ಚಿತ್ರಗಳನ್ನು ಹೊಸ ಕನ್ನಡ ಸಾಹಿತ್ಯಕ್ಕೆ ಒದವಿಸಿಕೊಟ್ಟು ಅದರ ಸೊಬಗನ್ನು ಹೆಚ್ಚಿಸಿರುವರು. ಈಗ ಶ್ರೀ. ವಿ. ಜಿ. ಭಟ್ಟರು ಈ 'ಸಹ್ಯಾದ್ರಿ'ಯ ಮುಖಾಂತರ ಉತ್ತರ ಕನ್ನಡ ಜಿಲ್ಲೆಯ ಜನಜೀವನದ ಚಿತ್ರಗಳನ್ನೂ ಅಲ್ಲಿ ಅರಳಿದ ಮಾನವತೆಯನ್ನೂ ಮೂಡಿಸಿ ಜನತೆಯ ಕಣ್ಣೆದುರು ಇರಿಸಲು ಹವಣಿಸಿದ್ದಾರೆ. ಪ್ರಯಾಣದ ಸೌಕರ್ಯದ ಅಭಾವದ ಮೂಲಕ-- ಕನ್ನಡನಾಡಿನ ಮಹತ್ವದ ಒಂದು ಭಾಗವಾಗಿದ್ದರೂ—ಬಹುಜನರಿಗೆ ಉತ್ತರ ಕನ್ನಡ ಜಿಲ್ಲೆ 'ಏರಲಾರದ ಭಾರಿಯ ಗುಡ್ಡ'ವಾಗಿ ಪರಿಣಮಿಸಿದೆ. ಆದುದರಿಂದಲೆ ಉತ್ತರ ಕನ್ನಡ ಜಿಲ್ಲೆಯ ಜನಸಾಮಾನ್ಯರ ವಾಸ್ತವ ಜೀವನ ಮಿಕ್ಕವರಿಗೆ ಅಪರಿಚಿತವಾಗಿ ಉಳಿದುಬಿಟ್ಟಿದೆ. ಅದನ್ನು ಪರಿಚಯ ಮಾಡಿಕೊಡಬಲ್ಲ ಸಾಹಿತ್ಯಿಕರೂ ಇದುವರೆಗೆ ಯಾರೂ ಮುಂದೆ ಬಂದಿರಲಿಲ್ಲ. ಈಗ ಸುಶಿಕ್ಷಿತರಾದ — ಸಹೃದಯರಾದ—ಆದರ್ಶ ಜೀವನದ ಅಪೇಕ್ಷೆಯಿಂದ ವಾಸ್ತವ ಜೀವನವನ್ನು ಸೂಕ್ಷ್ಮದೃಷ್ಟಿಯಿಂದ ನೋಡುವವರಾದ — ಶ್ರೀ. ವಿ. ಜಿ. ಭಟ್ಟರು ಆ ಕಾರ್ಯಕ್ಕೆ ಸಿದ್ಧರಾಗಿ ಮುಂದುವರೆದುದು, ನಾಡಿಗರ ಎದೆಯೆದೆಯ ಮಿಲನದ ದೃಷ್ಟಿಯಿಂದಲೂ ಆವಶ್ಯಕವಾದ ಮಾತು; ಸಂತೋಷದ ಮಾತು.

ಈ ಸಂಕಲನದಲ್ಲಿ ಉ. ಕ. ಜಿಲ್ಲೆಯ ಜನಜೀವನದ ೨೦ ಚಿತ್ರಗಳಿವೆ. ಎಲ್ಲವೂ ವಾಸ್ತವ ಜೀವನದೆದುರು ಹಿಡಿದ ಕನ್ನಡಿಯಲ್ಲಿ ಮೂಡಿದ ಸತ್ಯದ ಪ್ರತಿಬಿಂಬಗಳು. ಚಿತ್ರಗಳಲ್ಲಿ ಕಾಣುವ ಜನರು, ಆಡುವ ಮಾತು ಯಾವುದೂ ಕಲ್ಪನಾಲೋಕದ ಕನಸಿನಲ್ಲಿ ಮೂಡಿದುದಲ್ಲ. ಶ್ರೀ. ವಿ. ಜಿ. ಭಟ್ಟರು ಭಾವುಕರಾಗಿದ್ದರೂ ಗುರಿಯಿಲ್ಲದೆ ಭಾವನೆಯ ಹಿಂದೆ ಹೊರಡುವ ಕುರುಡು ನಂಬುಗೆಯವರಲ್ಲ. ಒಂದೊಂದು ಅಡಿಯನ್ನು ಮುಂದೆ ಇಡಲಿಕ್ಕೂ ವ್ಯಾವಹಾರಿಕ

ಸತ್ಯದ ಅನುಭವವನ್ನು ಅಪೇಕ್ಷಿಸುವವರು. ಆದುದರಿಂದಲೇ ಜನಜೀವನದಲ್ಲಿ ಧರ್ಮ, ದೇವರು, ಶಿಷ್ಟಾಚಾರಗಳ ಹೆಸರಿನಿಂದು ಕಾಲಾಟ ನಡೆಯಿಸಿರುವ ಅಜ್ಞಾನ, ಆಭಾಸಜ್ಞಾನ, ಅಂಧಶ್ರದ್ಧೆಗಳನ್ನು ಕಾಣುವ ಅವರ ರೀತಿಯೆ ಬೇರೆಯಾಗಿದೆ. ಅವುಗಳನ್ನು ಕುರಿತು ಆಡುವ ಕಟಕಿವಾತುಗಳ ಬಗೆ ಅವರದೇ ಆಗಿದೆ. ಅವರ ವಿಡಂಬನೆಯ ಶೈಲಿ ವಿಡಂಬನಾ ಸಾಹಿತ್ಯಸೃಷ್ಟಿಗಾಗಿ ನಿರ್ಮಾಣ ಮಾಡುದಲ್ಲ. ಲೋಕದ ಡೊಂಕನ್ನು ಸರಿಪಡಿಸಬೇಕೆಂದು ಅಪೇಕ್ಷಿಸಿ ಬಳಸಿದ 'ಕೊಂಕು' ಅದು. ಅವರ ನಗೆಯ ದಾರಿ ಗುರಿಯಿಲ್ಲದ 'ವಿದೂಷಕನ ನಕಲಿ'ಯಲ್ಲ. ಸಮಾಜದಲ್ಲಿ ಹುದುಗಿದ—ವ್ಯಕ್ತಿಯಲ್ಲಿ ಮರೆಯಾಗಿರುವ—ಅಶಕ್ತತೆಗಳನ್ನು ಮನವರಿಕೆ ಮಾಡಿಕೊಟ್ಟು, ಅದರಿಂದ ಉಂಟಾದ ನಾಚಿಕೆ-ಸಂತಾಪಗಳ ಮೇಲೆ ಹೊದ್ದಿಸಿಕೊಳ್ಳಬೇಕಾದ ನಗೆಯ ತೆರೆ ಇಲ್ಲಿಯ ಚಿತ್ರಗಳಲ್ಲಿ ಕಾಣುತ್ತಿರುವುದು ನಮ್ಮ ಜನರ ವಾಸ್ತವ ಜೀವನವನ್ನು. ಆದರೆ ಶ್ರೀ. ವಿ. ಜಿ. ಭಟ್ಟರು ಅವುಗಳಿಗೆ ಕೊಟ್ಟಿರುವ ಕಲಾತ್ಮಕ ನೆರಳು—ಬೆಳಕು, ಅವರ ಆದರ್ಶದ ಸೂಚನೆಗಳನ್ನು ಸೂಕ್ಷ್ಮವಾಗಿ ಪ್ರದರ್ಶಿಸುತ್ತಿರುವುದು.

ಇವೆಲ್ಲ 'ಜೀವನ ಚಿತ್ರ' ಎಂದು ಬರೆದವುಗಳಾಗಿದ್ದರೂ 'ದೋಣಿ' 'ಬೆಳ್ಳಿ' 'ಕಂತದಲಿ' ಎಂಬುವುಗಳಲ್ಲಿ ಕೆಲವೊಂದು ಪಾತ್ರಗಳು ಪರಿಪುಷ್ಟಿಗೊಂಡು, ಅವುಗಳ ಚಲನವಲನ ಒಂದು ಘಟನೆಯನ್ನು ಪೂರ್ಣಗೊಳಿಸುವುವಾದುದರಿಂದ ಇವು ಬರೀ 'ಜೀವನ ಚಿತ್ರ'ಗಳೆನಿಸದೆ 'ಸಣ್ಣ ಕತೆ'ಯ ಪ್ರಪಂಚದ ಹತ್ತಿರ ಹತ್ತಿರಕ್ಕೆ ಹೋಗಿವೆ. ಇಲ್ಲಿ ಹಿನ್ನೆಲೆಯಾಗಿ ಬಣ್ಣಿಸಿದ ಉತ್ತರ ಕನ್ನಡ ಜಿಲ್ಲೆಯ ದೋಣಿಗಾರನ ಜೀವನ ಚಿತ್ರ, ಮೂಲೆಹಳ್ಳಿಯ ಪ್ರದೇಶ ಚಿತ್ರ, ಬೀರ-ಸುಬ್ಬಿಯರ ಮನದ ಹೊಯ್ದಾಟದ ಕರುಣಾಚಿತ್ರ ಆಕರ್ಷಕವಾಗಿ ಇವೆ. ಕಾನೂನಿನ ಹೆಸರಿನಲ್ಲಿ ನಡೆವ ಅನ್ಯಾಯ 'ಜಟ್ಗನ ಸಾಕ್ಷಿ' ಯಲ್ಲಿ ಭೀಕರವಾಗಿದ್ದರೆ, 'ಮಂಗಳಾರತಿ' ಎಂಬುದರಲ್ಲಿ ಕೊಂಕುತನದಿಂದ ನಿರೂಪಿತವಾಗಿದೆ. ಜನಸಾಮಾನ್ಯರ ಜೀವನ ದರ್ಶನದ ಹಿನ್ನೆಲೆಯೊಂದಿಗೆ 'ಬರಿಗೈ' 'ಬಳಚಿಯ ಬುಟ್ಟಿ' ಗಳು ಕಾಮದ ಕೈಯಲ್ಲಿ ಸಿಕ್ಕ ಹೊಸಹರಯದವರ ಮನದ ಉಯ್ಯಾಲೆಯಾಟವನ್ನು ರೂಪಿಸುತ್ತಿವೆ. 'ರಾವಣನ ದುಕ್ಕ'ದಲ್ಲಿಯ ಬೊಡ್ಡೆ ಮಾಸ್ತಿ, 'ಸಕಲ ವಿದ್ಯೆಯ' ಸಣ್ಣಪ್ಪ ಈ ಸಾಮಾನ್ಯರ ಸಮಾಜಸೇವೆಯ ಉತ್ಕಟ ಬಯಕೆ, ಎಂತಹ ನಾಗರಿಕರಿಂದಲೂ

ಮೆಚ್ಚಿಕೆಯ ಉಡುಗರೆ ಪಡೆಯಬಲ್ಲವು. ಹಳೆಯದನ್ನು ಬಿಟ್ಟು ಹೊಸತನ್ನು ಬಯಸುವುದು ಲೋಕದ ಸ್ವಭಾವವೆಂಬುದನ್ನು 'ಸುಬ್ಬನ ಮೇಳದ ಪುಟ್ಟ' ಸಾಧಿಸಿ ತೋರಿಸಿದ್ದರೆ, ಹಳೆಯದೆಲ್ಲ ಕೊಳೆಯುಲ್ಲ—ಎಂಬುದನ್ನು 'ಮನೆ ಹೊದಿಕೆ'ಯಲ್ಲಿ ವಿವರಿಸಲಾಗಿದೆ; ಅದರಂತೆಯೆ ಹೊಸಕಾಲದೊಂದಿಗೆ ಹೊಂದಿ ಕೊಳ್ಳುವುದೇ ಬದುಕಬೇಕೆನ್ನುವವರ ಕರ್ತವ್ಯ ಎಂಬ'ದನ್ನು 'ಸಂಧಿಕಾಲ' ದಲ್ಲಿ ನಾಪಿಕ ಶಂಕರನ ವ್ಯಕ್ತಿ ಚಿತ್ರಣದಿಂದ ನಿರೂಪಿಸಲಾಗಿದೆ. ಹಿಂದೂ ವಿಧವೆಯ ಆಶಾಜೀವನದ ಬಿಭತ್ಸ ಚಿತ್ರ 'ಮಣ್ಣಿನ ಮಗು' ವಿನಲ್ಲಿ ಕಂಡರೆ ಆದರ್ಶ ಜೀವನದ ಪವಿತ್ರ ಚಿತ್ರ 'ಕರಿಕಾನಮ್ಮ' ಎಂಬುದರಲ್ಲಿ ಮುಖವಿಕ್ಕುತ್ತದೆ. ಮದುವೆಗಾಗಿ ಬಾಯ್ಬಿಟ್ಟ ಸುಬ್ರಹ್ಮಣ್ಯ, ಸಣ್ಣದೊಡ್ಡ ಗಣಪತಿಗಳಿಗಾಗಿ ಕಾದಾಡಿದ 'ಇಬ್ಬರು ಭಕ್ತರು' ಇವರ ಸ್ವಭಾವ ಅವರನ್ನು ನಗೆಗೀಡು ಮಾಡುವ ಕತೆ ಮನೋರಂಜಕವಾಗಿವೆ.

ಭಾಷೆ ಉತ್ತರ ಕನ್ನಡ ಜಿಲ್ಲೆಯ ವಾಕ್ಪ್ರಚಾರ—ವಾಕ್ಯರಚನಾ ಪದ್ಧತಿಗಳಿಂದ ಕೂಡಿದ್ದು ಸಜೀವವಾಗಿದೆ; ಸತ್ತ್ವಯುಕ್ತವಾಗಿದೆ. ಅಲ್ಲಲ್ಲಿ ಕೆಲವು ವ್ಯಕ್ತಿಗಳಾಡುವ ಪ್ರಾದೇಶಿಕ ಜಾನಪದ ಪದಗಳೂ ನುಡಿಗಳೂ ಮಿಕ್ಕಕಡೆಯವರಿಗೆ ಒಮ್ಮೆಲೆ ತಿಳಿಯಲಿಕ್ಕಿಲ್ಲ. ಅವುಗಳಿಗೆ ವಿವರಣೆ ಆವಶ್ಯಕವೆನಿಸುವುದು. ಆದರೆ ಬೆಳೆಯುತ್ತಿರುವ ಕನ್ನಡ ಭಾಷೆಗೆ ಇವೆಲ್ಲ ಪ್ರಾದೇಶಿಕ ಪದಗಳು ಬಂದು ಕೂಡಿ, ಎಲ್ಲರಿಗೂ ಪರಿಚಯದುವುಗಳಾಗಿ, ಕನ್ನಡ ಶಬ್ದ ಭಾಂಡಾರವನ್ನು ಹೆಚ್ಚಿಸುವುದು ಅತ್ಯಂತ ಅಗತ್ಯದ ವಿಷಯವಾಗಿದೆ.

ಶ್ರೀ. ವಿ. ಜಿ. ಭಟ್ಟರಲ್ಲಿ ಸಾಕಷ್ಟು ಬರೆಯುವ ಶಕ್ತಿಯಿದೆ; ಅನುಭವವಿದೆ; ಅಭ್ಯಾಸವೂ ಇದೆ. ಈಗಾಗಲೆ ಬರೆದು ಬೆಳಕು ಕಾಣದೆ ಕುಳಿತಿರುವ ಸಾಹಿತ್ಯ ಸೃಷ್ಟಿ ಅವರಲ್ಲಿ ಸಾಕಷ್ಟು ಇದೆಯೆಂಬುದನ್ನು ನಾನು ಬಲ್ಲೆ. ಕನ್ನಡ ರಸಿಕರ ಪ್ರೋತ್ಸಾಹ-ಸಹಕಾರಗಳು ಶ್ರೀ. ಭಟ್ಟರ ಸಾಹಿತ್ಯವನ್ನೆಲ್ಲ ಬೆಳಕಿಗೆ ತರಲಿ. ಅದರಿಂದ ನಮ್ಮ ಸಾಹಿತ್ಯದ ಬೆಳಕು ಹೆಚ್ಚಾಗಲಿ.

'ಜಯಂತಿ' ಕಾರ್ಯಾಲಯ, ಧಾರವಾಡ

ತಾ. ೧-೧೧-೪೭

**ಬೆಟಗೇರಿ ಕೃಷ್ಣಶರ್ಮ**

# ಪ್ರಕಾಶಕರ ಮಾತು

ಅಕ್ಟೋಬರದ ಸುರುವಿಗೇ ಹೊರಡಬೇಕಾಗಿದ್ದ 'ಸಹ್ಯಾದ್ರಿ' ಒಂದು ತಿಂಗಳು ತಡವಾಗಿ ಹೊರಡುತ್ತಿದೆ. ಎಲ್ಲ ಅಚ್ಚುಕೂಟಗಳಲ್ಲಿಯೂ ಮಾಡಿತೀರ ದಷ್ಟು ಕೆಲಸಬಿದ್ದಿರುವಾಗ ಒಂದೇ ತಿಂಗಳು ತಡವಾದುದು ನಮ್ಮ ಸುದೈವ! ವಿಳಂಬಕ್ಕಾಗಿ ನಮ್ಮ ಚಂದಾದಾರರು ಕ್ಷಮಿಸುವರೆಂದು ನಂಬಿದ್ದೇವೆ.

ಹಿಂದಮಾತಾ ಮುದ್ರಣಾಲಯದ ಒಡೆಯರಾದ ಶ್ರೀ. ಎ. ಎನ್. ಕಾಮತರು ಮನಸ್ಸು ಮಾಡದಿದ್ದರೆ ಇಷ್ಟು ಅವಧಿಯಲ್ಲಾದರೂ ಇಷ್ಟು ಅಂದ ವಾಗಿ 'ಸಹ್ಯಾದ್ರಿ' ಹೊರಡುವದು ಸಂಶಯವಾಗಿತ್ತು. ಅವರಿಗೆ ನಾವು ಕೃತಜ್ಞರಾಗಿದ್ದೇವೆ.

ನಮ್ಮ ಮಾಲೆಯಲ್ಲಿ 'ಸಹ್ಯಾದ್ರಿ'ಯನ್ನು ಸೇರಿಸಲು ಕೊಟ್ಟುದಕ್ಕಾಗಿ ಶ್ರೀ. ವಿ. ಜಿ. ಭಟ್ಟರಿಗೆ ನಾವು ತುಂಬಾ ಋಣಿಯಾಗಿದ್ದೇವೆ.

ಮುಖಚಿತ್ರ ತೆಗೆದುಕೊಟ್ಟ ಶ್ರೀ. ಅರ್ಕಸಾಲಿಯವರಿಗೆ ನಮ್ಮ ಕೃತಜ್ಞತೆ ಸಲ್ಲತಕ್ಕದ್ದು.

ಓದುಬರುವವರೆಲ್ಲ ಮಾಲೆಯ ಬೆಳವಣಿಗೆಗೆ ನೆರವಾಗಬೇಕಾಗಿ ಬಿನ್ನಹ.

ಇತಿ ತಮ್ಮ

**ಶಾ. ಗ. ಗೋಪಿ**

**ಮ. ಗ. ಶೆಟ್ಟಿ**

---

# ಕೆಲವು ಕಠಿಣ ಶಬ್ದಗಳ ಅರ್ಥ (ಪುಟಗಳ ಕ್ರಮದಲ್ಲಿ)

ಜಟ್ಗ = ಜಟ್ಟಿಗ; ವೀರ ಸ್ಮಾರಕದ ಕಲ್ಲು
ಮುಕರಿ=ಒಂದು ಜಾತಿ
ಹೆಡಗೆ = ಬುಟ್ಟಿ
ಶ್ರಾಯ = ಕಾಲ (Season)
ಗಡಿ ಪಾಗಾರ = ಸೀಮೆಯ ಗೋಡೆ
ನೇವಾಳ = ಉಡದಾರ
ಮೆರಿ = ಕುಟ್ವು
ಬಗೀಕೆ = ಬಗೇಲಿ = ತುಸು
ಮಕ್ಕೊ = ಮಕ್ಕಳು
ತಣ್ಣೆ = ತಂಗಳು
ಹಕ್ಕೆಹೊಳ್ಳಿ = ಮೊಗಸಾಲೆ
ಹಳ್ಗು = ಹಳಗು = ಬೆವರು
ಹಾಗಾರೆ = ಹಾಗಾದರೆ
ಕಾಯಿಬಾಗ = ಕೊಬ್ಬರಿಯ ಚೂರು
ಒಡಿದೀರು = ಒಡೆಯರು
ಕೋಸ = ಕೂಸ (ಶ) = ಹುಡುಗ
ಚೊಬ್ಬಿ = ಸಣ್ಣ ಬುಟ್ಟಿ
ಗುದ್ಕು = ಧುಮುಕು
ಹೊಡಚಲು = ಒಣ ಎಲೆಗಳ ಉರಿ
ಮೈರೆ = ಆಯ
ತಮ್ಜೊಲು = ಪಲ್ಲಕ್ಕಿ
ಬೊಂತೆ = ಸಿಂಬೆ
ಕುಳ್ಳಿ = ಮೀನ ಹಿಡಿಯುವ ಪಂಜರ
ಕರಿಮಣಿ = ಮಂಗಲ ಸೂತ್ರ
ಮೊನ್ನ = ಮೂಕ

ಜಲ್ಲು = ದೋಣಿ ತೆಗೆಯುವ ಕೋಲು
ದಿಗುಡು = ಸೊಕ್ಕು
ಮುಂಜಿ = ಉಪನಯನ ಕಾರ್ಯ
ದಿಂಡು = ಶೋಭನ
ತುಮಕೆ = ಎಲೆಯ ಗೊಂಚಲು
ಹಾನೆ = ಇದ್ದಾನೆ
ಬೊಡ್ಡೆ = ಕಡಾಯಿ
ಹಂದು = ಕವಲು
ಹೊಡ್ಲು = ಹುದಲು
ಗುಬ್ಬೆ = ಗುಡಿಸಲು
ಜಗ್ಗ = ಉರವಲು
ಹಂಚ್ಮಾರ್ತಿ = ಹೆಂಗಸರಿಗೆ ಬೈಗಳು
ಸೀಯಾಳ = ಎಳೆತೆಂಗು
ಹಣಿ = ಧಾನ್ಯ ಅರೆದು ತಯಾರಿಸಿದ ಪಾನಕ
[illegible]ಟ್ಟಾಮಕ್ಕಳು = ಮಾದಿಗರು
[illegible]ಳಚಿ = ಒಂದು ಬಗೆಯ ಸಿಂಪು. ಇದರೊಳಗಿನ ಮಾಂಸ ತಿನ್ನುತ್ತಾರೆ.
ಎಸುಡಿ = ಏಡಿ
[illegible]ಾಲ್ರ್ = ಜತೆ
ತೈಸು = ಹೊಂದಿಕೊಳ್ಳು
ಇಂಗ್ಲೀಶುಮಾಡು = ಮೋಸಮಾಡು
ತಪ್ಮಣೆಮಾಡು = ಸಂತೈಸು
ಬೇಣ = ಹುಲ್ಲುಗಾವಲ
ಬಡೆ = ಸತ್ತ ಪ್ರಾಣಿಯ ದೇಹದ ಅವಶೇಷ
ಗುಂದ = ಸಣ್ಣ ದಿಬ್ಬ

ಉತ್ತರ ಕನ್ನಡಿಗರ ಮೆಚ್ಚಿನದಾದ

# ಪರ್ಣಕುಟಿ ಗ್ರಂಥಮಾಲೆ

## ಗೋಕರ್ಣ

ವಿಜಯಾದಶಮಿಯಿಂದ ವಿಜಯಾದಶಮಿಗೆ ಆಗುವ
ವರುಷಕ್ಕೆ ವಿವಿಧ ನಾಲ್ಕು ಗ್ರಂಥಗಳು

**ಚಂದಾ ೩ ರೂಪಾಯಿ** (ರಜಿಸ್ಟರ್ ಅಂಚೆಯಿಂದ ೪ ರೂಪಾಯಿ)

ಇಂದೇ ಚಂದಾದಾರರಾಗಿರಿ.

ಸಂಚಾಲಕರು:

**ಶಾ. ಗ. ಗೋಪಿ, ಗೋಕರ್ಣ**

## ಈವರೆಗಿನ ಪ್ರಕಟನೆಗಳು—

| | | | | |
|---|---|---|---|---|
| ೧ | ಪ್ರಪಂಚದ ಕಥೆ— ಹೆಗಡೆ ಬಂಧುಗಳು | ೦ | ೧೫ | ೦ |
| ೨ | ಶ್ರೀನಾಥ— ಪಂ। ವಿಘ್ನೇಶ ಶರ್ಮಾ | ೦ | ೧೫ | ೦ |
| ೩-೪ | ಕಾಂಚನಮೃಗ ಭಾಗ ೧. ಅನು: ಪಾಂ. ಶಹಾಣೆ | ೨ | ೦ | ೦ |
| ೫-೬ | ,, ,, ೨. ,, ,, ,, | | | |
| ೭ | ರಕ್ತಸರೋವರ : ಕುಳಕುಂದ ಶಿವರಾಯ | ೧ | ೪ | ೦ |

### ಅಚ್ಚಿನಲ್ಲಿ

ಗಂಡು ಹೆಣ್ಣು — ಗೌರೀಶ ಕೈಕಿಣಿ

# ಇದೇ ಲೇಖಕರ ಇತರ ಕೃತಿಗಳು—

**ಪ್ರಕಟವಾಗಿವೆ.**

| | | |
|---|---|---|
| ಪಲಾಯನ | ಲಲಿತ ಕವನ ಸಂಗ್ರಹ | ೧ ೪ ೦ |
| ರಕ್ತಾಂಜಲಿ | ರುದ್ರಗೀತೆಗಳು | ೧ ೦ ೦ |

**ಅಚ್ಚಿನಲ್ಲಿ:**

ಬುರುಕಿ .... .... .... ಲಗುಕತೆಗಳು
ಮಂಗಳಲೋಕದಲ್ಲಿ ಮೂರು ದಿನ .... ಹರಟೆಗಳು
ಪ್ರಣಯ ಪಾಕಿಸ್ತಾನ .... .... ಪ್ರಣಯ ಗೀತೆಗಳು

**ಅಚ್ಚಿಗೆ ಕಾದಿವೆ:**

ಹರಕು ಮುಂಡಾಸ .... .... (ಕಾದಂಬರಿ)
ಚುಟುಕ .... .... (ಮಕ್ಕಳ ಕವನ ಸಂಗ್ರಹ)
ಪುಗ್ಗ ವಿಮಾನ .... .... ,, ,,
ಹೊಸ ಹಾಡು .... .... (ಕಟುಗೀತೆಗಳು)
ದೇವರ ಗೋರಿ .... .... (ಚಕ್ರಂಪದಗಳು)
(Nonsense–Poems)

# ಜಟ್ಟಿಗನ ಸಾಕ್ಷಿಯಲ್ಲಿ

●

ಹನುಮ ನಮ್ಮೂರ ಮುಕರಿಗಳ ತಂಡದಾಳು. ಕಳೆದ ಹತ್ತೆಂಟು ವರುಷಗಳಿಂದಲೂ ಅವನ ನಾಯಕತ್ವದಲ್ಲಿ ಮುಕರಿಗಳು ಊರಿನ ಗುತ್ತಿಗೆ ಕೆಲಸವನ್ನೆಲ್ಲ ಮಾತು ಕೊಟ್ಟಂತೆ ಮಾಡುತ್ತ ಬಂದಿದ್ದಾರೆ. ಸಂಜೆ ಮುಂದೆ ಅಕ್ಕಿ, ರಾಗಿ ಸರಿಯಾಗಿ ಸಿಗುವವರೆಗೆ ಅವರಿಗೆ ದುಃಖದ ಅರಿವೇ ಇತ್ತಿಲ್ಲ. ನಾಗರಿಕರಾದ ನಮಗೆ ಅವರನ್ನು ಕಂಡೊಡನೆಯೇ 'ಪಲಿತೋದ್ಧಾರ'ದ ಮೇಲೆ ಒಂದು ಉಜ್ವಲ ಭಾಷಣ ಮಾಡಿ ಬಿಡಬೇಕೆನ್ನುವ ಕಳಕಳಿ ಹುಟ್ಟ-ಬಹುದಾದರೂ ಹೋರೆಯಲ್ಲೇ ಇರುವ ಅವರಿಗೆ ಮಾತ್ರ ತಮ್ಮಂಥವರನ್ನು ಕಂಡರೆ 'ಇವರು ಜನರೇ ಅಲ್ಲ' ಎಂಬ ಭಾವನೆ! ದುಡಿಯಬೇಕು; ಉಣ್ಣಬೇಕು; ನಿದ್ದೆ ಹೋಗಬೇಕು. ಇದೇ ಅವರ ಬಾಳಿನ ಸೂತ್ರ. ಪ್ರಪಂಚದ ಯಾವ ಸಮಸ್ಯೆಯೂ ಅವರನ್ನು ಚಿಂತೆಗೆ ಒಡ್ಡಲಾರದು

ಆದರೆ ರೇಶನ್‌ಯುಗ ಸುರುವಾಗಿ ಅವರ ನಗೆ ಕೇಳುವದು ನಿಂತಿತು. ಹಣವಿದ್ದರೂ ಗಂಜಿಯಿಲ್ಲ! ಎಂಥ ಅಕ್ಕಿಯೋ ದೇವರೇ ಬಲ್ಲ. ಹೊಟ್ಟೆ ತುಂಬಿದ ಹಾಗೆ ಅನಿಸಿದರೂ ಹಸಿವೆ ಅಡಗುವದಿಲ್ಲ. ಮುಂಚಿನಂತೆ ಗುತ್ತಿಗೆ ಕೆಲಸದಿಂದ ಅಕ್ಕಿ ಬರುವದು ನಿಂತಿತು. ಯಾವ ದೊರೆಯೂ ಕೆಲಸದ ಸಂಬಳವನ್ನು ಕಾಳಿನ ರೂಪದಲ್ಲಿ ಕೊಡದಾದ. ದಿನಗೂಲಿ ರೂಪಾಯಿಗಿಂತ ಹೆಚ್ಚಾಯಿತೇನೋ ನಿಜ. ಆದರೆ ಕತ್ತಲೆ ಪೇಟೆ ಇರುವಿನಲ್ಲೆಲ್ಲ ನಿದ್ದೆ ಹೋಗುವ ಮುಕರಿಗಳಿಗೆಲ್ಲಿ ತೆರೆಯಬೇಕು? ಕತ್ತಲೆಯ ವ್ಯವಹಾರಕ್ಕೆ ಒಂದು ತರದ ಚುರುಕು ಬೇಡವೇ?

ಹೀಗಾದುದರಿಂದಾಗಿಯೆ ಹನುಮಗೆ ಫಜೀತಿ. ಇಷ್ಟು ವರ್ಷ ಗನಾ ತಂಡದಾಳಾದವ ಈಗ ಹಾಳೆನಿಸಿಕೊಳ್ಳಬೇಕಾಯಿತು. ತಂಡದಲ್ಲಿಯೇ ಕೆಲ-ವರು 'ಒಡೆಯರಿಂದ ಕಾಳುಕಡಿ ತಾನು ತೆಗೆದುಕೊಂಡು ನಮಗೆ ಮಾತ್ರ ಹಣ ಕೊಡುತ್ತಾನೆ' ಎನ್ನಹತ್ತಿದರು. ಕೆಲವು ಒಡೆಯರು ಹನುಮನಿಗೆ ಮಾತ್ರ

(ತಂಡದವರಿಗೆ ತಿಳಿಯದಂತೆ) ನುಚ್ಚು ಕೊಡುವೆನೆಂದು ರುಚಿ ತೋರಿಸಿದ-ರೇನೋ ನಿಜ. ಹನುಮನು ತನ್ನ 'ಮರ್ಯಾದಿ'ಗೆ ಕುಂದು ಬರುವದೆಂದು ಒಪ್ಪಲಿಲ್ಲ. ಗುತ್ತಿಗೆಯ ಹಣದಿಂದ ಧಾನ್ಯ ತರಿಸಿಕೊಡಬೇಕೆಂದು ತಂಡವು ಹನುಮನನ್ನು ಒತ್ತಾಯಪಡಿಸಹತ್ತಿತು. ಅವನಿಗೆ ಅದೆಲ್ಲಿ ಸಾಧ್ಯ ? ಅಂತೂ ಇಷ್ಟು ವರ್ಷಗಳಿಂದ ಕೂಡಿ ದುಡಿದ ಹೆಡಗೆ ಕುಟಾರೆಗಳೆಲ್ಲ ದಿಕ್ಕಾಪಾಲಾಗು-ವಂತೆ ತೋರಿತು. ಹನುಮನ ದುಃಖಕ್ಕೆ ಮಿತಿಯಿಲ್ಲದಾಯಿತು. ಇಷ್ಟು ವರ್ಷ ಇವರ ನಾಯಕನಾಗಿ ಈಗ ಕೈಬಿಡುವ ಹೊತ್ತು ಬಂತಲ್ಲಾ ಅಂತ ಮರುಗಿದ. ಹಿಂದೆ ತನ್ನ ನಾಯಕತ್ವದಲ್ಲಿಯೇ ಕಟ್ಟಿದ ಸಾರ ಸೇತುವೆಗಳು, ಕಡಿದ ಹಾದಿ ಕೆರೆಗಳು ಕಣ್ಣುಮುಂದೆ ಬಂದವು. ತನ್ನ ಮನೆಯ ಒಂದು ಮೂಲೆಯಲ್ಲಿ ಬಿದ್ದುಕೊಂಡಿದ್ದ ಹರಕು ಹೆಡಗೆಗಳನ್ನೂ ಸವೆದ ಗುದ್ದಲಿ ಕುಟಾರೆ ಹಾರೆಗಳನ್ನೂ ನೋಡಿದ. ಗಂಡಾಳುಗಳು ದರೆ ಅಗೆಯುವದು ಹೆಣ್ಣಾಳುಗಳು ಕೆಲೆಯುತ್ತ ಸಾಲಾಗಿ ಮಣ್ಣು-ಹೆಡಗೆ ಹೊರುವದು, ಆ ನಗೆ, ಚೇಷ್ಟೆ, ಅಂತಹದೊಂದು ದಿನ ಮೂಡಿದ ಅವನ ಮೊದಲಿನ ಪ್ರೇಮ, ಪ್ರಣಯಗಳೆಲ್ಲ ಮಿಂಚಿ ಹೋದವು. ಊರಿನ ಯಾವ ಒಡೆಯರೇ ಆಗಲಿ ಒಂದು ಕೆಲಸ ಆಗಬೇಕೆಂದು ಇಡೀ ತಂಡಕ್ಕೆ ಸಾಲುವ ಕವಳವನ್ನು ತನ್ನ ಕೈಯ್ಯಲ್ಲಿ ಕೊಡುತ್ತಿದ್ದರು; ಮುಕರಿಗಳ ಪ್ರಪಂಚಕ್ಕೆ ತಾನು 'ಹನುಮಣ್ಣ'ನಾಗಿದ್ದೆ........ಒಂದೇ ಎರಡೇ ವಿಚಾರಗಳು ?

ತಂಡವು ಕರಗಿಹೋಗುವ ಮುನ್ನಾದಿನದ ಕತೆ ಹೇಳುತ್ತೇನೆ.

ರಾಮ ಹೆಗ್ಡೆಯವರ ಹಳೇ ತೋಟಕ್ಕೆ ಹೊಸದಾಗಿ ಮಣ್ಣುಹಾಕುವ ಕೆಲಸವನ್ನು ಗುತ್ತಿಗೆ ಹಿಡಿದು ಬಂದ ಹನುಮನ ಮೋರೆಯಮೇಲೆ ಆನಂದ ಕುಣಿಯುತ್ತಿತ್ತು. ಅದಕ್ಕೆ ಕಾರಣವಿಷ್ಟೇ: ಆ ಹಳೇ ತೋಟಕ್ಕೆ ಮಣ್ಣು ಹಾಕದಿದ್ದರೆ ಅಡಿಕೆಯ ದರ ತುತ್ತತುದಿಗೆ ಏರಿದ ಈ ಶ್ರಾಯದಲ್ಲಿ ಹೆಗಡೆಯವರಿಗೆ ನಿದ್ದೆ ಬರುವಂತಿಲ್ಲ. ಮಣ್ಣು ಹಾಕುವದು ಸುಲಭದ ಮಾತಲ್ಲ. ತೋಟದ ಬೆನ್ನಿಗಿರುವ ಗುಡ್ಡವನ್ನೇ ಕಡಿಯಬೇಕು. ಕಡಿಯುವವರು ಮೌನವಾಗಿರಬೇಕು. ಹೆಗಡೆಯವರ ಆಸ್ತಿಯನ್ನೆಲ್ಲ ಕಾಯ್ದುಕೊಂಡು ಬಂದ 'ಜಟ್ಗ' ಅಲ್ಲೇ ಇದೆ. ಅದಕ್ಕೆ ಕೀಳುಜಾತಿಯವರ ದನಿ ಕೇಳಿದರಾಗದು! ಮೂಕರಂತೆ ದುಡಿಯಲು ಕಲೆಯುವದೇ ಉಸಿರಾದ ಮುಕರಿಗಳು ಒಪ್ಪುವ

ದೆಂತು? ಆದರೆ ಹೆಗಡೆಯವರು ಎಲ್ಲರಂತೆ 'ಲೋಟು' ಕೊಡದೆ ಅಕ್ಕಿಯನ್ನೇ ಅಳೆಯುವೆನೆಂದರು.

ತನ್ನ ತಂಡ ಇನ್ನೊಮ್ಮೆಯಾದರೂ ಹೊಟ್ಟೆತುಂಬ ಉಣ್ಣುವದೆಂದು ಹನುಮನಿಗೆ ಹಿಗ್ಗು. ಮೌನದಲ್ಲಿ ಹಗಲೆಲ್ಲಾ ದುಡಿಯಲು ತಂಡವು ಒಪ್ಪುವದಿಲ್ಲವೆಂಬುದನ್ನೂ ಅವ ಬಲ್ಲ. ಆದರೆ ಹನುಮನ ಮಾತನ್ನು ಸಹಜವಾಗಿ ಸುಲಭದಲ್ಲಿ ಯಾವ ಮುಕರಿಯೂ ತೆಗೆದುಹಾಕಲಿಕ್ಕಿಲ್ಲವೆಂದು ಅವನ ಹೃದಯ ಒಳನುಡಿಯುತ್ತಿತ್ತು.

ಅವನೆಣಿಸಿದಂತೆಯೇ ಆಯಿತು. ಗೊಣಗುಡುತ್ತ ಒಪ್ಪಿಕೊಂಡಿತು ತಂಡ. ಅಕ್ಕಿಯ ಆಸೆ!

ಮುಖಚರ್ಯೆ ಸನ್ನೆಗಳಿಂದ ಕೆಲಸ ಸಾಗಹತ್ತಿತು. ಜಟ್ಗನ ಸಾಕ್ಷಿಯಲ್ಲಿ ಬೆವರು ಸುರಿಯಿತು; ತೋಟಕ್ಕೆ ಹೊಸಮಣ್ಣು ಬಿದ್ದಿತು. ನಗಲೂ ಕೆಮ್ಮಲೂ ಹೆದರಿಕೆ ಮುಕರಿಗಳಿಗೆ. ಅಪ್ಪಿ ತಪ್ಪಿ 'ಅಶುಚಿ' ಆದರೂ ಕ್ಷಮಿಸಬೇಕೆಂದು ಮೊದಲೇ ಜಟ್ಗನಿಗೆ 'ಹೇಳಾಣ್ಕೇಳ್ಕೆ' ಆಗಿತ್ತು. ಕೆಲಸ ಮುಗಿದ ಬಳಿಕ ತನಗೆ ದೊರೆಯುವ ನೆತ್ತರಧಾರೆಗಾಗಿ ಬಾಯಿ ಚಪ್ಪರಿಸುತ್ತಿತ್ತು ಜಟ್ಗ!

ನಡುಹಗಲಿನಲ್ಲಿ ತೋಟದ ಗಡಿಪಾಗಾರದ ಹೊರಗೆ ನೆರಳಿನಲ್ಲಿ ಕುಳಿತು ತಾಸುಗಟ್ಟಲೆ ತಡೆದು ಕೊಂಚ ನಾಲಿಗೆಯ ಚಾಪಲ್ಯವನ್ನು ತೀರಿಸಿಕೊಳ್ಳುತ್ತಲಿದ್ದರು. ಯಂತ್ರದಂತೆ ಕೆಲಸ ನಡೆಯಿತು. ಒಂದು ಮಧ್ಯಾಹ್ನ ಸ್ವತಃ ಹನುಮ ಮುಂದಾಗಿ ಪಿಕಾಸು ಹಾಕುತ್ತಿದ್ದ. ಖಟ್ ಎಂದು ಪಿಕಾಸಿನ ಮೊನೆ ಸಪ್ಪಳ ಮಾಡಿತು. ಮತ್ತೆ ಅಗೆದ. ಒಂದು ಪಾತ್ರೆ! ಎಲ್ಲರೂ ಕೆಲಸ ಬಿಟ್ಟು ಸುತ್ತುಗಟ್ಟಿದರು. ಅಂಥ ಗಳಿಗೆಯಲ್ಲಿ ನಾಲಿಗೆಗೆ ಲಗಾಮು ಹಾಕುವದೆಂದರೆ ಹರೆಯದಲ್ಲಿ ಹರಿದಾಡುವ ಮನಸ್ಸನ್ನು ಬಿಗಿ ಹಿಡಿದಷ್ಟು ಕಠಿಣ. ಸನ್ನೆಯಿಂದ ಹನುಮ ಎಲ್ಲರಿಗೂ ತೋಟದ ಹೊರಗೆ ಹೋಗ ಹೇಳಿದ. ಇಬ್ಬರು ಮಾತ್ರ ಪಾತ್ರೆಯನ್ನು ಎಬ್ಬಿಸಲುಳಿದರು. ಏನೂ ಪೆಟ್ಟಾಗದಂತೆ ಅದನ್ನು ಹೊರತೆಗೆದರು. ಗಡಿಯ ಹೊರಗೆ ತಂದರೂ ಮುಚ್ಚಳ ತೆಗೆಯುವ ಧೈರ್ಯವಿಲ್ಲ. ಈಗ ಮಾತಾಡಬಹುದು. ಎಲ್ಲರೂ ಒಂದೊಂದು ಸೂಚನೆ ಮಾಡಿದರು. ಜಟ್ಗನಿಗೆ ಸಿಟ್ಟು ಬಂದಿತು. ಅಲ್ಲಿಯೇ

ಎಲ್ಲಿಯಾದರೂ ಹುಗಿದು ಬಿಡುವ ಎನ್ನುವವರು ಕೆಲವರು. ಜಟ್ಗನ ಗಂಟಾಗಿದ್ದರೆ ಅದಕ್ಕೆ ಸರ್ಪನ ಕಾವಲು ಇದ್ದೇಇರುತ್ತಿತ್ತು. ಆದ್ದರಿಂದ ನಾವೇ ಹಂಚಿಕೊಳ್ಳುವ ಎಂದರು ತರುಣರು. ಬೇರೆಯವರ ಹಣ ನಮಗೆ ದಕ್ಕದು. ಹೆಗ್ಡೇರ ತೋಟದಲ್ಲಿ ಸಿಕ್ಕಿದ ವಸ್ತು ಅವರಿಗೇ ಸಲ್ಲಿಸಿ ಬಿಡಬೇಕೆಂದು ಕೆಲವು ವಯಸ್ಸು ಹೋದವರ ಅಭಿಪ್ರಾಯ. ಇನ್ನೂ ಎಷ್ಟೋ ಅಂಬೋಣಗಳು ಗಟ್ಟಿಯಾಗಲು ಪ್ರಯತ್ನಿಸಿದವು ಮುಚ್ಚಳ ತೆಗೆಯುವ ಧೈರ್ಯಮಾತ್ರ ಯಾರಿಗೂ ಇರಲಿಲ್ಲ. ಅಲುಗಾಡಿಸಿ ನೋಡಿದರು. ನಾಣ್ಯಗಳ ಅವಾಜು! ಹನುಮನ ಹುಕುಂ ಆಯಿತು. ಚಿನ್ನದ ನೇವಾಳ, ಸರ, ನಾಣ್ಯಗಳು! ಮುಕರಿಗಳ ಕೈಯ್ಯಲ್ಲಿಯ ಪಾತ್ರೆ ಹೆಗ್ಡೆಯವರ ಮನೆಗೆ ಬರುವುದರೊಳಗಾಗಿ ಊರಲ್ಲೆಲ್ಲ ಗಂಟಿನ ಸುದ್ದಿ ಹಬ್ಬಿತು. ಜನರ ಬಾಯಲ್ಲಿ ಪಾತ್ರೆಯು ಕೊಡ ಖಜಾನೆಗಳಾದವು. ಹೆಗ್ಡೆಯವರ ಭಾಗ್ಯಕ್ಕಾಗಿ ಮತ್ಸರವುಂಟಾಯಿತು. ಎಲ್ಲೆಲ್ಲಿಯೂ ಹೆಣ್ಣು ಹುಟ್ಟಿದ ಹೆಗ್ಡೆಯವರ ಸುಪುತ್ರ ಚಿರಂಜೀವಿಗೆ ತಾನು ಮುಂದೆ ತಾಮುಂದೆ ಎಂದು ಕನ್ಯಾಪಿತೃಗಳು ಬಂದರು. ಒಂದೆರಡು ತಾಸಿನೊಳಗೆ ಹೀಗೆಲ್ಲ ಹಬ್ಬಿದ ವಾರ್ತೆ ಕೇಳಿ ಶಾನಭೋಗರೊಡನೆ ಪಟೇಲರು ಹೆಗ್ಡೆಯವರ ಮನೆಗೆ ಕಾಯಿದೆಗಾಗಿ ಬಂದರು. ಮಣ್ಣಿನಲ್ಲಿ ಸಿಕ್ಕಿದ ನಿಧಿ ಸರಕಾರಕ್ಕೆ ಸಲ್ಲತಕ್ಕದ್ದು ಎಂದು ಒಂದೇ ಕಲಂ ಬಜಾಯಿಸಿ ಪಾತ್ರೆಯನ್ನು ತಮ್ಮ ಮನೆಗೆ ಹೊರಿಸಿಕೊಂಡು ಹೋದರು.

"ನಮ್ಮೂರಿನಲ್ಲಿ ಸಿಕ್ಕಿದ ಹಣವನ್ನು ಸುಮ್ಮಸುಮ್ಮನೆ ಸರಕಾರದ ಹೊಟ್ಟೆಗೇಕೆ ಹಾಕುವದು? ಯಾರಿಗೂ ತಿಳಿಸದೇ ಈ ಧನವನ್ನು ಗ್ರಾಮ-ದೇವಸ್ಥಾನದ ಜೀರ್ಣೋದ್ಧಾರಕ್ಕೂ ಸಾಲೆಯ ದುರಸ್ತಿಗೂ ಬಳಸಿ ಬಿಡುವ" ಎಂದು ಕೆಲವು ಗ್ರಾಸ್ತರು ಸೂಚಿಸಿದರು. "ಕಾಯದೆಯಂತೇ ಆಗಬೇಕು. ನನ್ನ ಆಳಿಕೆಯಲ್ಲಿ ನಾನು ಕಾಯುದೆ ಮೀರಿ ಸರಕಾರಕ್ಕೆ ಎರಡು ಬಗೆದ ದಾಖಲಿಯೇ ಇಲ್ಲ." ಎಂದು ಪಟೇಲರು ತಮ್ಮ ನಿಶ್ಚಯವನ್ನೇ ಸಾರಿದರು. "ಒಡ್ಯಾ ಗಂಟು ನಮ್ಗೆ ಸಿಕ್ತು. ನಮ್ಗೇನಾದ್ರೂ........" ಎಂದು ವ್ಯರ್ಥವಾಗಿ ಮುಕರಿಗಳು ಬಾಯಿ ಬಿಟ್ಟರು. "ಅಬ್ಬಾ ಪಟೇಲರೆ! ಊರಿನ ಬಗ್ಗೆ ಅಭಿ-ಮಾನವೇ ಇಲ್ಲ. ಸರಕಾರ ಸರಕಾರ ಕಾಯ್ದೆ ... ಕಚೇರಿಗೆ ಈ ಗುಂಟು ಮುಟ್ಟುವುದರೊಳಗಾಗಿಯೋ........ಏನು ಮಾಡಿಯಾರು?" ಊರಿನ ತರುಣ

ಗ್ಯಾಸ್ತರ ರಕ್ತ ಕಾಯಿತು. “ ಪಟೇಲ್ರ ಹೆಳ್ಕ್ಯೇ ಯೋಗ್ಯ. ಸರ್ಕಾರದ ಹಣ ಸರ್ಕಾರಕ್ಕೇ ಸಲ್ಲೊ ” ಎನ್ನುವವರೂ ಇಲ್ಲದೆ ಇದ್ದಿಲ್ಲ. ಹೆಗ್ಡೆಯವರಿಗೆ ಪಟೇಲರ ಮೇಲೆ ಸಿಟ್ಟು. “ ಅಲ್ಲೇ ಇಟ್ಕೊಳ್ಳೇಕಾಗಿತ್ತು. ನಗ್ಗೆ ಕರ್ಯ್ಯಾಕಳ್ಸಿ ಗಂಟ್ಸಿಕ್ತ್ತು ಒಡ್ಯಾ ಅಂತ್ಹೇಳಿದ್ರೆ ಸವ್ ನಿಮ್ಮೊಳ್ಗೇ ಆಗ್ತ್ಹೋಗ್ತಿತ್ತು. ನಿಮ್ಗೆ ತಲ್ಯೇ ಇಲ್ಲ ” ಎಂದು ಮುಕರಿಗೆಲನ್ನೇ ಬಯ್ದರು. ಯ್ಯಾರಿಗೂ ತಿಳಿಸದೆ ತಮ್ಮೊಳಗೇ ಮುಗಿಸಿಬಿಡಬೇಕಿತ್ತೆಂದು ಹನುಮನಿಗೂ ಅನಿಸಿತು.

ಮರುದಿನವೇ ಪೋಲೀಸರು ಬಂದರು. ಮುಕರಿಗಳ ತಂಡವನ್ನೇ ಪಟೇಲರ ಅಂಗಳಕ್ಕೆ ಕರೆದರು. ಸಂಗತಿಯನ್ನೆಲ್ಲಾ ತಿಳಿದಮೇಲೆ “ ಇಷ್ಟು ತಂದು ಕೊಟ್ಟಿದ್ದೀರಿ. ಎಷ್ಟು ನಿಮ್ಮೊಳಗೇ ಬಚ್ಚಿಟ್ಟುಕೊಂಡಿದ್ದೀರಿ ? ” ಎಂದು ಸಬ್ ಇನ್‌ಸ್ಪೆಕ್ಟರ್ ಸಾಹೇಬರು ಪ್ರಶ್ನಿಸಿದರು. “ ಹೌದು ರಾಯರೆ. ಇಷ್ಟು ತಂದು ಕೊಟ್ಟವರು ಎಷ್ಟು ಅಡಗಿಸಿದ್ದಾರೋ ಏನೊ ಯೋಗ್ಯವಾಗಿ....ಬಾರಕೋಲು ಬಿದ್ದನಕ ಬಾಯಿ ಬಿಡುವ ಜಾತಿಯಲ್ಲ ಇದು. ”

ಎಷ್ಟೇ ತನ್ಕಿ ಮಾಡಿದರೂ ಹೆಚ್ಚಿನ ಸಂಗತಿ ಹೊರಡಲಿಲ್ಲ. ಸತ್ಯ ಅಷ್ಟೇ ಇರುವಾಗ ಮುಕರಿಗಳು ಏನು ಹೇಳಬೇಕು ? ಬೆತ್ತ ಬಾರಕೋಲುಗಳ ಬಲದಿಂದ ಇಲ್ಲದ ಸತ್ಯವನ್ನು ಹೊರಗೆಡುವಲು ಪೋಲೀಸರು ಬಗೆದರು. ಎಲ್ಲವರೂ ತೋಟಕ್ಕೆ ಹೋಗಿ ಹೊಸ ಮಣ್ಣಿದ್ದ ಜಾಗವನ್ನೆಲ್ಲ ಸಂಶಯದೃಷ್ಟಿಯಿಂದ ನೋಡಹತ್ತಿದರು. ಎಲ್ಲಿ ಅಡಗಿಸಿದ್ದೀರಿ ಎಂಬ ಪ್ರಶ್ನೆ ಮೇಲಿಂದ ಮೇಲೆ ಸುರಿಯಹತ್ತಿತು. “ ಜಟ್ಗನ ಸಾಕ್ಷ್ಯಾಗೂ ಒಂದ್ ರಾಗೀಕಾಳಷ್ಟನ್ನೂ ನಾವು ತೆಗೇಲಿಲ್ಲ ಒಡ್ಯಾ ” ಎಂದು ಮುಕರಿಗಳು ಕೈಮುಗಿದು ನುಡಿದರು. ಇನ್‌ಸ್ಪೆಕ್ಟರ ಸಾಹೇಬರ ಕಣ್ಣು ಕೆಂಪೇರಿತು. “ ಸತ್ಯ ಹೇಳುವದಿಲ್ಲವಲ್ಲ ?.... ” ಹುಕುಂ ಆಯಿತು. ಬಂದ ಆರೆಂಟು ಪೋಲೀಸರು ನೆರೆದ ಇಪ್ಪತ್ತೆಂಟು ಮುಕರಿಗಳ ಬೆನ್ನಿಗೆ ಎಸೆಯ ಹತ್ತಿದರು. ಗಂಡಸು ಹೆಂಗಸು ಎಂಬ ಭೇದ ನ್ಯಾಯಕ್ಕೆಲ್ಲಿ ? “ ಇಲ್ಲಾ ವೊಡ್ಯಾ. ದೇನ್ರಾಣೆ. ” ಎಂದು ಅಳಹತ್ತಿತು ತಂಡ. ಹನುಮನ ಬೆನ್ನಿಗೂ ಬಾರ ಬಿದ್ದಿತ್ತು;: ಕೇವಲ ಆರೆಂಟು ಪೋಲೀಸರು ಇಷ್ಟು ಮುಕರಿಗಳನ್ನು ಹೊಡೆಯುವದು, ಊರಿನ ಗೃಹಸ್ತರೆಲ್ಲ ಮಿಕಿಮಿಕಿ ನೋಡುವದಷ್ಟೇ ಅಲ್ಲ ಸರಕಾರದ ಪಕ್ಷಗಟ್ಟಿ ತಮ್ಮ ಮೇಲೆ ಅನ್ಯಾಯವಾಗಿ ಸಂಶಯ ಹುಟ್ಟಿಸುವದು ಅವನಿಗೆ ಸಹನೆಯಾಗಲಿಲ್ಲ.

ಕಣ್ಣನ್ನು ಒರೆಸಿಕೊಂಡು “ತಡೇರಿ. ನಾವು ದೇವ್ರಾಣೆ ಮಾಡಿ ಸತ್ಯಾ ಹೇಳ್ದ್ರೂ ನಮ್ಗೆಲ್ಲ ಹೀಗೆ ಹೊಡೇತೀರಿ........” ಮುಂದೆ ಏನೋ ಬಿರುಸು ನುಡಿಯುವವನಿದ್ದ. ಅಷ್ಟರಲ್ಲಿ ಪಟೇಲರು ಸನ್ನೆಯಿಂದ ಸುಮ್ಮನಿರಲು ಹೇಳಿದರು. ಹೊಡೆಯುವದು ತಕ್ಷಣ ಹೆಚ್ಚಾಯಿತು. “ನಿಮ್ಮಸತ್ಯ, ದೇವ್ರಾಣೆ ....ಓ ಹೊಹೋ....” ರಕ್ತ ಸುರಿಯಹತ್ತಿತು.

ಗುತ್ತಿಗೆಯ ಕೆಲಸ ಮುಗಿದ ದಿನ ಜಟ್ಗನಿಗೆ ಕೋಳಿಯ ರಕ್ತಧಾರೆ ಬೀಳುವದಿತ್ತು. ಅದಕ್ಕಾಗಿಯೇ ಅದು ಚಪ್ಪರಿಸುತ್ತಿತ್ತು. ಕೆಲಸ ಮುಗಿಯಲಿಲ್ಲ. ರಕ್ತ ಮಾತ್ರ ಬಿತ್ತು.

ಅಂದಿನಿಂದ ಹನುಮ ಕಾಣಿಸುವದಿಲ್ಲ; ತಂಡವೂ ಹರಿದು ಹೋಯಿತು.

# ಬರಿಗೈ

●

ಬೇಸಿಗೆ ಬಂದೊಡನೆಯೇ ನಮ್ಮ ಬ್ರಾಹ್ಮಣರ ಕೇರಿಯಲ್ಲಿಯೂ ಮೀನು ಸುಟ್ಟ ವಾಸನೆ ಏಳುತ್ತಿದೆ. "ನಾತ ಹಬ್ಬಿಸಿಬಿಟ್ಟರಿ, ಬಯಲಲ್ಲಾದರೂ ಸುಟ್ಟು ತರಬಾರದೇ?" ಎಂದು ಒಡೆಯರೆಲ್ಲಾ ಕೂಗಿಕೊಂಡರೂ ತೋಟದಲ್ಲಿ ಗಂಜಿಯ ಬೊಡ್ಡೆ ಏರಿಸಿದ ಅಂಬಿಗರು ಸಣ್ಣ ಮಕ್ಕಳು ಗೇರುಬೀಜ ಸುಡುವಂತೆ ಮೆಲ್ಲಗೆ ಮೀನು ಸುಡುತ್ತಾರೆ. "ಅವ್ರಿಗೇನು ಹೇಳ್ದಿ. ತುಪ್ಪ ಹಾಲು ಎಲ್ಲಾ ತಿಂತಾರೆ. ಬರೀ ಗಂಜಿ ಸುರ್ದು ನಾವಿರೋದ್ಹೇಗೆ? ಒಂದೆರ್ಡು ನಿಮ್ಮ ಚಂದಾವ್ನಿ (ಸಂಧ್ಯಾವನೆ) ಗೆ ಕೂತ್ಕೊಂಬ್ಹಾಂಗೆ ಮೂಗ್ಮುಚ್ಕೊಳ್ಬೇಕು" ಎಂದು ತಮ್ಮೊಳಗೇ ಗೊಣಗುಡುತ್ತಾರೆ. ಒಡೆಯ ಒಡತಿ ಯಾರೂ ವಿಶೇಷ ಲಕ್ಷ್ಯಗೊಡುವದಿಲ್ಲ. ಮೂರು ತಿಂಗಳು ಮೀನಿನ ವಾಸನೆ ತಪ್ಪಿದ್ದಲ್ಲವೆನ್ನುವದು ಅವರ ಅನುಭವದ ಸಂಗತಿ. "ಪಾಪ ಇಡೀದಿನ ಭತ್ತಮೆರೆಯೂದಂದ್ರೆ ಸಣ್ಣ ಕೆಲಸ್ವಾ? ಬರೀ ಗಂಜಿ ಸುರ್ದು ಬದ್ಕೂದಾದ್ರೂ ಬೆಡ್ವೇ?" ಎಂದು ಕರುಣೆ ತೋರಿಸುತ್ತಾರೆ. ಅಷ್ಟು ಪುಣ್ಯವಂತ ಭಟ್ಟರು ಮಾತ್ರ "ಈವೊತ್ತು ಮೀನ್ದ್ ವಾಸ್ನೆ ಯೇಳ್ಸ್ಬೇಡಿ. ತಣ್ಣೆ ಅನ್ಧ ತಂಬ್ಳಿ ಕೊಡ್ತ್ರುಉಣ್ಣಿ. ಸಂಜೀಕಡೀಗೆ ಬಗೀಕೆ ಎಮ್ಮೆ ಮೈ ತೊಳೆಸ್ಕೊಟ್ಬುಡಿ." ಎಂದು ಹೇಳಿ ಸ್ವಾರ್ಥ ಪರಾರ್ಥಗಳೆರಡನ್ನೂ ಸಾಧಿಸಿಕೊಳ್ಳುತ್ತಾರೆ. ಇನ್ನು ಶ್ರಾರ್ಧ ಗೀರ್ಧ ಇದ್ದರಂತೂ ಅವರು ಮೀನಿನ — ಅಂಬಲಿಯ — ಸುದ್ದಿಗೇ ಹೋಗುವದಿಲ್ಲ. ಆ ಹೊತ್ತು ಒಡೆಯರ ಮನೆಯಲ್ಲಿ ತಮಗೆ ಊಟವೂ ಇದೆ ಸಂಜೆಗೆ ಮುಸುರೆ ತಿಕ್ಕುವ ಕೆಲಸವೂ ಇದೆಯೆನ್ನುವದನ್ನು ಅವರು ಬಲ್ಲರು. ನೆಂಟಿಷ್ಟರು ಬಂದಿದ್ದಾರೆ. ಅವರ ಮೂಗಿಗೂ ಮೀನಿನ ಕಂಪು ಸೋಂಕುವದೇಕೆಂದು ಯಜಮಾನನು ಹೆಚ್ಚಾಗಿ ಬಾಯಿಮಾಡಿದರೆ "ನಾವು ಚೆಂಜೀಕಡೀಗೆ ಹಾಡುಗೀಡು ಹೇಳಿ, ಅಂದ್ರೆ ಹೇಳ್ವಾಂಗಿಲ್ಲ" ಎಂದು ಮೆತ್ತಗಿನ ಮಾತಿನಲ್ಲಿಯೇ ಮುಗಿಸಿ ಬಿಡುತ್ತಾರೆ.

ನಮ್ಮ ಮನೆಯ ಭತ್ತ ಕುಟ್ಟುವವರು ನಮ್ಮ ಒಕ್ಕಲೇ. ನಾವು ಅಂಬಿಗ ಮಕ್ಕಳಿಂದ ಭತ್ತ ಮೆರಿಸುವದಿಲ್ಲ. ನಮ್ಮ ಕಣಜವೂ ಅಷ್ಟರದೇ. ನಾಲ್ಕಾರು ಹೆಣ್ಣಾಳು ಬಂದು ಹತ್ತೆಂಟು ದಿನ ಒಣಕೆ ಹಾಕಿದರೆ ಆಯಿತು. ನಮ್ಮ ನೆರ ಮನೆಯ ಸುಬ್ಬಾಭಟ್ಟರು ಮಾತ್ರ ಮೂರು ತಿಂಗಳು ಭತ್ತ ಮೆರಿಸುತ್ತಾರೆ. ಈ ಸಲ ಮಾಡಿದ ಅಕ್ಕಿಯನ್ನು ಅವರು ಇದೇ ವರ್ಷ ಬಳಸುವಂತಿಲ್ಲ. 'ಹಳ್ಳಕ್ಕಿ' ದೇಹಕ್ಕೆ ಹಿತ ಅಂತ ಭಟ್ಟರ ತಾಯಿ ವೆಂಕಮ್ಮ ಸುಗ್ಗಿಯ ಕಾಲದಲ್ಲೆಲ್ಲ ಹೇಳುತ್ತಾಳೆ. ಅವರ ಮನೆಗೆ ಅಂಬಿಗರು ಬಂದು ಅಕ್ಕಿಯ ಕಣಜ ತುಂಬಿಕೊಟ್ಟು ಹೋಗುವ ಪದ್ಧತಿ ಇತ್ತೀತ್ತಣದಲ್ಲ. ವೆಂಕಮ್ಮನ ಮದುವೆಯ ವರ್ಷದಿಂದಲೂ ನಡೆದು ಬಂದದ್ದು.

ತೀರ ಇತ್ತೀತ್ತ — ಅಂದರೆ ಎರಡನೆಯ ಮದುವೆಯಾದಂದಿನಿಂದ "ಈ ಅಂಬಿಗರು ಮೂರು ತಿಂಗಳು ಕೂಡಿ ಮಾಡುವ ಕೆಲಸವನ್ನು ಒಂದೇ ದಿನದಲ್ಲಿ ಮಾಡಿಸಬಹುದು. ಗಾಡಿಯ ಮೇಲೆ ಭತ್ತ ಹಾಕಿಸಿಕೊಂಡು ಕುಮಟೆಯ ಗಿರಣಿಗೆ ಹೋದರೆ" ಎಂದು ಭಟ್ಟರು ತಾಯಿಯೊಡನೆ ವಾದಿಸಿದ್ದುಂಟು. "ಯನ್ಗೆ ಬೇಡಪ್ಪಾ ಆ ಗಿರ್ಣೀ ಮ್ಯಾಲ್ಗೇ ಅಕ್ಕಿ. ಮನೇಲಿ ಮಕ್ಕೊ ಮರಿ ಯಾರೂ ಇಲ್ಲೆ. ಮೂರ್ತಿಂಗ್ಳ ಜಟ್ಟು, ಬೊಬ್ಬ ಅಂಗ್ಳದಲ್ಲಿದ್ರೆ ಎಷ್ಟೋ ಚಂದ. ಯನ್ಮದ್ವೆ ಆದಲಾಗಾಯ್ತೂ ಅಂಬಿಗ್ರಮಕ್ಳಿಂದ್ಲೇ ಮೆರೀಸ್ಕಂಡು ಬಂದೆ. ಈಗ ನೀ ಬೇಕಾದ್ ಮಾಡ್ಕೊ. ಸಿನ್ನಿಂದ್ಲಿ ನೀನು ನೋಡ್ಕಳಿ. ನನ್ಗೆಂತಕ್ಕೆ ಕಾರ್ಬಾರ? ಯೆಂಭತ್ವರ್ಷಾತು. ಇನ್ನೊಂದಿಷ್ಟ್ ದಿನ ಕಾಲಾ ಹಾಕ್ದ್ರೆ ಆತು...." ಹಗಲೂ ರಾತ್ರೆ ಒಂದೇ ಸವನೆ ವಟಗುಡುತ್ತಾಳೆ ವೆಂಕಮ್ಮ. ಹೆಂಡತಿಯು ಒತ್ತಾಯ ಮಾಡಿದರೂ ಮನೆಮಾರು ಮಾಡಿದ ಬಾಳೆ-ಗದ್ದೆ ಬೇಯಿಸಿ ತಿಂದು ಗಂಡನೊಡನೆ ದುಡಿದು ಮನೆ ತೋಟ ಎಲ್ಲಾ ಮಾಡಿದ ಎಂಬತ್ತು ವರ್ಷದ ತಾಯಿಯ ಮನಸ್ಸು ನೋಯಿಸಲಿಕ್ಕೆ ಭಟ್ಟರೂ ತಯಾರಿಲ್ಲ. ಆದರೆ ಈ ಸಿಟ್ಟನ್ನು ಭತ್ತ ಮೆರೆಯುವ ಜಟ್ಟು ಬೊಬ್ಬರ ಮೇಲೆ ಹಾಯಿಸುತ್ತಾರೆ. ಅವರು ತಣ್ಣೆತಿಳಿ, ತಂಗಳು ತಂಬಳಿ, ಉಪ್ಪಿನಕಾಯಿಯ ಚೂರು ಕೇಳಿದರೆ ತೀರಿತು. ಅಡಿಗೆ ಮನೆಯಲ್ಲಿ ಬೆಂಕಿಗೆ ಉಪ್ಪು ಹಾಕಿದಂತೆ ಭಟ್ಟರ ಹೆಂಡತಿಯ ಮಾತು ಸಿಡಿಯುತ್ತದೆ. "ಒಂದು ಸಣ್ಣ ಕೆಲಸ ಮಾಡಿಕೊಡುವ್ವಾಂಗಿಲ್ಲ. ಮಜ್ಗೆ ಉಪ್ಪು ಕೊಟ್ಟ್ರೆ ಸಾಕಾತು" ಎಂದು ತಮ್ಮ ಮೂರೆತ್ತೆಯ

ಜ್ಞಾನದ ಕನ್ನಡದಲ್ಲಿ ಶುದ್ಧವಾಗಿ ಬಯ್ಯುತ್ತಾಳೆ. ಪರಮೇಶ್ರಿ ತನ್ನ ಬೈಗಳು ವೆಂಕಮ್ಮನಿಗೆ ಕೇಳದಂತೆಯೂ ಲಕ್ಷ್ಯತೆಗೆದುಕೊಳ್ಳುತ್ತಾಳೆ. ಅತ್ತೆಗೆ ತಿಳಿದರೆ ತೀರಿತು ಕಾಗೆ ಕಾಯುವದು, ಅಕ್ಕಿ ಅಳೆಯಿಸಿಕೊಂಡು ಕಣಜಕ್ಕೆ ಹಾಕಿಸುವದು, ಎಮ್ಮೆ ಮೈ ತೊಳೆಯುವದು ಎಲ್ಲ ತನ್ನ ಮೇಲೇ ಬರುವದೆಂಬ ಭಯ ಅವಳಿಗೆ. ಮತ್ತೆ ಪಟಪಟ ಬೇರೆ. ಮಕ್ಕಳಿಲ್ಲದೆ ಕೊರಗುವ ಗಂಡನಿಗೆ ಮುದಿ ತಾಯಿಯಿಂದ ಮನನೊಂದ ಮಾತು ತಾಗಿಸುವ ಕಾರಣಳಾಗುತ್ತೇನೆಂಬ ಹೆದರಿಕೆ.

ಜಟ್ಟು ಚಿಕ್ಕವಳು. ಅಣ್ಣನೊಡನೆ ಭತ್ತ ಕುಟ್ಟಲು ಬರುತ್ತಾಳೆ. ವೆಂಕಮ್ಮನೆಂದರೆ ಅವಳಿಗೆ ಜೀವ. ವೆಂಕಮ್ಮನಿಗೂ ಹಾಗೇ. ಏಕಾದಶಿಯ ರಾತ್ರಿ ಸೀಯಾಳದ ನೀರಿನಲ್ಲಿ ಮುಸುರೆಯಾಗದಂತೆ ಮಾಡಿದ ದೋಸೆಯ ಚೂರನ್ನೂ ಜಟ್ಟುಗೆ ಕೊಟ್ಟನಕ ಅವಳಿಗೆ ತೃಪ್ತಿಯಿಲ್ಲ. ಜಟ್ಟು ಭತ್ತ ಬಾಡಿಸುವಾಗ ವೆಂಕಮ್ಮನೂ ಬರುತ್ತಾಳೆ. ಪರಗಿದ ಭತ್ತದ ಮೇಲೆ ಕೈ ಆಡಿಸುತ್ತಾಳೆ. ತನ್ನ ಅನುಭವವನ್ನೆಲ್ಲ ಜಟ್ಟುಗೆ ಹೇಳುತ್ತಾಳೆ. ಎಲ್ಲದಕ್ಕೂ ಹೆಚ್ಚಿನದೆಂದರೆ ಅವರ್‍ಮ ಹಾಡಿನ ಸ್ಪರ್ಧೆ. ಸಂಜೆಯಮುಂದೆ ಮುದುಕಿ ತುಳಸಿಕಟ್ಟೆಯೆದುರು ಕಾಲು ನೀಡಿ ಕುಳಿತು ಗೋವಿನ ಕತೆ ಹೇಳಿದರೆ ಜಟ್ಟು "ಕೇಳ್‌ಕೇಳ್ ಕನ್ನಡಿ" ಎಂಬ ಉದ್ದ ಹಾಡು ಹೇಳುತ್ತಾಳೆ. ಬೊಬ್ಬನೂ ಒಮ್ಮೊಮ್ಮೆ ಈ ಪರಿಷತ್ತಿಗೆ ಬರುತ್ತಾನೆ. ಅವನಿಗೆ ತನ್ನ ತಂಗಿ ಮತ್ತು ವೆಂಕಮ್ಮರು ಹಾಗೆ ಚಿಕ್ಕಂದವಾಗಿರುವದನ್ನು ಕಂಡು ಹಿಡಿಸಲಾರದ ಆನಂದ. ತಂದೆ ತಾಯಿಗಳಿಲ್ಲದ ಬಡ ತಂಗಿಯನ್ನು ಅಂಥಾ ಹಾಗಲು ಹಣ್ಣು ಮುದುಕಿ ತನ್ನ ಕೂಸಿನಂತೆ ಕಾಣುತ್ತಾಳಲ್ಲಾ ಎಂದು ಹಿಗ್ಗುತ್ತಾನೆ.

"ಭತ್ತಾ ಮೆರೂ ಹೆಣ್ಣೆ
ನಿನ್ನಪ್ಪ ಮಲ್ಲಿ ಪ್ರಸ್ತ
ಕರೂಕ್ ಬಂದವ್ ಯಾರೇ ?
—ಕರ್ಕೀ ಶಂಕರಭಟ್ಟ."

ಎಂದು ಬೊಬ್ಬ ಅವರ ಬಳಿಗೆ ಕುಳಿತರೆ ಹಗಲೆಲ್ಲ ಭತ್ತಕುಟ್ಟಿದ ದಣಿವಿನ ಪರಿವೆಯಿಲ್ಲದೆ ಜಟ್ಟು ಆಕಳಿಸುವವರೆಗೂ ಹೊತ್ತು ಹೋಗುತ್ತದೆ.

ಹಳ್ಳಿಯ ಹಾಡುಗಳನ್ನು ಕೂಡಿಸಬೇಕೆಂದು ರಜೆಯಲ್ಲಿ ಬಂದ ನನಗೆ

ಜಟ್ಟು ವೆಂಕಮ್ಮರ ಹಾಡು ಕಿವಿ ಉದ್ದ ಮಾಡಿಸಿದವು. ಕೇಳುತ್ತಿದ್ದಾಗ ಬರೆಯಲಾಗಲಿಲ್ಲ. ಹಾಡು ಮುಗಿದಮೇಲೆ ಅದರ ಧ್ವನಿ, ರಾಗ ಮಾತ್ರ ಉಳಿದು ಶಬ್ದಗಳೆಲ್ಲ ಹಾರಿಹೋದವು. ವೆಂಕಮ್ಮನ ಹಾಡಂತೂ ಬರೀ ರಾಗಗಳ ಎಳೆತ.

ಅಣ್ಣಽಯ್ಯ ಬಂಽದಾಽಽನೆಂದುಽ
ಹಣ್ಣ(ಽವ ತಂಽಽದಾಳೆ—ಇತ್ಯಾದಿ

ಬಡತಂಗಿ ತನ್ನ ಮನೆಗೆ ಬಂದ ಶ್ರೀಮಂತ ಅಣ್ಣನಿಗೆ ಹುಳಿಮಾವಿನ ಹಣ್ಣಿನರಸ ಒಣಗಿಸಿ ಮಾಡಿದ 'ಹಣ್ಣಾವು' ತಂದು ಕೊಡುತ್ತಾಳೆ. ಬಹಳ ಸೀಯಿದೆಯೆಂದು ಅಣ್ಣ ತಿನ್ನುತ್ತಾನೆ. ವೆಂಕಮ್ಮನಿಗೆ ಈ ಹಾಡು ಮತ್ತೆ ಹಾಡೆಂದು ಕೇಳಿಕೊಂಡೆ. 'ನಾಳಿಗೆ' ಎಂದು ಮುಂದೆ ಹಾಕಿದಳು. ಜಟ್ಟುವಿನ "ಕೇಳ್‌ಕೇಳ್ ಕನ್ನಡಿ" ಅಂತೂ ಜೋಮಾಲೆ. ಎಷ್ಟು ಪ್ರಯತ್ನಪಟ್ಟರೂ ಬರೆದುಕೊಳ್ಳಲಾಗಲಿಲ್ಲ, ಜಟ್ಟು ನಾನು ಕೇಳಿದಾಗ ನಾಚಿದಳು. ವೆಂಕಮ್ಮನ ವಕೀಲಿಯೂ ಫಲಿಸಲಿಲ್ಲ. "ಇತ್ತಿತ್ತಿ ನಮ್ಹಾಡೆಲ್ಲಾ ತಕೊಂಡೇ ನ್ಮಾಡೂದ್ರ ವೆಂಕಮ್ಮ" ಎಂದು ಜಟ್ಟು ಜಾರಿಬಿಡುತ್ತಾಳೆ. ಇನ್ನೂ ಕಾಡಿದರೆ ಆವಳು ವೆಂಕಮ್ಮನಿಗೂ ಹೇಳಲಿಕ್ಕಿಲ್ಲ, ನನಗೆ ಕೇಳಲೂ ಬಾರದಂತಾದೀತು ಎಂಬ ಸಂಶಯ ಜಟ್ಟುವಿನ ವಿಚಿತ್ರ ನೋಟದಲ್ಲಿ ಮೂಡಹತ್ತಿತು.

ಹೆಹೆ ಇದು ಭತ್ತ ಮೆರಿಯುವಾಗ ನೋಡಬೇಕು ಜಟ್ಟುವನ್ನು. ಅಣ್ಣ ತಂಗಿ ಒಂದೇಸಮನೆ ಕುಟ್ಟುತ್ತಾರೆ. ನಾನು ನಮ್ಮ ಮನೆಯ ಹಕ್ಕೆ ಹೊಳ್ಳಿಯ ಮೇಲೆ ಕುಳಿತು ಕಿಡಿಕಿಯಿಂದ ಜಟ್ಟುವನ್ನೇ ನೋಡುವದು ಅವಳಿಗೆ ತಿಳಿಯಿತು. ಹಾಡಿನ ಸೊಲ್ಲೂ ಕೇಳದಂತಾದವು. ಹೆಹೆ ಎಂಬ ಉಸಿರುಬಿಡುವ ಧಾಟಿ ಸಹ ಕುಗ್ಗ ಹತ್ತಿತು. ಹೀಗೆ ಉಸಿರು ಕಟ್ಟಿದಂತಾಗಿ ಆವಳು ಬೇಗನೆ ದಣಿಯಹತ್ತಿದಳು. "ಯೇನೇ ಜಟ್ಟು ಮುದ್ಕಿ ಆದ್ಯ? ಯೇನು ಹಳ್ಗಿನ್ ಹಳ್ಳ" ಎಂದು ಜೊಬ್ಬ ಕೇಳಹತ್ತಿದ.

ಹಳ್ಳಿಯ ಹಾಡನ್ನು ಕೂಡಿಸುವವನ್ನು ಮರೆತು ಹೀಗೆ ಕೆಲವು ದಿವಸಗಳನ್ನು ಕಳೆದೆ. ಹಾಡನ್ನು ಕೇಳಿದಾಗ ಬರೆದುಕೊಳ್ಳಲಾಗಲಿಲ್ಲ. ಹಾಡುವವಳನ್ನೇ ಕಾಣುವಾಗ ಕೇಳುವದು ಬೇಕೆನಿಸಿಲ್ಲ.

ಭಟ್ಟರ ತಂಗಿಯ ಮನೆಯಲ್ಲಿ ಮದುವೆಯೆಂದು ನೆಂಟರನ್ನು ಕರೆದೊಯ್ಯಲು ವೆಂಕಮ್ಮನಿಗಾಗಿಯೇ ಇಸ್ಪೆಶಲ್ಲಾಗಿ ಒಂದು ಗಾಡಿ ಬಂತು.

ಎಂಭತ್ತು ವರ್ಷವಾದರೂ ವೆಂಕಮ್ಮನ ಉತ್ಸಾಹ ಕುಂದಬೇಕಲ್ಲ. ತಯಾರಾದಳು ಮದುವೆಗೆ ಹೋಗಲಿಕ್ಕೆ. ''ವೆಂಕಮ್ಮ, ನೀವು ಹೋದ್ರೆ ನಮ್ಗೆ ಇಲ್ಲಿ ಹೇಗೆ ದಿವ್ಸ ಹೋಗ್ಬೇಕು ?" ಎಂದು ಜಟ್ಟು ಕುಯ್‌ಗುಡಹತ್ತಿದಳು. ''ನೀನೂ ಬತ್ಯಾ ಹಾಗಾರೆ ?" ''ಈ ಹರ್ಕ ಶೀರಿ...." ಜಟ್ಟುವಿನ ಮಾತು ಮುಗಿಯುವುದರೊಳಗಾಗಿ ವೆಂಕಮ್ಮ ತನ್ನ ತಲೆಗಿಂಬಿನಿಂದ ತನ್ನ ಮುತ್ತೈದೆತನದ ಕಾಲದೊಂದು ಸೀರೆಯನ್ನು ತಂದು ಕೊಟ್ಟಳು. ಮೇಲಾಗಿ ಒಂದೆರಡು ದಿನಗಳ ಮಾತಿಗೆ ಒಂದು ಸಣ್ಣ ಸರವನ್ನೂ ಕೊಡೆಂದು ಸೊಸೆಗೆ ಹೇಳಿದಳು. ಒಟ್ಟು ಸಿಂಗಾರಾಗಿ ಗಾಡಿಯ ಮೂಕಿನ ಮೇಲೆ ಕುಳಿತಳು. "ಥೇಟು ಮದ್ಮಗ್ಳು !........ಜಟ್ಟೂ, ಉಂಡಿ, ಪಂಚ್ಕಜ್ಜಾಯಿ ತರೂಕೆ ಮರೀಬೇಡ ಹ್ವಾ ?" ಎಂದು ಬೊಬ್ಬ ಗಾಡಿ ಹೋದ ದಾರಿಯನ್ನೇ ನೋಡುತ್ತ ನಿಂತಾಗ ''ಎಮ್ಮೆ ಮೈತೊಳ್ಳೀ" ಎಂದು ಪರಮೇಶ್ರಿ ಕೂಗಿದಳು. ಮನೆ ಬಿಟ್ಟು ಮದುವೆಗೆ ಹೋಗುವದು ಅವಳಿಗೆ ಅಸಾಧ್ಯವೆನಿಸಿತ್ತು. ಮೇಲಾಗಿ ಮಕ್ಕಳಿಲ್ಲೆಂಬ ಕೊರಗು.

ಜಟ್ಟು ಬರುವವರೆಗೂ ಬೊಬ್ಬ ಒಬ್ಬನೇ ಭತ್ತ ಮೆರಿದ. ನನಗೂ ಅಷ್ಟು ದಿನ ಮಳೆಗಾಲದಂತೆ ಬೇಸರವಾಯಿತು,

ಜಟ್ಟು ಇಲ್ಲದಿದ್ದಾಗ ಅವಳ ಅತ್ತಿಗೆ ಮಕ್ಕಳೊಡನೆ ಬಂದಿದ್ದಳು. ನಾಲ್ಕಾರು ತರದ ಮೀನು ತಂದಿದ್ದಳು. ಬೊಬ್ಬ ಭತ್ತ ಮೆರಿಯುವದಕ್ಕೆ ಎರಡು ದಿನ ರಜ ತೆಗೆದುಕೊಂಡ. ಪರಮೇಶ್ರಿಗೆ ಇದು ಸರಿಬರಲಿಲ್ಲ. ಅದೂ ಅಲ್ಲದೆ ಮಕ್ಕಳಿಗೆ ಹಪ್ಪಳ, ಕಾಯಿಬಾಗ, ಬೆಲ್ಲ ಬೇಡುವಾಗಂತೂ ಬೊಬ್ಬನನ್ನು ಸುಡುಗಣ್ಣಿನಿಂದ ನೋಡುತ್ತಿದ್ದಳು. ಆದರೂ ಬೊಬ್ಬನ ಹೆಂಡತಿಯು ಬಂದ ಉಪಯೋಗ ಇವಳು ತೆಗೆದುಕೊಳ್ಳದೆ ಬಿಡಲಿಲ್ಲ. ಹಿತ್ತಲ ಅಂಗಳಿಗೆ ಸಗಣಿ, ಹಿತ್ತಲೋಳಿಗೆ ನೀರು ಕಾಣಿಸಿದಳು. ತನ್ನ ಹೆಂಡತಿಗೂ ಕೆಲಸ ಹೇಳುತ್ತಾರಲ್ಲ ಎಂದು ಬೊಬ್ಬನೊಂದುಕೊಂಡರೂ ಮಕ್ಕಳಿಗಾಗಿ ಬೇಡಿದ ಹಪ್ಪಳ, ಕೊಬ್ಬರಿಗಳನ್ನು ನೋಡಿ ಸುಮ್ಮನಿರಬೇಕಾಯಿತು. ಜಟ್ಟು ಬಂದಳು. ವೆಂಕಮ್ಮನಿಗೆ ಗಾಡಿಯ ಪ್ರಯಾಣ ಮದುವೆ ಮನೆಯ ಗೊಂದಲಗಳಿಂದ ಮೈನೋವಾದ್ದರಿಂದ ಅವಳು ನೆಂಟರ ಮನೆಯಲ್ಲಿಯೇ ಉಳಿದಳು. ಭಟ್ಟರ ತೋಟದಲ್ಲಿ ಅಂಬಿಗರ ಮೇಜವಾನಿ ಆಯಿತು. ಜಟ್ಟು ತಂದ ಉಂಡಿ, ಪಂಚ

ಕಜ್ಜಾಯ, ಬೊಬ್ಬನ ಹೆಂಡತಿ ತಂದ ಮೀನ, ಮಕ್ಕಳಿಗಾಗಿ ಬೇಡಿದ ಹಪ್ಪಳ ಸ್ವತಃ ಬೊಬ್ಬ ಸಾಹಸಮಾಡಿ ತಂದ ಎರಡು ಏಡಿ,—ಅವರ ಮಜ ಅವರಿಗೇ ಗೊತ್ತು.

ಎರಡು ದಿನ ಉಳಿದು ಬೊಬ್ಬನ ಹೆಂಡತಿ ಮಕ್ಕಳೊಡನೆ ಮರಳಿದಳು. ಬರುವ ಪಂಚಮಿಗೆ ಅಕ್ಕಿ ತರುತ್ತೇವೆ. ದೋಸೆ, ರೊಟ್ಟಿ ಮಾಡಬೇಕು. ದಾರಿ ಕಾಯುತ್ತಿರಿ ಎಂದು ಹೆಂಡತಿಗೆ ಹೇಳಿ ಕಳುಹಿಸಿದ ಬೊಬ್ಬ.

ವೆಂಕಮ್ಮ ಬರಲಿಲ್ಲ. ಪರಮೇಶ್ರಿಯೇ ಒಡತಿ. ಭಟ್ಟರೆಲ್ಲಿ ಮನೆಯಲ್ಲಿರುತ್ತಾರೆ? ಹಗಲೆಲ್ಲಾ ತಿರುಗಾಟ.

ಮತ್ತೆ ಹಕ್ಕಿ ಹೊಳ್ಳಿಯ ಮೇಲೆ ಕುಳಿತುಕೊಳ್ಳಹತ್ತಿದೆ. ದಿನೇದಿನೇ ಜಟ್ಟುವಿನ ಒಣಕೆ ತಪ್ಪಹತ್ತಿತು. ಒಂದು ದಿನವಂತೂ ತನ್ನ ಕಾಲಿಗೆ ಒಣಕೆ ಹಾಯಿಸಿಕೊಳ್ಳುವವಳಿದ್ದಳು. ನಾನೆಲ್ಲಿ ಕಂಡೆನೋ ಎಂದು ಅವಳು ಇತ್ತ ನೋಡಿದಾಗ ನನಗೆ ಅನಿಸಿದುದೇ ಅವಳಿಗೂ ಅನಿಸಿರಬೇಕೆಂದು ತೋರಿತು.

ಬೊಬ್ಬನಿಗೆ ಜಟ್ಟುವಿನ ಒಣಕೆ ತಪ್ಪುವುದರ ಕಾರಣ ತಿಳಿಯಲಿಲ್ಲ. ಅವನು ಮೆರಿಯುವದು ನಮ್ಮ ಮನೆಗೆ ಬೆನ್ನು ಮಾಡಿ. ಜಟ್ಟು ಅವನೆದುರು. ಅಕ್ಕಿ ಕಡಿಯಹತ್ತಿತು. ಒಣಕೆಯ ದೋಷವಿರಬಹುದೆಂದು. ಬೊಬ್ಬ ತಂಗಿಗೆ ಬೇರೊಂದು ಹಗುರು ಒಣಕೆ ಕೊಟ್ಟ. ಅಕ್ಕಿ ನುಚ್ಚಾಗುವದು ನಿಲ್ಲಲಿಲ್ಲ. 'ಒಳ್ಳ'ಬಾಯಿಯೂ ಮುಕ್ಕಾಯಿತು. "ಹೀಂಗ್ಯಾಕೆ ಜಟ್ಟು? ನೀನು ಇಚೀಗೆ ನಿಂತು ಮೆರಿ ನೋಡ್ವ" ಎಂದು ಸ್ಥಳ ಬದಲಿಸಿದ. ಜಟ್ಟುವಿಗೆ ಬೇರೆ ಒಣಕೆ ಬೇರೆ ಜಾಗ ಹೀಗಾಗಿ ಮೆರಿಯಲೇ ಆಗಲಿಲ್ಲ.

ಭತ್ತ ನುಚ್ಚಾದರೆ ಕೇಳಬೇಕೇ? "ಸಾಕು. ನಿಮ್ಮ ಭತ್ತ ಮೆರ್ಯಾಣ ಸಾಕ್ರೋ ಸಾಕು. ಅಕ್ಕಿಯೋ ನುಚ್ಚೋ ನೀವು ಮಾಡೂದು?" ಎಂದು ಪರಮೇಶ್ರಿ ಗದರಿಸಿದಳು. ಬೊಬ್ಬ ತಂಗಿಯನ್ನು ಬಯ್ಯಹತ್ತಿದ "ಸುಬ್ಬಮ್ಮ ಇಲ್ಲ. ನಂಗೆ ಈ ಒಡ್ತೀರ್ ಕಂಡ್ರೆ ಹೆದ್ರ್‌ಕೆ" ಎಂಗು ಜಟ್ಟು ಸಣ್ಣ ಮೋರೆ ಮಾಡಿದಳು. ವೆಂಕಮ್ಮ ಬರುವವರೆಗೆ ಭತ್ತ ಮೆರಿಯಬಾರದೆಂದು ಅವಳು ಸೂಚಿಸಿದಳು. "ಹಾಗಾದ್ರೆ ಮನೇಗಾದ್ರೂ ಹೋಗ್ಬರ್ವ" ಅಂದ ಬೊಬ್ಬ. ಹು ಅನ್ನುವಾಗ ಜಟ್ಟು ಇತ್ತಕಡೆಗೆ ನೋಡದೆ ಹೋಗಲಿಲ್ಲ.

"ವೆಂಕಮ್ಮ ಯಾವಾಗ್‌ಬರ್ತಾರ್ರೀ?"

“ನಿಮ್ಗೆಂತಕ್ಕೋ ಅದು? ಅವ್ರು ಬರೂದೇ ಇಲ್ಲ. ಏನ್ಮಾಡ್ತ್ರಿ?

ಭತ್ತ ಕುಟ್ಟುವದು ಬೇಡವೆಂದು ಪರಮೇಶ್ರಿ ಕಣಜದ ಕೋಣೆಗೆ ಕೀಲಿ ಹಾಕಿದಳು. ಹಾಗಾದರೆ ತಾವು ಊರಿಗೆ ಹೋಗಿ ಬರುತ್ತೇವೆಂದು ತಮ್ಮ ಗಳಿಕೆಯ ಅಕ್ಕಿ ಕೊಡಲು ಕೇಳಿದರು, ಅವರು ಸಂಪಾದಿಸಿದ ಅಕ್ಕಿ ಭಟ್ಟರ ಮನೆಯೊಳಗೇ ಇತ್ತು. “ಅಕ್ಕೀ ಎಲ್ಲಾ ನುಚ್ಚಾಡ್ಬುಟ್ರೆ ಯಾರು ಕೊಡ್ಬೇಕು ಲುಕ್ಸಾನು? ವೆಂಕಮ್ನೇ ಬರ್ಲಿ. ನಾನೇನೂ ಅಕ್ಕಿ ಕೊಡೂದಿಲ್ಲ” ಎಂದು ಬಿಟ್ಟಳು ಪರಮೇಶ್ರಿ.

ವೆಂಕಮ್ಮ ಬಂದಮೇಲೆಯೇ ಅಕ್ಕಿ ತೆಗೆದುಕೊಳ್ಳುವ ಎಂದು ಬೊಬ್ಬ ತಂಗಿಗೆ ಹೊರಡಲು ಹೇಳಿದ. ಜಟ್ಟು ಬರಿಗೈಯಿಂದ ಹೋಗಲು ಸಿದ್ಧಳಾಗಲಿಲ್ಲ. ಅತ್ತಿಗೆಯ ಮಕ್ಕಳು ತಮ್ಮದಾರಿ ಕಾಯುತ್ತಿರುತ್ತಾರೆ. ಅನ್ನ ರೊಟ್ಟಿಗಾಗಿ ಬಾಯಿ ಚಪ್ಪರಿಸುತ್ತಿರುತ್ತಾರೆ. ಎಂದು ಅವಳು “ಬರೀ ಕೈಲಿ ಹೋಗೂದ? ನಿನ್ಮಕ್ಳು ಹೋದ್ಕೂಡ್ಲೇ ನಿನ್ನೇ ತಿಂಬೂದ?” ಅಕ್ಕಿಯನ್ನು ಹೇಗಾದರೂ ಒಯ್ಯಲೇಬೇಕೆಂದು ಅವಳ ನಿಶ್ಚಯ. ಬೊಬ್ಬ ಒಡತಿಗೆ “ಒಂದೆರ್ಡು ಶಿದ್ದೇನಾದ್ರೂ ಕೊಡಿ.” ಎಂದು ಬೇಡಿದ. “ಶಿದ್ದೇ ಬಿಟ್ಟು ಅಕ್ಕಿ ಕಾಳ್ನೂ ನಾ ಕೊಡೂದಿಲ್ಲ. ನಿಮ್ಗೆ ಮೆರೂಕೆ ಹೇಳ್ದವ್ಳು ನಾ ಅಲ್ಲ. ವೆಂಕೊಡ್ತಿ ಕೈಲೇ ತಕೊಂಡ್ಹೋಗಿ.” ಎಂದು ಕಟ್ಟುನಿಟ್ಟಾಗಿ ಹೇಳಿದಳು ಪರಮೇಶ್ರಿ..

ಹೆಚ್ಚು ಕಾಡುವದು, ಬೇಡುವದು ಬೊಬ್ಬನಿಗೆ ಸೇರಲಿಲ್ಲ. “ವೆಂಕೊಡ್ತಿ ಹತ್ರೇ ಒಯ್ವ. ಒಡಿದೀರೂ ಇಲ್ಲ. ಈಗಂತೂ ಹಾಗೇ ಹೋಗ್ವ” ಎಂದವನೇ ಕಂಬಳಿಯ ಚೂರನ್ನು ಹೆಗಲಿಗೆ ಹಾಕಿದ. ಮನಸ್ಸಿಲ್ಲದಿದ್ದರೂ ಜಟ್ಟು ಅಣ್ಣನನ್ನು ಹಿಂಬಾಲಿಸಿದಳು. ನೋಡುತ್ತ ಕುಳಿತೆ. ಒಂದೆರಡು ಸಲ ಹಿಂದಿರುಗಿ ನೋಡಿದಳು ಜಟ್ಟು.

ವೆಂಕಮ್ಮ ಬರಲೇ ಇಲ್ಲ. ಬೊಬ್ಬ, ಜಟ್ಟು ಎಂದು ಬಂದು ತಮ್ಮ ಅಕ್ಕಿ ಕೇಳುವರೋ. ವೆಂಕಮ್ಮನಿಲ್ಲದ ಆ ಮನೆ ಅವರ ಸಂಬಳವನ್ನು ಕೊಡುವ ಲಕ್ಷಣವಿಲ್ಲ. ಯಾವುದೂ ಬೊಬ್ಬ ಬಂದ ಮೇಲೆ ತಿಳಿಯಬೇಕು.

ಅವರ ಬರಿಗೈಗೆ ನಾನೂ ಕಾರಣನಿರಬಹುದೇ?

—೦—

# ದೋಣಿ

●

"ಓ ಬೇ ಲೇಸ!
ನನ್ ಎಂಡ್ತಿ-ಕೋಸ
ಎಲ್ಲಾ ಇದೇ ದೋಣಿ....
(ಹ್ಹಿ ! ಹ್ಹಿ ! ಹ್ಹಿ ! ಎಂಬ ನಗೆ ಕೇಳಿ)
ಯಾಕ್ ನಗ್ತ್ರಿ ಮಾಣಿ ?
ಓ ಬೇ ಲೇಸ !
ಸಾನ್ಸಣ್ಣವ್ನಿರ್ತಾಗ ನಿಮ್ಮಂತಾ ಜೋರ್ನಗ್ತಿದ್ದೆ !''

''ಈಗ್ಯೂ ನಗ್ಬೇಕು !''

''ನಗ್ದ ಅಳ್ತೀನೇನು ? ನಿಮ್ಮಂತಾ ಪ್ರೋಗ್ರ್ಯಃ ಮೊಕಾ ನೋಡ್ದ್ರೆ ನನ್ಗೆಷ್ಟೋ ಸುಕಾಗ್ತೀದು ! ನನ್ಗೂ ನಿಮ್ಮಂತಾವ್ನೇ ಕೋಸೊಬ್ಬಿದ್ದ. ಮೀನಾ ಹಿಡೂಕ್ಹೋದಾಗ ಹೊಳೀಲ್ಬಿದ್ದು ಪಡ್ಚ ! ಹ್ಞು....ನಗ್ಯಾಡಿ; ನಾನೂ ಪದಾ ಹೇಳ್ತಿ ! ಓ ಬೇ ಲೇಸ.... ನಿಮ್ಮಂತಾ ಎಷ್ಟ್ಯೋ ಮಕ್ಳು ಈ ದೋಣೀಲ್ಕೂತು ಸಾಲಿಗ್ಹೋಗ್ಹೊಡ್ಮನಸಾರಾಗವ್ರೆ. ದೊಡ್ಮನೆ ಕಲೆಕಟ್ರ ಸ್ಯಾಬ್ರು ಸಣ್ಣೋರಿರ್ತಾಗ ನನ್ದೋಣೀಲೇ ಕೂತ್ಕೊಂಡು ನಿಮ್ಹಾಂಗೇ ನಗ್ತಾ ಕಲೂಕ್ಹೋಗ್ತಿದ್ರು. ಅವ್ರ್ಹಾಂಗೆ ನೀವೆಲ್ಲಾ ದೊಡ್ಮನ್ಸ್ಯಾರಾದ್ರೆ ನನ್ಗೆಷ್ಟೋ ಸುಕ; ನನ್ದೋಣಿಗೆಷ್ಟೋ ಶೋಭಿ; ದೋಣೀ ಹಾಯ್ಹೊಟ್ಟೀತುಂಬಾ ನಗಿ !''

''ನಿನ್ದೋಣೀ ಮೋಲ್ಕೂತ್ಹೋಗ್ವೋರೆಲ್ಲಾ ಸಾಹೇಬ್ರಾಗ್ತಾರೇನೋ ಬೀರಾ ?''

''ಕೂತ್ಹೋಗ್ವೋರೆಲ್ಲಾ ಸಾಯಬ್ರಾಗ್ತ್ರ ಅಂಬೂದಿಲ್ಲ ನಾನು ! ಆದ್ರೆ ಸಾಯಬ್ರು ಸಹ ಕೂತ್ಹೋಗ್ತಾರೆ ಅಂದೆ !''

'ಹ್ಞ ! ಹ್ಞ ! ಹ್ಞ !' ಎಂದು ಹುಡುಗರು ಮತ್ತೆ ನಕ್ಕರು. ಅಷ್ಟರಲ್ಲಿ ದೋಣಿ ದಂಡೆಗೆ ಬಂತು ; ಹುಡುಗರೆಲ್ಲಾ ಇಳಿದು ಪಾಟೀ ಚೀಲಾ ಹಿಡಿದು 'ಆಸ್ರಿ,–ಬಾಯ್ಬ್ರೇಡಿ'ಗಳ ಗುಣಾಕಾರ ಹಾಕುತ್ತಾ ಮನೆಗಳ ಕಡೆಗೆ ಓಡಿದರು. ಅವರನ್ನು ಕೆಲಹೊತ್ತು ನೋಡುತ್ತ ನಿಂತು, ದೋಣಿಯನ್ನು ತೆಂಗಿನ ಮರಕ್ಕೆ ಕಟ್ಟಿ, ಮೀನದ 'ಚೊಬ್ಬೆ' ಹಿಡಿನು ಬೀರ ತನ್ನ ಬಿಡಾರಕ್ಕೆ ನಡೆದನು. ಹೊತ್ತು ಮುಳುಗಿತ್ತು. ಯಾವುದೋ ವಿಚಾರದ ಭಾರದಡಿಗೆ ಕುಸಿದಿದ್ದ ಬೀರ, ಗುಡಿಸಿಲಿಗೆ ಬಂದವನೇ ಮಡಿಕೆಯ ಕಳ್ಳನ್ನು ಕುಡಿದು, ಕೋಳಿಯ ಗೂಡಿನ ಬಳಿಗೆ ಕಂಬಳಿಹಾಸಿ ಮಲಗಿದನು. ಹೆಂಡದ ಮಬ್ಬು ಏರ ಹತ್ತಿತು. "ಅದೆ ! ಅದೆ ! ಕೆಂಪ್ಸೀರೆ ಉಟ್ಕೊಂಡು ಮಠಕ್ಹೋಗ್ತಾಳು ; ದೇವ್ರ ಸುತೂ ಗಿರಿ ಗಿರಿ ತಿಗ್ತಾಳು ! ಗುರು ಗುರು ನೋಡ್ತಿರೂ ಗುರ್ವಿಗ್ನಮ್ಸಕಾರಾ ಮಾಡ್ತಾಳು !....ಅಷ್ಟಪ್ಪ....ಯಾರಿಗೂ ಕಾಣೂದಿಲ್ಲಾ ಅಂತಾನೆ....ಅಕಾ ! ಪಾರ್ವತೊಡ್ತೀನ ಎಳ್ಕೊಳ್ತಾನೆ !....ಏ ಏ ! ಹಾರ್ತಾಳೆ ಹೊಳಿ....ಪಾರು.... ಸಣ್ಣ ಬೋಳಿ....ಪಾರ್ವತೊಡ್ತೀ, ಸತ್ಕೋಬೇಡಿ....ನನ್ಗ ಕಾಣ್ತ್ನದೆ ದೋಣೀ ಮೇಲಿಂದ ನೀವ್ಗುಂಡೀಗ್ ಗುದ್ಕೊದು ...ಅಪ್ಪಪ್ಪ ನನ್ಕಣ್ಣೀ !....ಕತ್ಲೀಲ್ಸಹಾ ಹಗ್ಲ ಹಾಂಗೇ ಕಾಣೂದಂದ್ರೆ !...." ಮಾಂತಾದ ಮಬ್ಬಿನ ಬಡಬಡಿಕೆ ಅವನ ಜೊಂಪಿನಲ್ಲಿ ಬೇಟೆಯಾಡುತ್ತಿತ್ತು. ಅವನ ಉರುಳುಗಣ್ಣೆದುರು ಅದ್ಭುತ ಚಿತ್ರಗಳು ಮಿಂಚಿ ಮಾಯುವಾಗುತ್ತಿದ್ದವು. ನೋವೊಂದೇ ಅವನೆದೆಯಮೇಲೆ ಮುಳ್ಳಡಿಯಿಟ್ಟಿತ್ತು. ಬೀರನಿಗೆ ಎಚ್ಚರಾದಾಗ ಮಧ್ಯರಾತ್ರಿಯಾಗಿರಬಹುದು. ಆಚೆಯ ದಂಡೆಯ ಮೇಲೆ ನಿಂತು ಎಷ್ಟು ಜನ '**ದೋಣಿಕಾರಾ** !' ಎಂದು ಕೂಗಿ, ತೆಂಗಿನ ಮರಗಳು ಕಳುಹಿದ ಮಾರ್ದನಿಯಿಂದಲೆ ತೃಪ್ತರಾದರೋ ಹೇಳಲಾಗದು. ಬೀರ ಒಂದು ಹಂಡೆ ನೀರು ಕಾಸಿ, ಮೈಗೆ ಹೊನ್ನೆಯೆಣ್ಣೆ ಹಚ್ಚಿಕೊಂಡು ಕುದಿಕುದಿ ಮಿಂದು, ತಂಗಳು ಅಂಬಲಿ ಸುರಿದು ಮತ್ತೆ ಹಾಯಾದನು. ಅಂತಹ ಅಪರಾತ್ರಿಯಲ್ಲಿ ನೀರು ಕಾಯಿಸಲು ಹಚ್ಚಿದ ಬೆಂಕಿಯನ್ನು ಕಂಡು – ಆಚೆಯ ದಡದಲ್ಲಿ ಎಚ್ಚರಿದ್ದವರು ನೋಡಿ "ಭೂತ ಹೊಡಚಲು ಹಾಕಿದೆ!!" ಎಂದು ಅಂದುಕೊಂಡು ಉಳಿದವರಿಗೆ ಬೊಟ್ಟುಮಾಡಿ ತೋರಿಸಿ, ಮೋರೆಯ ಮೇಲೆ ಹೊದಿಕೆ ಎಳೆದುಕೊಂಡು ರುದ್ರಗೀತಗಳ ಚಿಂತನೆಯಲ್ಲಿ ನಿದ್ದೆಹೋದ ಕವಿಯು ಕಾಣುವ ಕನಸುಗಳನ್ನು ಕಂಡಿರಬಹುದು !

**‘ತೆಂಗಿನ ತವರು’ ‘ಹೊಸೂರು’** ಗಳ ನಡುವೆ ಹರಿಯುವ ಹೊಳೆಗೆ ಬೀರನ ದೋಣಿಯೇ ತೇಲು-ಸೇತುವೆ! ಸಣ್ಣ-ಪುಟ್ಟ ದೋಣಿಕಾರರಿದ್ದರೂ ಅವರು ದಾರಿ ದಾಟಿಸುವ ಕೆಲಸಕ್ಕೆ ಬರುತ್ತಿದ್ದಿಲ್ಲ; ಬರೇ ಮೀನು ಹಿಡಿಯುತ್ತಿದ್ದರು. ಬೀರನಿಗೆ ೪೦–೪೫ ವರುಷ. ಉಪ್ಪುನೀರಿನಿಂದ ಹುರಿಗೊಂಡ, ಗಾಳಿಗೆ ಸವೆದ ಬಿಸಿಲಿಗೆ ಪುಟವಿಟ್ಟ ಕೆಂಚಾಳು. ಸಣ್ಣಂದಿನಿಂದಲೂ ದೋಣಿಯಲ್ಲಿಯೇ ದುಡಿದು, ತಾರಿ ದಾಟುವ ದಾರಿಕಾರರೊಡನೆ ಅರ್ಧತಾಸಿನ ಯಾತ್ರಿಕನಾಗಿ, ಅವನಲ್ಲಿ ಅನುಭವವು ಕಣಿಗೊಂಡಿತ್ತು. ಜನರ ಮೋರೆ ನೋಡಿದೊಡನೆಯೆ ಅವರ ಸ್ವಭಾವವನ್ನೋದುವಷ್ಟು ಮರ್ಮಜ್ಞವಾಗಿದ್ದುವು ಅವನ ಕಣ್ಣುಗಳು. ಹೆಂಡಿರು ಮಕ್ಕಳು ನೀರಿಗೆ ತುತ್ತಾಗಿ ತಾನು ಒಂಟಿಯಿರುವೆನೆಂಬ ಪರಿವೆಯೆ ಅವನಿಗಿದ್ದಿಲ್ಲ. ದೋಣಿಯ ಮೇಲಿಡುವ ಕಾಲುಗಳೆಲ್ಲ ತನ್ನ ಮನೆಯ ನೆಂಟರ ಹೆಜ್ಜೆಗಳೆಂದು ತಿಳಿದುಕೊಂಡು, ಅವರೊಡನೆ ಮಾತಾಡಿ, ಕವಳ ಹಾಕಿ, ಹಗುರಗೊಳಿಸಿದ್ದನು ತನ್ನ ಕಳವಳವನ್ನು; ಮಾಯಿಸಿದ್ದನು ವಿರಹವೇದನೆಯನ್ನು! ಊರಿನವರು ದೋಣಿಯವನಿಗೆ ಪ್ರತಿಸಲವೂ ಹಣ ಕೊಡುತ್ತಿದ್ದಿಲ್ಲ; ಆಚಾರಿ-ಕುಂಬಾರರಿಗೆ ಕೊಡುವಂತೆ **‘ಮೈರ’** ಕೊಡುತ್ತಿದ್ದರು. ಇದರಿಂದ ಅವನಿಗೆ ಅಂಬಲಿಯು ಸಿಕ್ಕುತ್ತಿತ್ತು. ಉಪ್ಪು-ಮೆಣಸು-ಬಾಟ್ಲಿಗಳಿಗೆ ‘ತವ್ಜಾಲು’ ಹೊರಲಿಕ್ಕೆ ಹೋದಾಗ—ಹಿಲಾಲು ಹಿಡಿದಾಗ —ಬೇರೂರಿನವರು ದೋಣಿ ದಾಟುವಾಗ—ದೊರೆಯುವ ಹಣ ಸಾಲುತ್ತಿದ್ದವು. ಹೆಂಡವೇ ಅವನಿಗೆ ಹೆಂಡಿರು-ಮಕ್ಕಳ ನೆನಪನ್ನು ಮರೆಯಿಸಿ, ಹಗಲಿನಲ್ಲಿ ಕಂಡ ಕೇಳಿದ ಅನುಭವಗಳ ತೊರೆಯನ್ನು ರಾತ್ರಿಯ ಅಮಲಿನಲ್ಲಿ ಮತ್ತೊಮ್ಮೆ ಹರಿಯುವಂತೆ ಮಾಡುತ್ತಿತ್ತು. ಹೀಗೆ ಹಗಲಿನಲ್ಲಿ ನಟ್ಟ ನೋಟವು ಇರುಳು ಬೇರೂರುತ್ತಿತ್ತು. ಬೀರನಿಗೆ “ನೀ ಹೆಂಡವನ್ನೇಕೆ ಕುಡಿಯುತ್ತೀ?” ಎಂದೂ ಯಾರೂ ಕೇಳುತ್ತಿದ್ದಿಲ್ಲ. ಒಮ್ಮೆ ಮಾತ್ರ ಒಬ್ಬ ಗ್ರಹಸ್ಥನು ಹೆಂಡತಿಯೊಡನೆ ದೋಣಿಯೇರಿ “ಸಾವ್ಕಾಶ್ ದೋಣೀ ಬಿಡಪ್ಪಾ....ನುಬ್ಬಲ್ಲಿ ಎಲ್ಲಾದ್ರೂ ಮಚ್ಚಾರ್ಕ್ಬಿಟ್ಟಿ!” ಎಂದು ಮಾತು ಮುಗಿಸಿದೊಡನೆಯೆ “ಹೀಂಗ್ಯಾಕಂತ್ರ? ನೀವ್ಚಹಾಕುಡು ಮನೇಗ್ಬೆಂಕೀ ಹಚ್ಚಿದ್ದಾಂಗೆ, ನಾವು ಹೆಂಡಾಕುಡ್ದು ದೋಣೀ ಕವ್ಚಾಕೂದಿದಿಲ್ಲ!” ಎಂದು ಕಟ್ಟುನಿಟ್ಟಾದ ಉತ್ತರ ಕೊಟ್ಟು, ಬ್ರಾಹ್ಮಣನ ಬಾಯಿಗೆ ಬೊಂತೆ ಗಿಡಿದನು.! ಹೀಗೆ ಯಾವ ಯಾವ ಮಾನಗಳಿಗೆ ಎಂತೆಂತಹ ‘ಕುಳ್ಳಿ’ ಒಡ್ಡಬೇಕೆಂಬುದು ಬೀರನಿಗೆ ಗೊತ್ತು.

* * * *

'ತೆಂಗಿನ ತವರು' ಒಂದು ದೊಡ್ಡ ಕೊಂಪೆ—ಹಳ್ಳಿ. ಅಲ್ಲಿ ಬ್ರಾಹ್ಮಣರ ಸಂಖ್ಯೆಯೇ ಹೆಚ್ಚು. 'ಹೊಸೂರು' ತುಸು ಸುಧಾರಿಸಿದ್ದು. ಸಾಲೆ, ಅಂಚೆಕಟ್ಟೆ, ರಾಮಪ್ಪನವರ 'ಮದ್ದಿನ ಮನೆ' ಎಂಬ ದವಾಖಾನೆ, ಕಿರಾಣಿ—ಅರಿವೆ—ಬೀಡಿ—ಚಹದಂಗಡಿಗಳು ಇವೆಲ್ಲ ಅದನ್ನು ತೆಂಗಿನತವರ ದೃಷ್ಟಿಯಲ್ಲಿ ಪಟ್ಟಣ ಮಾಡಿದ್ದುವು ತೆಂಗಿನ ತವರಿನ ಹುಡುಗರು ಸಾಲೆಗೆ, ರೋಗಿಗಳಿಗೆ ಔಷಧ ತರುವುದಕ್ಕೆ (ರಾಮಪ್ಪನವರು ಎಂಥ 'ಕೇಸೇ' ಇದ್ದರೂ ತಮ್ಮ 'ಆಫೀಸು' ಬಿಟ್ಟು ಬರುವಂತಿದ್ದಿಲ್ಲವಾದ್ದರಿಂದ, ರೋಗಿಯನ್ನೇ ಇವರ ಬಳಿಗೆ ತರಬೇಕಿತ್ತು!) ಅರಿವೆ-ಅಂಚಡಿ ಮುಂತಾದವುಗಳಿಗೆಂದು ಹೊಸೂರಿಗೇ ಬರಬೇಕಾಗುತ್ತಿತ್ತು. ಜ್ವರ ಬಿದ್ದವರು 'ಮದ್ದಿನ ಮನೆ'ಗೆ ಹೋಗಲೆಂದು ದೋಣಿಯಲ್ಲಿ ಮಲಗಿದಾಗ 'ಸಾಯುವವರನ್ನು ಬದುಕಿಸಲು ತಾನೂ ಸಹಾಯ ಮಾಡುತ್ತಿದ್ದೇನೆ!' ಎಂದು ಬೀರನಿಗೆನಿಸುವಷ್ಟಲ್ಲ, ಅದರ ಸೋಂಕಾದರೂ—ಔಷಧಕ್ಕಿಂತ ಮುಂಚೆ ಹಣದ ಸಂಚಿ ಬಿಚ್ಚಲು ಹೇಳುವ-ರಾಮಪ್ಪನವರೆದೆಗೆ ತಾಗುತ್ತಿತ್ತೋ ಹೇಳಲಾರೆ! ಮದುವೆಗೆಂದು ಸೀರೆ-ಧೋತರಗಳ ಪಿಂಡಿಯನ್ನು ದೋಣಿಯಮೇಲೆ ಹೇರಿ, ಮಾತಾಡುತ್ತ ಕುಳಿತ ಮದುಮಕ್ಕಳ ತಂದೆ—ತಾಯ್ಗಳ ಬಡಿವಾರ ನೋಡಿ "ನಾನಾಚೆಗ್ಮುಟ್ಟಿಸದಿದ್ರೆ ಈ ಪಿಂಡಿ ಯಲ್ಹೋಗ್ತದೆ? ನಾಡ್ದೇ ಮದ್ವೆ ಯಲ್ಹಾಗ್ತದೆ?" ಮುಂತಾದ ಹೆಮ್ಮೆ; ಪ್ರಚಾರಕ್ಕೆ ಹೊರಟ ಸತ್ಯಾಗ್ರಹಿಗಳು ದೋಣಿಯೇರಲು 'ಅವರಷ್ಟೇ ಏಕೆ, ತಾನೂ ಇವರನ್ನೆಲ್ಲ ದಾಟಿಸಿ ದೇಶಸೇವೆ ಮಾಡುವುದಿಲ್ಲವೇ' ಎಂಬ ಗರುವ ಸಾಲೆಯ ಮಕ್ಕಳು ನಗುತ್ತ ಕೆಲೆಯುತ್ತ ಕುಳಿತಾಗ "ಇನ್ರೆಲ್ಲ ದೊಡ್ರಾಸ್ತ್ರಾದ್ರೆ ನನ್ಗೆ ಷ್ಟಾನಂದಾಗ್ತೀದು!" ಎಂದು ಅಂದುಕೊಳ್ಳುವುದರಿಂದ ನೀಡುವ ಹರಕೆ; ಬೊಜ್ಜು ಡೊಳ್ಳಿನ ಮೇಲೆ ಪುಸ್ತಕ ಹೇರಿ ಲೆಕ್ಕ ಬರೆಯುವ ಸಾಹುಕಾರರು, ತೆಂಗಿನಪಟ್ಟಿಯ ಸಾಲಗಾರ ಪಶುಗಳನ್ನು ನ್ಯಾಯಾಲಯದ ಶೂಲಕ್ಕೆ ತರಲೆಂದು ಹೋಗುವಾಗ ಅವನ ದೋಣಿಯಡರಲು "ಇವ್ರೆಲ್ಲಾ ಸುಳೀಗಿಳ್ಸಿ ಬಿಟ್ರೆ ಎಷ್ಟ್‌ಹೆಂಗ್ಸ್ರ ಕರೀಮಣಿ ಕಾಲುಂಗ್ಲ ಮಾರಾಟಾಗ್ದೇ ಇದ್ದಲ್ಲೇ ಚೆಂದಕ್ಕಿರ್ತೀದು!" ಎಂದು ಹಲ್ಲು ಕಡಿದುಕೊಳ್ಳುವ ಹುಚ್ಚು; ಬರಗಾಲ ದೇಶದವರು ಅಲೆಯುತ್ತಾ ಕೂಳಿಲ್ಲದೆ ಕೀಳುನೋರೆ ಮಾಡಿಕೊಂಡು "ಆಚೆಗೆ ದಾಟಿಸಿಕೊಡಪ್ಪಾ" ಎಂದಾಗ, ಎದೆ ತುಂಬಿ ಬಂದು ಅವರನ್ನು ದಾಟಿಸು

ವಾಗಿನ ಅವನ ಮೋರೆಯ ಮೇಲಿನ ಕಳೆ; ಅವರಿಗೆ ಚೊಬ್ಬೆಯಿಂದ ಒಣ ಮೀನು ಉಪ್ಪು ಕೊಡುವಾಗ '**ಇದಕ್ಕಿಂತ** ಹೆಚ್ಚು ಕೊಡಲಾರೆ' ಎಂದೆನ್ನುವ ನೋಟಗಳಲ್ಲಿ ಬರೆದ ವಿಶ್ವಬಂಧುತ್ವ ಪುಸ್ತಕದ ಮುನ್ನುಡಿ—ಇವೆಲ್ಲವನ್ನೂ ವಿಸ್ತಾರವಾಗಿ ಹೇಳಿದರೆ "ಕಥಾನಾಯಕನ ಮೈಗೆಲ್ಲ ಕನ್ನಡಿ ಕಟ್ಟಿದ್ದಾನೆ; ಬೇಗಡೆ ಬಡಿದಿದ್ದಾನೆ" ಎನ್ನುವ ಸುಶಿಕ್ಷಿತರೂ ಇರಬಹುದು. ಅಂತವರ ಕಿವಿಯಲ್ಲಿ "ಅಶಿಕ್ಷಿತರಲ್ಲಿಯ ಮಾನವತೆಯ ಸ್ಫುಟಸರಿತ್ತಿನ ಒರತೆಯನ್ನು ಕುಡಿತೆಗೊಳ್ಳದಿರುವುದರಿಂದಲೇ ನಂಜುಳಿದಿದೆ!" ಎಂಬ ತಳಿರ ಪೀಪಿಯೂದಿ ಮುಂದುವರಿಯಬೇಕಾಗುತ್ತದೆ.

‡ ‡ ‡

ತೆಂಗಿನ ತವರ **ಸುಬ್ಬ ಹೆಗ್ಗಡೆ**ಯವರ ಪುರಾತನಕಾಲದಿಂದಲೂ (ಆ ಊರಿನವರ ಹೇಳಿಕೆಯಂತೆ 'ಭೂಮಿ, ಹುಟ್ಟಿದಂದಿನಿಂದಲೂ)ಪ್ರಸಿದ್ಧ. ಸುಬ್ಬ ಹೆಗ್ಗಡೆಯವರ ಮೊದಲನೆಯ ಹೆಂಡತಿ '**ಬಾಗಬ್ಬೆ**' ಎಂದಿದ್ದಳು. ಅವಳು ಬಡವರ ಗೋಳನ್ನು ಕೇಳಿ ಉಪವಾಸಬೀಳುವ ಪ್ರಾಣಿಯಾಗಿದ್ದಳು. ಜ್ವರ ಗಡ್ಡೆಯರೋಗ, ಮೋರೆಯ ಮೇಲಿನ ಮೈಲಿಯ ಕಲೆಗಳು—ಹೆಗ್ಗಡೆಯವರಲ್ಲಿ ಹೆಂಡತಿಯ ಬಗ್ಗೆ ಮೊದಲಿನಿಂದಲೂ ತಾತ್ಸಾರದೃಷ್ಟಿ ಬಿತ್ತಿದ್ದುವು. ತನಗೆ ತಿಳಿಯದಂತೆ ಒಕ್ಕಲಿಗರಿಗೆ ಭತ್ತ, ಅಕ್ಕಿ ಕೊಡುವುದು ತಿಳಿದಂದಿನಿಂದಂತೂ, ಅವರ ಕೋಪಕ್ಕೆ ಪುಂಗಿಯೂದಿದಂತಾಗಿತ್ತು. 'ಬಾಗಬ್ಬೆ'ಯು ರಾಮು-ರಾಮಿಯೆಂಬ ಬಡದಂಪತಿಗಳಿಗೆ ಒಕ್ಕಲುಕೇರಿಯಲ್ಲಿ ಬಿಡಾರ ಕಟ್ಟಿಸಿ ಕೊಟ್ಟು ಸಾಕಿದ್ದಳು ಹೆಗ್ಗಡಿತಿಯ ಮಗಳಾದ **ಪಾರು**, ರಾಮು-ರಾಮಿಯರ **ತುಳಸಿ** ಇಬ್ಬರೂ ಚೆನ್ನೆಮಣೆ,—ಬೆಟ್ಟೆ ಆಡುತ್ತಿದ್ದರು. ಹೆಗ್ಗಡೆಯವರ ಮನೆಯಲ್ಲಿ ಉಂಡುಳಿದ ಅನ್ನ-ತಂಬುಳಿ, ಉಟ್ಟು ಹೊದ್ದುಬಿಟ್ಟ ಅರಿವೆ....ಕಂಬಳಿ ....ಇವುಗಳ ಮೇಲೆ ರಾಮು-ರಾಮಿ-ತುಳಸಿಯರ ಜೀವನ ಸಾಗಿತ್ತು. ಅವರ ಮನೆಯ ಹೊರಗೆಲಸವೆಲ್ಲವನ್ನೂ ಇವರೇ ಮಾಡುತ್ತಿದ್ದರು. ರಾಮನು ತೀರಿಕೊಳ್ಳಲು ರಾಮಿ-ತುಳಸಿಯರಿಗೆ ಬಾಗಬ್ಬೆಯವರೇ ಪ್ರಾಣವಾಯು, ಪಾರುವೇ ಕಣ್ಣಿನಲ್ಲಿ ದೇವತೆ. "ಯುದ್ಧದ ಕೆಟ್ಟ ಪರಿಸ್ಥಿತಿ: ನಿನ್ನ ಕೈ ಸಣ್ಣ ಮಾಡು!" ಎಂದು ಹೆಗ್ಗಡೆಯವರು ಕುಟ್ಟಿಕೊಂಡರೂ. ಬಾಗಬ್ಬೆಗೆ ತನ್ನ ಹುಟ್ಟುಗುಣಕ್ಕೆ ಒಡ್ಡು ಕಟ್ಟಲಿಕ್ಕಾಗಲಿಲ್ಲ. ಬಿಜಾಪುರದ ಬರಗಾಲದ ಫಂಡಿಗೆ ಹೆಂಡತಿಯು

ಹಿತ್ತಲಬಾಗಿಲಿನಿಂದಲೇ, ಅಕ್ಕಿಯ ಮುಡಿ ಸಲ್ಲಿಸಿದ್ದನ್ನು ತಿಳಿದು ಹೆಗ್ಗಡೆಯವರು ರುದ್ರರಾದರು. "ನೀ ಈ ಮನೇಲಿದ್ರೆ ಮನ್ಗಟ್ಟು ಈ ಬೇಸ್ಗೇಲಿ ತೊಳ್ದೋಗ್ತು !" ಎಂದು ಗುಡುಗಿ ಬಾಗಪ್ಪೆಯನ್ನು ತವರಿಗಟ್ಟಿದರು. ಪಾರುವು ತಾನೂ ಹೋಗುತ್ತೇನೆಂದರೂ ಅಡಿಗೆ ಮಾಡಿ ಹಾಕಲು ಬೇಕೆಂದು ಒತ್ತಾಯಪಡಿಸಿ ಇಟ್ಟುಕೊಂಡರು. ರಾಮಿ-ತುಳಸಿಯರಿಗೆ ನಾಲಗೆ ಕೊಯ್ದಂತಾಯಿತು.

ತವರಿಗೆ ಹೋದ ಹೆಗ್ಗಡತಿ ಬೇನೆಬಿದ್ದ ಸುದ್ದಿ ಬಂದರೂ ಹೆಗ್ಗಡೆಯವರು ಪಾರುವಿಗೆ ತಿಳಿಸಲೂ ಇಲ್ಲ; ಸ್ವತಃ ಖೇದಪಟ್ಟುಕೊಳ್ಳಲೂ ಇಲ್ಲ. "ಶೀಕ್ಬಿದ್ದವ್ಳ ಶವಾ ಆಗ್ಲಿ !" ಎಂದು ಶಪಿಸಿದರು. ಕೆಲವು ದಿವಸಗಳಲ್ಲಿಯೇ ಹೆಗ್ಗಡೆಯವರ ಶಾಪ ಫಲಿಸಿತು. ತಾಯಿ ಸತ್ತ ಸುದ್ದಿ ಕೇಳಿ ಪಾರು ಚೀರಿದಳು. ರಾಮಿ-ತುಳಸಿಯರು ಬಾಯ್ಬಿಟ್ಟರು. ಮೂವರೂ ಒಬ್ಬರೊಬ್ಬರ ಕಣ್ಣೀರೊರಸಿದರು. 'ಇನ್ನು ಹೊಸ ಹೆಗ್ಗಡತಿ ಬಂದರೆ ಜೀವಿಸುವದೆಂತು ?' ಎಂಬ ಚಿಂತೆ ರಾಮಿಯಲ್ಲಿ ಹೊತ್ತಹತ್ತಿತು. ಏನೇ ಆಗ್ಲಿ, ಪಾರ್ವತೊಡ್ತೀ ಮದ್ವೇಮನ್ಕಾಲ ಆದದ್ನೋಡ್ಧೋರ್ತರ್ಜ ಈ ಊರ್ಬಿಟ್ಹೋಗ್ವಂಗಿಲ್ಲ !" ಎಂದು ಅವಳು ನಿಶ್ಚಯಿಸಿದಳು. 'ಮೊದಲನೆಯ ಹೆಂಡತಿ ಸತ್ತು ವರ್ಷವಾಗದನಕ ಮರುಮದುವೆಯಾಗಬಾರದೆಂಬ ಹುಂಬ ನಂಬುಗೆಯನ್ನು ಹೆಗ್ಗಡೆಯವರು ಹರಿದೊಗೆದು, ದ್ವಿತೀಯ ಲಗ್ನಕ್ಕಣಿಯಾದರು. ತಮ್ಮ ಹೆಣ್ಣುಮಕ್ಕಳ ಕೈಯಿಂದ ಕಣಜಕ್ಕೆ ಮಾಲೆ ಹಾಕಿಸುವ ತಾಯ್ತಂದೆಗಳು ಎಲ್ಲೆಲ್ಲೂ ಇರುತ್ತಾರೆ. ಇಂತಹ ಮಹಾಶಯರೊಬ್ಬರ ಕಣ್ಣಿಗೆ ಹೆಗ್ಗಡೆಯವರು ಮಣಿಯಾದರು—ಮದುವೆಯ ಮಾಣಿಯಾದರು ! ಹೆಗ್ಗಡೆಯವರ ಆನಂದ, ಪಾರುವಿನ ಕಂಬನಿ, ಒಕ್ಕಲ ಸಂತಾಪ ಎಂಬ ಮುನ್ನೀರಿಗೆ ಚಂದ್ರ ಮೂಡಿದಂತೆ **ದುರ್ಗಾಬಾಯಿ** ಹೆಗ್ಗಡತಿಯಾಗಿ ಬಂದಳು. ದುರ್ಗೆಗೆ ಬೆವರು-ಕಂಬನಿಗಳ ಧಾರೆಯೆರೆದು ಪಾರುವು ಸೇವೆ ಸಲ್ಲಿಸಿ—ಸಣ್ಣಾದಳು; ಸುಣ್ಣವಾದಳು. ರಾಮಿಯಿಲ್ಲವಿದ್ದರೆ ಅವಳ ಗತಿ ಏನಾಗುತ್ತಿತ್ತೋ ಏನೊ ! ಪಾರುಗೆ ಬರುವ ತಲೆನೋವು—ಸಣ್ಣ ಜ್ವರಗಳಿಗೆ ದುರ್ಗಾಬಾಯಿಯವರು ಲಕ್ಷ್ಯಹಾಕುತ್ತಲೆ ಇದ್ದಿಲ್ಲ. ಪಾರುವಿನ ಕೆಲಸವು ಯಂತ್ರದಂತೆ ಸಾಗಬೇಕಿತ್ತು. ರಾಮಿ-ತುಳಸಿಯರು ಹೊರಕೆಲಸ ಮಾಡಿ ಕೊಟ್ಟರೂ ಒಳಕೆಲಸ ಕಡಿಮೆಯೆ ? ಹೆಂಡತಿಗೆ ತೀರಿಹೋದ ಸವತಿಯ ಮಗಳೆಂಬ ಮತ್ಸರವಾದರೆ, ಗಂಡನಿಗೆ ಹಿರೇಹೆಂಡತಿಯ ಅಚ್ಚು ಎಂಬ ತಾತ್ಸಾರ.

ರಾಮಿ-ತುಳಸಿಯರಿಗೆ ಪಾರುವಿನ ತೊತ್ತಿನ ಬಾಳನ್ನು ಕಂಡು ಎದೆಯಲ್ಲಿ ಯಾವ ತರಂಗಗಳೇ ಎದ್ದರೂ ಅವು ಹೆಗ್ಗಡೆ-ಹೆಗ್ಗಡತಿಯರಿಗೆ ತಾಗುವಂತಿದ್ದಿಲ್ಲ; ಹೆದ್ದೊರೆಗಳೇ ಅಪ್ಪಳಿಸಿದರೂ ಅಲುಗದ ಬಂಡೆಗಳವು, ಇಂತಹ ಕಿರುತೆರೆಗಳಿಗೆ ಒಡೆಯುವವೇ? ಪಾರುವಿನಲ್ಲಿಯ ಪ್ರೀತಿ-ಭಕ್ತಿಗಳು ಅವರನ್ನು ಮೊನ್ನೆ ಗೆಲಸದಲ್ಲಿ ಬೆನ್ನುಬಾಗಿಸಿದ್ದುವು.

‡ ‡ ‡

ಆ ರಾತ್ರಿ ಹೆಗ್ಗಡೆ-ಹೆಗ್ಗಡತಿಯರು ಗುಣುಗುಣು ಮಾತನಾಡುತ್ತ ಮಲಗಿದ್ದರು.

"ಕ್ಷಯ್ರೋಗಾದವಂಗ್ಹೆಣ್ಣ್ಯಾಕೊಡ್ತೊ? ಗಟ್ಟ್ಯಾಟ್ಟಿದ್ದವಂಗೇ ನೂರಿನ್ನೂರ್ರೂಪ್ಯಾ ಕಡ್ಮೆ ಕೊಡ್ತಿವ್ವಲ್ಲೆ! ರೋಗ್ಹಿಡ್ದವಂಗೆ ಅಂದ್ರೆ ಒಂದ್ನಾವ್ರಾನಾದ್ರೂ ಕೊಡಡ್ದ? ಅದಿರ್ಲಿ; ನಿನ್ತರಾಕಾರೆ ಯನ್ಗೆಷ್ಟು ಖರ್ಚ್ಬಿತ್ತು ಗುತ್ತಿದ್ದೊ? ಝುಣ್ಣುಣಾ ೩೦೦ ರೂಪ್ಯಾ ಎಣ್ಸಿದ್ದೆ ನಿನ್ನಪ್ಪ ಮುಂದೆ!"

"ಅದಂತೂ ಆತಲಿ! ಯನ್ತಮ್ಮಾ ಹೇಳಿ, ಐನೂರ್ರೂಪ್ಯಾಗೆ ಪಾರೂನ್ಕೊಟ್ಬುಡಿ! ಉಂಡ್ತಿಂದ್ಕಂಡ್ಸುಖ್ದಲ್ಲಿರ್ಲಿ ಕೂಸು!"

"ನಿನ್ತಮ್ಮಂಗಾಗ್ಲಿ ಯಾರಿಗೇ ಆಗ್ಲಿ, ಒಂದ್ನಾವ್ರಕ್ಕಿಂತ ಕಡ್ಮೆ ರೂಪ್ಯಾಗೆ ಪಾರೂ ಕೊಡೂಲಾಗ್ತಿಲ್ಲೆ!"

"ಯನ್ತಮ್ಮಂಗೆ ಮತ್ಯಾರೂ ಹೆಣ್ಕೊಡ್ತಿವ್ವಲ್ಲೆ ಹೇಳಿ, ಸಾವಿರ ರೂಪ್ಯಾ ಕೇಳ್ತ್ರಿ ಹೌದೋ ಅಲ್ದೋ? ಆಗ್ಲಿ, ಆಷ್ಟ್ಕೊಡ್ಸ್ತೆ; ಲಗ್ನ ಮಾಡ್ಬುಡಿ ಪಾರೂಗೆ!"

"ಅಕ್ಕು"... ಮುಂತಾದ ಚುಟುಕು ನಂಜಿನ ಬಾಣಗಳು ಮಗ್ಗುಲಿನ ಕೋಣೆಯಲ್ಲಿ ಮಲಗಿದ ಪಾರುವನ್ನು ಚುಚ್ಚಿದವು. ಅವಳು ತನ್ನ ಭವಿಷ್ಯ ನೆನೆದು ಬೆಚ್ಚಿದಳು. ಆ ರಾತ್ರಿಯೆಲ್ಲಾ ಅವಳಿಗೆ ಸ್ಮಶಾನಯಾತ್ರೆಯ ಕನಸುಗಳೆ!

ಮರುದಿನ ಪಾರುವಿನ ಮೋರೆ ನೋಡಲಾಗುತ್ತಿದ್ದಿಲ್ಲ ಬಾಡಿ ಕಪ್ಪಾಗಿತ್ತು. ರಾಮಿಯು ಏನಾಯಿತೆಂದು ಕೇಳಲು, ಕೊಟ್ಟಿಗೆಗೆ ಕರೆದುಕೊಂಡು ಹೋಗಿ ಎಲ್ಲಾ ಕತೆಯನ್ನೂ ಹೇಳಿ ಬಿಕ್ಕಿಬಿಕ್ಕಿ ಅತ್ತಳು. ಎಮ್ಮೆ ಆಕಳುಗಳೆಲ್ಲ

ಪಾರುವನ್ನು ನೋಡುತ್ತಾ 'ಅಂಬಾ' ಎಂದುವು. ರಾಮಿಗೆ ಜೀವನದ ನೂಲಿಗೆ ಕತ್ತರಿಯಿಕ್ಕಿದಂತಾಯಿತು. ಒಡತಿಯ ಮದುವೆ-ಮನೆಕಾಲಗಳ ಉತ್ಸವ ನೋಡಿ ಸಾಯಬೇಕೆಂದು ಬಗೆವ ಅವಳಿಗೆ ಸ್ಮಶಾನ ಸಮೀಪ ಬಂದಂತೆ—ನೆಲ ವೆದ್ದು ನಡೆವಂತೆ ತೋರಹತ್ತಿತು. ಆದರೂ 'ಇದು ಮರ್ವಿವಾಹ' ಎಂದು ಒಡೆಯರಿಗೆ ಹೇಗೆ ಹೇಳಿಯಾಳು? ಎದೆಯಷ್ಟೇ ಮೃದುವಿದ್ದರೂ ಅವಳು 'ಆಳು'ತಾನೆ?

ತನ್ನ ಭವಿತವ್ಯದ ಬೂದಿಯನ್ನು ನೆನೆಯುತ್ತ ಬೆಂಡಾದ ಪಾರುವಿಗೆ ಅಂದು ಅನ್ನ ಬಾಗಿಸುವಾಗ ಕೈಜಾರಿ ಕುದಿತಿಳಿ ಚೆಲ್ಲಿ ಕೈಕಾಲು ಬೆಂದವು (ಕಳೆದ ರಾತ್ರಿಯ ನಿಶ್ಚಯದಿಂದ) ದುರ್ಗಾಬಾಯಿಯು ಪಾರುವಿನ ಗಾಯಕ್ಕೆ ಮದ್ದುಮಾಡಲು ಹೊಸೂರಿಗೆ ಕಳುಹಿಸುವ ತಯಾರಿ ಮಾಡಿದಳು; ರಾಮಿ, ಪಾರು, ತುಳಸಿ ಮೂವರೂ ದೋಣಿಯೇರಿದರು.

ಬೀರುವಿಗೆ ಪಾರುವಿನ ಕೈಗೇನಾಯಿತೆಂಬುದನ್ನು ತಿಳಿಯದನಕ 'ಜಲ್ಲು' ಹಿಡಿಯಲಿಕ್ಕೇ ಆಗಲಿಲ್ಲ. ಒಂದೆರಡು ಸಲ "ಏನಾಯ್ತ್ರಾ ಒಡ್ತಿ?" ಎಂದು ಹಗುರಾಗಿ ಕೇಳಿದ್ದಕ್ಕೆ ಹೊಳೆಯುಲ್ಲುದುರಿದ ಕಂಬನಿಯ ಬಿಂದುಗಳೇ ಉತ್ತರ ವಾದುವು. ಕಡೆಗೆ ರಾಮಿಯು ನಡೆದ ಸಂಗತಿ ಹೇಳಲು, ಬೀರು ಎದೆಕರಗಿ "ಪಾಪ ಮದ್ವೀಗ್ಬಂದಾಳೆ!" ಎಂದು ಉದ್ಗಾರ ತೆಗೆದನು. ಆಗಲಿರುವ ಅಧನು ಕಾರ್ಯವೊಂದನ್ನು ತಿಳಿಯೂ ತಿಳಿದೂ ಬೈಚಿಕೊಳ್ಳಲು ರಾಮಿಯಿಂದಾ ಗಲಿಲ್ಲ; ಅವಳು ಮನಸ್ಸಿಗೆ ಹತ್ತಿದ ನಂಜನ್ನು ತೊಳೆದು ಹಾಕುವಂತೆ, ಪಾರು ವಿನ ಮದುವೆಯ ವಿಷಯ, ಅವಳ ತಂದೆ ಚಿಕ್ಕ ತಾಯಿಗಳು, ಹಾಕಿದ ಹೇಯ ಹೇವರದ ಕತೆಹೇಳಿ "ಜಾತ್ಯೋರು ಶ್ರೀಮಂತ್ರೂ ಅಂತ ಕ್ಷಯ್ರೋಗೀಗ್ಕೃಗ್ಳ ಕೊಡೂದ್ಕಿಂತ ಗರ್ನಾಲ್ಸ್ನಾಬ್ಯಂತಾ ಗಂಡ್ಸೋರಂಗೆ ಉಡ್ಕೀ ಮಾಡ್ಕೊಟ್ರೆ ಏನಾಗೀದು? ಬೀರು, ನನ್ನಾರೊಡ್ತೀ ಗಂಡ್ನ ಮನೀಲಿ ಸುಖ್ವಾಗಿರೂದ್ನೋ ಡ್ಕಂಡ್ಸಾಯ್ಬೇಕೂ ಅಂತಿದ್ದೆ; ಆದ್ರೆ ಹಸೀ ಜೀವ ಸುಡ್ಯೋರ್ಕಾಲ್ದಲ್ಲಿ....ಈ ಕ್ಷಯ್ರೋಗಿ ಒಟ್ಟಿಗಾಗೂ ಮದ್ವೀ ತಪ್ಸೋಕ್ಕಡ್ಯೋರಿದ್ರೆ, ಅವ್ರ್ಹೆಸ್ರಲ್ಲಿ ಸಿರ್ಸೀ ಮಾರ್‍ಯಮ್ಮಂಗೆ ನನ್ಕುತ್ಗಿ ಬೇಕಾದ್ರೂ ಕಡ್ದ್ಕೊಡ್ತೆ!" ಎನಲು, ಬೀರನ ತಲೆ ಯಲ್ಲಿ ಕುಲಿಮೆಯೊಂದನ್ನು ಹೊತ್ತಿಸಿ ಕಣ್ಣಿನಿಂದ ಕಿಡಿ ಕಾರಿಸಲು, ಅವನೆ ದೆಯ ತಿದಿಯು ಗಾಳಿ ಹಾಕಿತು. ಅಂದಿನಿಂದ ಆ ಮದುವೆಯನ್ನು ನಿಲ್ಲಿಸುವ

ಬಗೆ ಹೇಗೆಂದು ಅವನು ವಿಚಾರಿಸುತ್ತ ಳಿದನು. ಅಂತೇ ಬೀರನು ಹೆಂಡ ಸುರಿದು, ತಲೆಯ ಹಿಲಾಲು ಹೊತ್ತಿಸಿ, ಉಪಾಯ ಹುಡುಕತೊಡಗಿದನು. ಮಬ್ಬೇರಿ ಸುಲಗಿದಾಗ ಪಾರು ವಿಧವೆಯಾಗಿ ಮಠಕ್ಕೆ ಹೋಗುವುದು, ಹೊಳೆ ಹಾಸಿಕೊಳ್ಳುವುದು ಮುಂತಾದ ದೃಶ್ಯಗಳು ಅವನ ಗುಡಿಸಿಲ ಮುರುಕುಮಾಡದ ಮೇಲೆ ನೆಗಸುಗೊಂಡು ಬರುವಂತೆ ಭಾಸವಾಗುತ್ತಿತ್ತು

‡ ‡ ‡

ಒಂದುದಿನ ಇದೇ ವಿಚಾರದಲ್ಲಿ ಜೋಲುಮೋರೆ ಮಾಡಿಕೊಂಡು ಜಲ್ಲು ಹಿಡಿದು ನಿಂತಿರಲು, ಬೀರನ ಭಾರೀದೋಸ್ತನಾದ **ಗರ್ನಾಲ್‌ಸಾಬಿ**ಯು ದೋಣಿಯೇರಿ ''ಕುಡ್ಡೈನೋ ಬೀರ? ಸುಮ್ಗೇ ನಿಂತೀದಿ'' ಎಂದು ಕೇಳಿದನು. ಇದಕ್ಕೆ ಮೌನವೇ ಉತ್ತರವಾಯಿತು. ಸಾಬಿಯು ಮತ್ತೆ ಅದೇ ಪ್ರಶ್ನೆ ಮಾಡಿದನು. ಬೀರನು ಸಿಟ್ಟೇರಿದವನಂತೆ "ಇನ್ನೊಬ್ರ ವಿಚಾರ ನಿನ್ಗ್ಯಾಕೋ? ಮುದ್ಕಂಗೆ ಮುದ್ಕಿಕೊಡ್ಲಿ--ಶಿಶುಕೊಡ್ಲಿ, ಹೆಣಕ್ಕೆ ಪರಾಯ್ದ ಹೆಣ್ಕೊಡ್ಲಿ; ಮದ್ವೀಗ್ಹೋಗಿ ಗರ್ನಾಲ್ಹೊಡ್ದು ಬರ್ರ್ವೋರ್ನೀವು!'' ಎಂದು ಸಾಬಿಗೆ ಅಸಂಬದ್ಧವೆನಿಸುವಂತೆ ದಿಗುಡು ನುಡಿದನು.

''ಯಾರ್ಮದ್ವೀ ಸುದ್ದಿ ಮಾತಾಡ್ತ್ಯೋ ಬೀರ?''

''ಹೆ! ಹೆ! ಹೆ! ಯಾರ್ದೂ ಅಲ್ಲ, ನಿಂದೇ!''

''ಆಂ? ನನ್ದು! ಸುಳ್ಳೋ ಬದ್ದೋ?''

''ಬದ್ಮಾಶ್ ಕೆಲ್ಸ ನಡೀತಿರ್ಬೇಕಾದ್ರೆ ತನ್ಮದ್ವೀ ಸುದ್ದಿ ಸುಳ್ಳೋ ಬದ್ದೋ ಕೇಳ್ತಿ, ಸಾಬಿ! ನಿನ್ಗೇನ್ಹೇಳ್ಲಿ?''

''ಎಂತಾ ಬದ್ಮಾಸ್ಕೆಲ್ಸ? ಯಾರ್ಮಾಡ್ದ್ರು?"

"ಬೀರನು ಪಾರುವಿನ ಮದುವೆಯ ನಿಶ್ಚಯದ ಸುದ್ದಿಯನ್ನು ಸಂಪೂರ್ಣವಾಗಿ ಹೇಳಲು'' ಇಂತಾ ಮದ್ವೀಲೆಲ್ಲೂ ನಾ ಗರ್ನಾಲ್ಹೊಡೀಲಿಲ್ವಪ್ಪ! ಹೇಂಗಾದ್ರೂ ಮಾಡಿ ಈ ಮದ್ವಿ ನಿಂತ್ರೆ!" ಎಂದ.

''ಹೇಂಗ್ಹೇಳೊ ಸಾಬಿ, ಹಿಂಗ್ಹೇಳು!''

ಇಬ್ಬರೂ ಮೌನದಲ್ಲಿ ಆಕಲು ಹಾಕಹತ್ತಿದರು. ಸಾಬಿಯು ನೀಗವತೆಯಲ್ಲಿ ತೆರೆಯೆಬ್ಬಿಸಿದನು. ''ನಾಳೆ ಯಲ್ಲಾ ಉಪಾಯ ಹೇಳ್ತೆ. ಆದ್ರೆ, ಹೆಗ

ಡೇರ್‍ಮನೆ ಕೆಲ್ಸಕ್ಕರೂ ರಾಮಿದ್ದಾಳಲ್ಲ, ಅವ್ಳಿಗೆ ತುಳಸಿ ಅಂಬೂ ಮಗ್ಳಿದ್ದಾಳಲ್ಲ........" ದೋಣಿಯು ಆಚೆ ದಂಡೆ ಸಮೀಪಿಸಿದಂತೆ ಮಾತು ಕೇಳದಂತಾಯಿತು.

*         *         *         *

ಆ ಊರ ಮುಂಜಿ-ಮದುವೆಗಳಲ್ಲಿ ಗರ್ನಾಲು ಹೊಡೆಯುವ ಸಾಬಿಯೊಬ್ಬ ಸುಂದರ ಮುಸಲ್‌ಮಾನ್ ತರುಣ. ಜಾತಿಯಿಂದ ಮುಸಲ್‌ಮಾನನಾಗಿದ್ದರೂ ಅವನಿಗೆ ಹಿಂದೂ ಅಚ್ಚೇ ಒತ್ತಿದಂತಿತ್ತು. ಬೆಳೆದದ್ದು ಹಿಂದುಗಳ ನಡುವೆ; ಇರುವುದು ಅವರ ನಡುವೆ; ಅವನ ಜೀವನವೇ ಹಿಂದುಗಳಲ್ಲಿ. ಗರ್ನಾಲು ಹೊಡೆಯುವದಲ್ಲದೆ, ಶ್ರೀಮಂತರ ಮದುವೆಗಳಲ್ಲಿ ಬ್ಯಾಂಡು ಗ್ಯಾಸ್ ದೀಪಗಳ ವ್ಯವಸ್ಥೆಯನ್ನೂ ಸಾಬಿಯೇ ಮಾಡುತ್ತಿದ್ದನು. ಅಂತೂ ಆ ಖಾತೆಗೆ ಮೊಕ್ತೇಸರನಾಗಿದ್ದ ಅವ. ಎಲ್ಲ ಬ್ರಾಹ್ಮಣರ ಮದುವೆ ದಿಂಡುಗಳ ಚಪ್ಪರಗಳಲ್ಲಿ ಸಾಬಿ, ಗುರುಗಳ ಸವಾರಿಯಲ್ಲಿ ಸಾಬಿ, ತೇರೆಳೆಯುವಲ್ಲಿ ಸಾಬಿ ! ಮದುವೆಗಳಲ್ಲಿ ಹೇಳುವ ಮಂತ್ರಗಳ ಕೆಲವು ಸಾಲುಗಳು ಸಾಬಿಗೆ ಬರುತ್ತಿದ್ದವು. "ಓಂ ನಮಸ್ತೇ ಸೊಸೆಯೇ, ನಮಸ್ತೇ ಸಖೀನಾಂ" ಎಂದು ಭಟ್ಟರ ಎದುರಿಗೆ ಹಾಸ್ಯ ಮಾಡುತ್ತಿದ್ದ ! ಅವನ ರೂಪ, ಸರಳತೆ, ಕಾರ್ಯ ಕುಶಲತೆ ಇವುಗಳಿಂದ ಅವನು ತೆಂಗಿನ ತವರಿನವರ ಕಣ್ಣಿನ ಗೊಂಬೆಯಾಗಿದ್ದ. ಯಾರ ಮನೆಗೆ ಹೋದರೂ ಚಹ ದೊರೆಯುತ್ತಿತ್ತು. ಊರಿನ ಮನೆಗಳ ಹೆಸರೆಲ್ಲಾ ಅವನಿಗೆ ಬಾಯಿಪಾಠ. ಆ ಊರಿನಲ್ಲಿ ಒಳ್ಳೆ ಹುಡುಗಿಯನ್ನು ಮುದುಕನಿಗಾಗಲಿ, ರೋಗಿಗಾಗಲಿ, ಕೊಡುವ ಸುದ್ದಿ ಎದ್ದೊಡನೆಯೆ, ನೆರೆಯವರು 'ಅವಳನ್ನು ಅವನಿಗೆ ಕೊಡುವುದಕ್ಕಿಂತ ಗರ್ನಾಲ್ಸಾಬಿಗೆ ಕೊಟ್ಟರೆ ಅವಳು ಸುಖವಾಗಿ ಬಾಳಿಯಾಳು' ಎಂದು ಹೇಳುವ ಮಾತು ಗಾದೆಯ ಮಟ್ಟಕ್ಕೆ ಮುಟ್ಟಿತ್ತು. ಸಾಬಿ ತನ್ನ ಬಿಡಾರಕ್ಕೆ ರಾಮಿಯ ಗುಡಿಸಲೆದುರಿನ ತೋಟದ ದಾರಿಯಿಂದಲೇ ಹೋಗಬೇಕಾಗುತ್ತಿತ್ತು. ತುಳಸಿಯು, ಸಾಬಿಯ ಹೆಸರು ಎಲ್ಲರ ಬಾಯಿಯಲ್ಲಿರುವುದನ್ನು ಸಣ್ಣಂದಲೇ ಕೇಳಿದ್ದಳು. ತೋಟದಲ್ಲಿ ಹೋಗುವ ಸಾಬಿಯ ನೋಟವು ಅವಳೆದೆಗೆ ನಾಟಹತ್ತಿತು. ಎಷ್ಟೋ ಸಲ ಕಣ್ಭೇಟವಾಯಿತು ಇಷ್ಟೇ. ದುರ್ಗಾಬಾಯಿಯವರ ಮದುವೆಯ ವೇಳೆ ತಾನು ಗರ್ನಾಲಿನ ಬುಟ್ಟಿ ಹೊತ್ತುಕೊಂಡಿದ್ದು, ಸಾಬಿ ಮದ್ದು ಸುಟ್ಟದ್ದು, ತನ್ನ ಕೈಯಿಂದ ಆಕಾಶ

ಬಾಣಕ್ಕೆ ಬೆಂಕಿ ಕೊಡಿಸಿದ್ದು, ಎಲ್ಲಾ ಚಿತ್ರಗಳು ಈಗ ಅವಳ ಕನಸನ್ನು ಕೊನರಿಸುವ ನೆನಹುಗಳಾದವು. ಹೆಗಡೆಯವರಂತೆ ತನ್ನ ತಾಯಿ ತನ್ನನ್ನು ರೋಗಿಗಾಗಲಿ ಮುದುಕನಿಗಾಗಲಿ ಹಣದಾಸೆಗೆ ಕೊಡುವ ಹೊತ್ತು ಬಂದರೆ, ಸಾಬಿಗೆ ಕೇಳಿ ಅವನೊಡನೆ ಓಡಿಬಿಡುವೆನೆಂದು ಮನಸ್ಸಿನಲ್ಲಿಯೇ ಎಂದುಕೊಳ್ಳುವಷ್ಟು ಅವಳ ತಲೆ ಬಲಿತಿತ್ತು. ಸಾಬಿಯು ತನ್ನ ಹೇಳಿಕೆಯನ್ನು ಬೀರನೆದುರು ಮಂಡಿಸಿದ್ದನು. ಅದು ರಾಮಿಗೆ ತಲುಪಿ ಫಲಿಸುವುದು ಎಂದೋ ಎಂದು ಮನಸ್ಸು ಒತ್ತಿ ನಿರೀಕ್ಷಿಸುತ್ತಿದ್ದನು. ಅಷ್ಟರಲ್ಲಿ ಪಾರುವಿನ ಲಗ್ನ ಬಂತು.

ಹೊಸೂರಿನತ್ತಣಿಂದ ಬಂದ ದುರ್ಗಾಬಾಯಿಯ ತವರಿನ ದಿಬ್ಬಣ ದೋಣಿಯೇರಲನುವಾಯಿತು. ಬೀರನು ತನ್ನ ದೊಡ್ಡ ದೋಣಿಗೆ ಬಣ್ಣ ಬಳಿದು, ಸುತ್ತಲೂ ಮಾವಿನ ತುಮಕೆಯ ಮಾಲೆ ಕಟ್ಟಿ, ಕಬ್ಬು ಬಾಳೆಕಂಬ-ಗಳ ತೋರಣ ನಿಲ್ಲಿಸಿ ಶೃಂಗರಿಸಿದ್ದನು. ಮದುಮಗ, ಅವನ ತಂದೆ. ಪುರೋಹಿತರುಗಳಿಗೆಂದು ಒಂದು ಕಡೆ ಪ್ರತ್ಯೇಕ ಜಾಗ ಇಟ್ಟಿತ್ತು. ದೋಣಿ-ಯೊಳಗಿಳಿಯಲು ಹಳ್ಳೆಣ್ಣೆ ಹಚ್ಚಿದ ಎರಡು ಮೆಟ್ಟಲಿನ ಏಣಿ ಮಾಡಿದ್ದನು. ಮೊದಲು ಮದುವಣಿಗನು ಬಂದನು ಬೀರನು "ಹೀಗೆಬನ್ನಿ" ಎಂದು ಮೆಟ್ಟಲು ತೋರಿಸಿದನು. ಕಾಲಿಟ್ಟೊಡನೆಯೇ ಜಾರಿದನು ಬಾಸಿಂಗದ ಬೆಚ್ಚು. ಪುರೋಹಿತರು ಬೀಳದಂತೆ ಹಿಡಿದರು. ತನ್ನ ಬಲೆಯಲ್ಲಿ ಮಿನಾನ ಬಿದ್ದುದನ್ನು ಕಂಡು ಬೀರನಿಗೆ ಆನಂದವಾಯಿತು. ಕೂಡಲೆ ಅವನು ಏಣಿಯನ್ನು ಕಿತ್ತು "ಅಪ್ಪಕ್ಕ ಮಾಡ್ತ್ರ್ಯ?" ಎಂದು ಅವಕ್ಕೆ ಬೈದು ನೀರಿನಲ್ಲಿ ಬೀಸಾಡಿದನು. ಸಾಬಿಯು "ಅಂತಾ ಚೆಲೋ ಏಣಿ ಯಾಕ್ವೊಗೊದ್ರೀ" ಎಂದು ಕೇಳಿದನು. "ಚೆಲೋದೆಂತಾದು? ಒಡೇದೀರ್ಕಾಲಿಟ್ಕೊಡ್ಕೆ ಜಾರ್ಸ್ತು; ಅಪ್ಪಕ್ಕನ ಕೊಳ್ಳಿ!" ಎಂದು ಸುಮ್ಮನಾದನು. "ಇದೆಲ್ಲಾ ಎಂತಾ ಮಾತು;" ಪುರೋಹಿತರೆಂದರು. "ಆದ್ರೂ ನಮ್ಗ—ಒಕ್ಕಲ್ಗ—ಇಷ್ಟ್ ಸಣ್ಣಾದ್ರೂ ದೊಡ್ಡ ಅಪ್ಪಕ್ನಾಗ್ ಕೂಡ್ತದ್ಯ್ರ" ಎಂದ ಬೀರ. ಹಳೆಯ ವಾಲಗವೊಂದುಕಡೆ, ಬ್ಯಾಂಡಿನವರೊಂದು ಕಡೆ ಕುಳಿತರು. ಸಾಬಿಯು ಮೆಲ್ಲಗೆ ಬ್ಯಾಂಡಿನ ಬಳಿ ಸರಿದನು. ಕಿಸೆಯೊಳಗಿಂದ ಚಾಕು ತೆಗದು ಅಡಿಕೆ ಕೆರೆದನು. ಅಷ್ಟರಲ್ಲಿ ಗಾಳಿ ಬೀಸಹತ್ತಿತು. ಬೀರನು ತನ್ನ ಎ[illegible]ಯು ಗಾಳಕ್ಕೆ ಯಾವ ಬೇಟೆ ಬೀಳುವುದೆಂದು ನೋಡುತ್ತಿರುವಷ್ಟರಲ್ಲಿ, ಹಾಯಿಯು ಹರಿದು ಪಟಪಟ ಹಾರಹತ್ತಿತು.

" ಅಯ್ಯಯ್ಯೋ ನನ್ನಪ್ಪಾ ! ಇಂತಾ ಗಾಳೀಗೆ ಹಾಯಿ ಹರ್ಕಂಡ್ಹೋಗ್ಬೇ-ಕಾದ್ರೆ...." ಎಂದು ಎಲ್ಲರಿಗೂ ಕೇಳಿಸುವಂತೇ ಎಂದನು. ಸಾಬಿಯು ಬಾಯಿ-ಹಾಕಿ " ಏ ಬೀರ, ನಿನ್ಹಾಯಿಗೇನಾಗದ್ಯೊ ? ಹದ್ಹೋಗ್ಗಿ ಅಪ್ಶಕ್ನ ಮಾಡ್ತು !" ಎಂದು ಹೇಳಲು ಪುರೋಹಿತರು " ಅಪ್ಶಕ್ನ–ಅಪ್ಶಕ್ನ-ಅಂತ ಯೇನ್ಬೊಗ್ಳತೀರೋ ? " ಎಂದು ಗುಡುಗಿದರು. ಬೀರನು ಪಟಕಟ್ಟುತ್ತಾ " ಇಲ್ರಿ ಒಡ್ಯಾ, ಈ ದೋಣಿ ಎಷ್ಟೋ ಮದ್ವೆ ಮಾಡ್ಸೀದೆ ! ಆದ್ರೆ ಇಂದ್ನ ಹಾಂಗೆ ಯಾವಾಗ್ಲೂ ಆಗ್ಲಿಲ್ಲ !" ಎಂದು ಸಣ್ಣ ಮೋರೆ ಮಾಡಿದನು. ಸಾಬಿ ಬೀರ ಇಬ್ಬರೂ ಚುಕ್ಕಾಣಿಯ ಬಳಿ ಕುಳಿತು ಮಾತನಾಡಹತ್ತಿದರು.

"ಏನನ್ನೋದು ಸಾಬಿ, ಇಷ್ಟ್ವರ್ಷಾಯ್ತು ನಾ ದೋಣೀ ಬಿಡೂಕ್ಹಣ್ಕಿ! ಎಷ್ಟೋ ಮದ್ವ್ಯಾಯ್ತು, ಆದ್ರೆ ಇಷ್ಟ ಸಣ್ಗಾಳೀಗೆ ಹಾಯಿ ಹರ್ದದ್ದು ಇಂದೇ ನೋಡು !"

"ಆಯುಷ್ಯ ತೀರ್ದೋನೊಟ್ಟಿಗೆ ದೋಣೀಲ್ಹೋತ್ರೆ, ಕಂಬ್ಳಿ ಚೂರಾದ್ರೂ ಬಳ್ಹೋಗ್ತದ್ಯಂತೆ........" ಈ ಮಾತುಗಳು ಮದುಮಗನಿಗೆ ಕೇಳದೆ ಇರಲಿಲ್ಲ.

ದೋಣಿಯು ದಡಕ್ಕೆ ಬಂದೊಡನೆಯೆ ಹೆಂಗುಸರು, ಮಕ್ಕಳು ಗಂಡುಸರು ಎಲ್ಲರೂ ಇಳಿದರು. ಬೀರನು ದೋಣಿಯನ್ನು ತೆಂಗಿನ ಬುಡಕ್ಕೆ ಕಟ್ಟಿ ಹೆಗಡೆಯವರ ಮನೆಗೆ ಹೋಗಿ "ದಿಬ್ಬಣ ಬಂತು" ಎಂದನು. ಅಲ್ಲಿ ಅವನು ಯಾರನ್ನೋ ಹುಡುಕುವವನಹಾಗೆ ಕಂಡನು. ಇತ್ತ ವಾಲಗ ಬಡಿಯ ಹತ್ತಿತು. ಸಾಬಿಯು ಹೇಳಿದ್ದಕ್ಕಿಂತಾ ಹೆಚ್ಚು ಮದ್ದು ಸುಟ್ಟನು. ಅಡಿಕೆ ಕೆರೆದ ಚಾಕು ಮಾಡಿದ್ದ ಕಿತಾಪತಿಯ ಫಲವೇನಾಗುವದೆಂದು ನೋಡುತ್ತಿದ್ದನು. ಬಡಿಯುತ್ತಿದ್ದ ಬೇಂಡು ದನಿಗುಂದಹತ್ತಿತು. 'ನಟ್ಟು, ಬಿಗಿದುಕೊಂಡು ಬ್ಯಾಂಡಿನವರು ಜೋರು ಜೋರು ಬಡಿದರು. ಡೊಳ್ಳಿಂದು ಚರ್ಮ ಹರಿಯಿತು. ಸಾಬಿಯು ಮುಂದೆ ಬಂದು "ಸಾಕಪ್ಪಾ, ಈ ಮದ್ವಿ ಜವಾಬ್ದಾರಿ ! ದೋಣಿ ಹಾಯಿ ಹರೀತು; ಬ್ಯಾಂಡ್ನ ಚರ್ಮ ಲಡ್ಡಾಯ್ತು; ಇನ್ನೇನಾಗೂದದ್ಯೋ ದೇವ್ರೇ ಬಲ್ಲ ! ನಾನಾದ್ರೆ...." ಮದುಗುಗನಿಗೆ ಬೆವರಿಳಿಯಿತು. ದಿಬ್ಬಣದವರಿಗೂ "ಈ ಅಪ್ಶಕ್ನದಲ್ಲೇನಿದ್ದೋ ದೇವ್ರೇ ಬಲ್ಲ !" ಎಂದು ಹೇಳಿಕೊಳ್ಳುವಂತೆನಿಸಿತು. ಪುರೋಹಿತರು 'ಕುಂಡಲಿಯು ತಪ್ಪಿತೇ ?' ಎಂದು ವಿಚಾರಿಸ

ಹತ್ತಿದರು. ಆದರೂ ಮದುವೆ ಸಾಗಿಸಿಬಿಡಬೇಕೆಂದು “ಆಗ್ಲಿ, ನಮ್ಹಳ್ಳೀ ವಾಲ್ಗ್ವೇ ಇರ್ಲೋ. ಬ್ಯಾಂಡಿಪ್ಲಾಗ ಹೇಳಿ ದೇವ್ರಿಚ್ಛೆ, ಅದ್ಗೆ ಹದ್ಹೋರೀತು· ಹಳ್ಳಿ ವಾಲ್ಗ್ವೇ ಚೆಲೊ....ಅದ್ನೇ ಬಃಸ್ಲಿರ್” ಎಂದು ಮುನ್ನುಗ್ಗಿಸಿದರು. ಸುರ್ಬಾಣ – ಆಕಾಶಬಾಣ-ಚಕ್ರಬಾಣಗಳನ್ನು ಸುಡುತ್ತಿದ್ದ ಸಾಬಿ, ತನ್ನ ಇನ್ನೊಂದು ಅಪಶಕುನದ ಬಾಣವೇನಾಗುವುದೆಂದು ಗ್ಯಾಸ್‌ದೀಪದ ಕಡೆಗೇ ನೋಡುತ್ತ ಮದ್ದು ಹಾರಿಸುತ್ತುಳಿದನು.

ಬೀರನು ಹುಡುಕುತ್ತಿದ್ದ ರಾಮಿ ಹಿತ್ತಲ ಬಾಗಿಲ ಬಳಿ ಕಂಡಳು. ಸನ್ನೆಯಿಂದ ತೋಟಕ್ಕೆ ಕರೆದು “ನೋಡು, ಈಗ್ದಿಬ್ಬಣ್ಬರ್ತೀದು; ಪಾರೋತೊಡ್ತೀ ಕೊಳ್ಳೀಗೆ ಆ ಹೆಣ ಮಾಲೀ ಹಾಕ್ತೀದು! ಎನ್ಮಾಡ್ತೀ ಹೇಳು!” ಎಂದು ಕೇಳಿದನು.

“ನಾನೇನ್ಮಾಡ್ಲಿ? ಈ ಮದ್ವೀ ನಿಲ್ಸಕ್ಯಾರಿಂದಾಗ್ತೀದು? ‘ದೇವ್ರೇ ಮನ್ಸ್ ಮಾಡ್ದ್ರ ಆಗೂದು!”

“ದೇವ್ರೂ ಬೇಡ ದೀವ್ರೂ ಬೇಡ; ನಾನೇ ಸಿಲ್ಸೊಕ್ಕಡ್ತೆ! ಎನ್ಕೊಡ್ತಿ?”

“ಈ ಜೀವ ಬೇಕಾದ್ರೂ ಕೊಡ್ತೆ! ಆದ್ರ ನಿನ್ಕೈಯಿಂದ್ಹೇಂಗ್ ಸಾಧ್ಯ?”

“ನನ್ಕೈಲಾಗ್ದಿದ್ರೂ ಬೇರೆ ಜನರ ಕೈಲಿ ಸಿಲ್ಸ್ತೆ; ಗನಾರ್ಲ್ಸಾಬಿ!”

“ಅವ್ನಿಲ್ಸ್ತಾನ? ಹೆಂಗೆ? ಹೆಂಗೆ?”

“ಹ್ಯಾಂಗಾದ್ರೂ ನಿಲ್ಸ್ತೆ....ಹೇಳವ್ನೆ. ಆದ್ರೆ ಪಾರ್ವತೊಡ್ತೀಕ್ಕೆ ಆಕ್ಷೈರೋಗೀ ಕೈಯಿಂದ ತಪ್ಪೇಕಾದ್ರೆ ತುಳ್ಸೀಕ್ಕೆ ಸಾಬೀಕ್ಕೆ....”

“ಅಪ್ಪಪ್ಪಾ! ಆ ಮುಸಲ್ಮಾನರಿಗೆ ಮಗ್ಳನ್ ಕೊಟ್ಟರೆ ನನ್ನೆಲ್ಲಿಟ್ಟಾರಪ್ಪಾ ಈ ಊರಲ್ಲಿ?....”

“ಊರಲ್ಲಲ್ಲಿದ್ರೆ ಬೇರೇ ಊರೇ ಇಲ್ವೆ? ಆ ದಿವ್ಸ ನಾ ನಿನ್ಗೆಲಾ ಹೇಳವ್ನೆ. ಅವ ಹುಟ್ಟಿದ್ಮುಸಲ್ಮಾನ್ರಲ್ಲಾದ್ರೂ ಬ್ರಾಂಬ್ರ್ಹ್ಯಾಂಗೇ ಹಾನೆ. ನಿಮ್ನೆಲ್ಲಾ ಧಾರ್ವಾಡಕ್ಕರ್ಕಂಡ್ಹೋಗಿ ಸುಖ್ದಲ್ಲಿಟ್ತಾನೆ! ಏನ್ಮಾಡ್ತೀ ಹೇಳು? ಇಲ್ದಿದ್ರೆ ಪಾರ್ವತೊಡ್ತೀ ಕೊಳ್ಳಿಗೇ ಆ ಹೆಣ ಮಾಲೀ ಹಾಕ್ತದೆ! ಬಾಗಬ್ಬೊಡ್ತಿ ಬಾನ್ದಾಗ್ ನಿಂತ್ಕೊಂಡ್ ನೀನ್ನೋಡ್ತಾರೆ . . ಏನ್ಮಾಡ್ತೀ ಮಾಡು!”

“ಆಗ್ಲಿ, ನಾಳೀಗೆ ನಮ್ಮ ಈ ಊರಿಂದ ಕರ್ಕಂಡ್ಹೋಗೂದಿದ್ರೆ ಪಾರ್ವತೊಡ್ತೀ ಮದ್ವೀ ತಪ್ಸೂದೇ ಖಾತ್ರಿ ಇದ್ರೆ—ತುಳ್ಸೀ ಕೊಡ್ತೆ! ಮದ್ವಿ ಮುರ್ದ್ಮೇ ಕೂಡ್ಲೆ ಸಾಬಿ ಕರ್ಕಂಬಾ!”

“ ಇಷ್ಟೊತ್ತೀಗೇ ಮುರೀತು ಮದ್ವಿ ” ಇತ್ತ ಹಠಾತ್ತಾಗಿ ಇದ್ದದೊಂದು ಗ್ಯಾಸು ನೊಂದಿಹೋಯಿತು. ಎಲ್ಲಿಡೆಯೂ ಕತ್ತಲೆ; ಗೊಂದಲವೇ ಗೊಂದಲ! ಸಾಬಿ ಮೊದಲು ಹೇಳಿದಂತೆ “ ಸಾಕಪ್ಪಾ ” ಎಂದು ಉದ್ಗಾರ ತೆಗೆದನು. ಮದುವಣಿಗನು ಬಾಸಿಂಗದ ಬೆಂಡಾಗಿ, ಅದನ್ನು ಕಿತ್ತು “ ಭಟ್ರೆ, ಬೀರ ದೋಣೀ ಮೇಲ್ಹೋಳದ್ದೇ ಖರೆ........ಈ ಮದ್ವೆಲ್ಲೀನೋ ಕೆಟ್ಟದ್ದಿದ್ದು ! ಯಾನಂತೂ ಒದ್ದೆ ಜ್ಜೆ ಸಹಾ ಮುಂದ್ಬತ್ನಿಲ್ಲೆ ! ” ಎಂದುಬಿಟ್ಟನು. ಮದುಮಗನ ತಂದೆ ಬೆಪ್ಪಾದನು. ಎಲ್ಲರಿಗೂ ಅಪಶಕುನಗಳ ವಿಚಾರವೇ ತಲೆ ಕೊರೆಯುಹತ್ತಿತ್ತು.

ಸಾಬಿಯು ದೀಪವನ್ನು ದುರಸ್ತಿಮಾಡುವ ಸೋಬಗನ್ನು ಚೆನ್ನಾಗಿ ನಡೆಸಿದ್ದ. ಅಷ್ಟರಲ್ಲಿ ಬೀರ ಬಂದು, “ ಹೆಗ್ಡೇರ್ಮನೇಲ್ಲಿ ಎಡ್ಡೀಪವೆ; ಒಂದ್ತರ್ವ ಬಾ ! ” ಎಂದು ಅವನನ್ನು ಕರೆದುಕೊಂಡು ಹೋದನು. ಸಾಬಿಯು ಒಂದು ದೀಪ ಹಿಡಿದನು. ಬಾಳೆ--ತೆಂಗು—ಅಡಿಕೆ ಮರಗಳ ಚೆಪ್ಪರದಲ್ಲಿ ಇಣಿಕಿನೋಡುವ ತಾರೆಗಳ ದಿಬ್ಬಣದಲ್ಲಿ, ರಾಮಿ ಆನಂದಾಶ್ರುವಿನ ಧಾರೆಯೆರೆದಳು. ಬೀರನು “ ಮನ್ತ್ಂಬಾ ಮಕ್ಳಾಗ್ಲಿ ! ” ಎಂದು ಹರಿಸಿ ತನ್ನ ಪೌರೋಹಿತ್ಯ ಮುಗಿಸಿದನು. ಸಾಬಿಯ ಬುದ್ಧಿಗೆ ರಾಮಿ-ತುಳಿಸಿಯರು ಮೆಚ್ಚಿದರು. ರಾಮಿ-ತುಳಸಿಯರಿಗೆ ಪುನಃ ಚೆಪ್ಪರಕ್ಕೆ ಹೋಗಿ ತಮ್ಮ ತಮ್ಮ ಕೆಲಸ ಮಾಡಲು ಹೇಳಿ, ಬೀರಸಾಬಿಯರು ಮತ್ತೆ ದಿಬ್ಬಣವಿಳಿದಲ್ಲಿಗೆ ‘ದೀಪ ಒಂದೇ ಅದೆ’ ಎನ್ನುತ್ತಾ ಬಂದರು. ಅಷ್ಟರಲ್ಲಿ ಮದುವಣಿಗನೂ ಅವನ ಬಳಗದವರೂ ದೋಣಿಯೇರಿ ಕುಳಿತಿದ್ದರು ಬೀರ ಬಂದೊಡನೆಯೆ “ಬಂದ್ದಾರೀಗ್ಸುಂಕಿಲ್ಲ: ಬಿಡಪ್ಪಾ ದೋಣಿ ! ” ಎಂದರು. ತನ್ನ ಜೀವಮಾನದಲ್ಲಿಯೇ ಇಂಥಾ ಘಟನೆಯಾಗಿಲ್ಲವೆಂದು ಹೇಳುತ್ತಾ ಬೀರ ದೋಣಿ ಬಿಟ್ಟನು. ನಡುಹೊಳೆಯಲ್ಲಿ “ಒಡ್ಯಾ, ಕಳ್ದ ಅಮಾಸಿ ಈ ದೋಣಿ ಮೇಲೆ ಬಿಳೀ ಮುಸ್ಕಾಲ್ಲ ಹಾಕೊಂಡು ಯಾರೋ ಮನೀಕಂಡ್ಹಾಂಗೆ ಕಂಡಿತ್ತು. ಬಿಡಾದಿಂದ್ ನೋಡಿ ಹೆದ್ರಿನಾ ಮನೀಕಡೆ. ಯಾವ್ದೈವ ಬಂದು ಇವ್ರಲ್ಲಿ ಅಸ್ಯಕ್ಷ ತುಂಬ್ಹೊಯ್ತೋ ತಳೀಲಿಲ್ಲ ! ” ಎಂದು ಒಂದು ಕಟ್ಟುಕಥೆ ಹೇಳುತ್ತಾ “ ಈ ದೋಣೀನ ಅದ್ಕೇ ನಾಳೀಗೆ ಸುಟ್ಬುಡ್ತೆ. ನನ್ಗೆ ಉಂಬೂಕೆ ದೇವ್ರಿದ್ಧಾನೆ ಕೊಡ್ವವ; ಅಂದ್ರೆ ಹೀಂಗೆ ಅಸ್ಯಕ್ಷಾ ಆದ್ದು ನೋಡ್ದ್ರೆ

ಯಾವ್ದೋಣ್ಯವಂಗಾದ್ರೂ ಕೆಟ್ಟದ್ದನ್ನೂದೇಯ್ರ ಬೇಕಾದ್ ಆಗ್ಲಿ, ನಾಳೀಗೇ ಸುಟ್ಬುಡ್ತೆ !" ಎಂದನು. ಅದಕ್ಕೆ ಮರುನುಡಿಯಲು ಯಾರೂ ಬಾಯೆತ್ತಲಿಲ್ಲ. ಮದುವಣಿಗನಿಗೆ ಮೃತ್ಯುಮುಖದಿಂದ ಪಾರಾಗಿ ಬಂದಂತೆಯೆ ಎನಿಸಿತ್ತು. "ಮೊದ್ಲೇ ಕ್ಷಯರೋಗಿ....ಅಂತಾ ಅಪ್ಪಯ್ಯಕ್ಕೆ ಮೊಟ್ಟೆ ಕೈಹಿಡ್ದ್ರ...." ಉಶ್ಶೆಂದು ಉಸುರುಗರೆದು ಬೆವರೊರಸಿಕೊಂಡನು. ದೇವರ ಮನಸ್ಸಿಗೆ ಬರಲಿ ಬಾರದೆ ಇರಲಿ, ಬೀರ-ಸಾಬಿಯರ ರಾಮಿ-ತುಳಸಿಯರ ಮನಸ್ಸಿಗೆ ಅದು ಬಂದಿದ್ದಿಲ್ಲ. ಅಂತೂ ಮದುವೆ ನಿಂತಿತು.

ಅದೇ ರಾತ್ರಿ ರಾಮಿ–ತುಳಸಿಯರು ಪಾರೊಡತಿಯನ್ನು ದೂರಿಂದಲೇ ಕಂಡು, ಕೊನೆಯಸಲದ ಕೈಮುಗಿದು, ಸಾಬಿಯೊಡನೆ ನಡೆದರು. ಪಾರುವಿಗೆ ಮುಂದೆ ಯಾವ ಗಂಡದೊರೆತನೆಂದು ರಾಮಿಗೆ ತಿಳಿಸುವ ಭಾರ ಬೀರುವಿನ ಮೇಲೆ ಬಿದ್ದಿತ್ತು.

* * * *

ನಾಲ್ಕು ತಿಂಗಳ ನಂತನ ತೆಂಗಿನ ತವರ ಜೋಯಿಸರ ಮಗನು ಪಾರುವನ್ನು ಲಗ್ನವಾಗುತ್ತಾನೆಂಬ ಸುದ್ದಿ ಕೇಳಿ ಬೀರನು ಜೊಯಿಸರ ಮನೆಗೆ ಹೋಗಿ, ನೀರು ಕುಡಿದು ಕವಳಬೇಡಿ, ಮದುಮಗನನ್ನು ಉಗುರಿನಿಂದ ತಲೆಯವರೆಗೆ ನೋಡಿ "ಆಗ್ಲಪ್ಪಾ ಅಷ್ಟು ಶ್ರೀಮಂತಲ್ದಿದ್ರೂ ಹುಡ್ಗಾ ಗಟ್ಮುಟ್ಟದ್ದಾನೆ. ಸಂಸ್ಕೃತ್ರ ಓದಾವ್ನಂತೆ...." ಎಂದುಕೊಂಡು ಬಿಡಾರಕ್ಕೆ ಬಂದು "ನನ್ತಲೀಮೇಲ್ಬಾಯಿದ್ದಿದ್ರೆ ಒಂದ್ಗುಟ್ಕು ಹೆಚ್ಕುಡೀತಿದ್ದೆ !!" ಎನ್ನುತ್ತಾ ಗಂಟಲ ಕುಳಿಯ ವರೆಗೆ ಕುಡಿದು ಮಲಗಿದನು. "ವ್ಹ! ವ್ಹ! ಪಾರ್ವತೊಡ್ತಿ ! ಕಂಕ್ಳ ಮೇಲ್ಮಗ್ನ ಕೂರ್ಸ್ಕಂಡ್ ತೇರೀಗೆ! ಎಷ್ಟ್ಚನ್ಗಿ!" ಇನ್ನೇಷ್ಟೋ ಶುಭಸ್ವಪ್ನ ದೃಶ್ಯಗಳು ಅದೇ ಮುರುಕು ಮಾಡಗಳ ಮೇಲೆ ಅಂಬೆಗಾಲಿಡುವಂತೆ— ಅವನ ಕುಡುಕುಗಣ್ಣಿಗೆ ಕಂಡವು.

ಅಂದು ಹೊಸೂರಿನ ದಂಡೆಯ ಮೇಲೆ ನಿಂತು ತೆಂಗಿನ ತವರ ಸೊಬಗು ನೋಡುತ್ತಿದ್ದೆ. ವಾಲಗವೊಂದು ಕೇಳಿಬರುತ್ತಿತ್ತು. "ಇಂದು ಸುಬ್ಹ್ಗ್ಟೇರ್ಮಗ್ನ ಮದ್ವೆ" ಎಂದರು ನನ್ನ ಗೆಳೆಯರು. ಹೊಳೆಯ ದಂಡೆಗುಂಟ ದಿಬ್ಬಣ ಹೋಗುತ್ತಿರುವಂತೆ ತಿಳಿದುಬಂತು. ಪಟವನ್ನು ಕಂಬಕ್ಕೆ ಸುತ್ತಿದ ದೋಣಿಯೊಂದು ಮುಚ್ಚಂಜೆಯ ಚೆಂಬೆಳಕಿನಲ್ಲಿ ಸಾವಕಾಶವಾಗಿ ಸಾಗಿತ್ತು.

# ರಾವಣನ ದುಕ್ಕ

●

'ಬೊಡ್ಡೆಮಾಸ್ತಿ' ಎಂದೂ ರಾವಣನೆಂದೂ ನಮ್ಮೂರ ದಿವಂಗತ ಬಂಗಾರಗೌಡನ ಮಗ ಮಾಸ್ತಿಗೆ ಹೆಸರು. ಒಂದು ಬೊಡ್ಡೆಗೆ ಕಡಿಮೆಯಾಗುವಷ್ಟು ಗಂಜಿಯಿಂದ ಮಾಸ್ತಿಯ ಹೊಟ್ಟೆತುಂಬುವದೇ ಇಲ್ಲ. ಹೀಗಾಗಿ ಅವನ ಹೊಟ್ಟೆಗೂ ಬೊಡ್ಡೆಯ ರೂಪ ಬಂದುಬಿಟ್ಟಿದೆ. ನಮ್ಮೂರಿನಲ್ಲಿ 'ಮಾಸ್ತಿ'ಗಳು ಬಹಳ. ಬೊಡ್ಡೆಮಾಸ್ತಿ ಅಂದರೆ ಇವನೇ ಎಂದು ಎಲ್ಲವರೂ ಬಲ್ಲರು.

ಮಾಸ್ತಿಯ ಬೊಡ್ಡೆಯೇ ಅವನ ರಾವಣ ಎಂಬ ಹೆಸರಿಗೆ ಕಾರಣವಾಯಿತು. ಹಗರಣದಲ್ಲಿ ರಾವಣನಾಗುವ ನಸೀಬು — ಮಾಸ್ತಿ ಜೀವಂತ ಇರುವಾಗ — ಮತ್ತೆ ಯಾರಿಗೂ ಇಲ್ಲ! ಅವನ ಆಕಾರ ಮೈ ಕೈಗೆಲ್ಲಾ ಹುಲ್ಲು ಕಟ್ಟಿಕೊಂಡರೂ ಬೇರೆಯವರಿಗೆ ಬರುವಂತಿಲ್ಲ. ಮರಕಾಲು ಕಟ್ಟಿಕೊಂಡವರಿಗೂ ಅವನಂತೆ ದಾಪು ಹಾಕಲು ಸಾಧ್ಯವಿಲ್ಲ. "ಕುಣ್ದ್ಹಂಗ ರಾವಣ" ಎಂಬುದರ ಕಲ್ಪನೆಯಾಗಬೇಕಾದರೆ ಬೊಡ್ಡೆಮಾಸ್ತಿಯು ರಾವಣನ ಪಾತ್ರ ವಹಿಸಿ ಹಲಲಲಕೀಹ ಹಾಕುವದನ್ನು ಕಾಣಬೇಕು.

ಮಾಸ್ತಿಯದೊಂದು ಗುಣ. "ಛೆ, ಮಾಸ್ತಿ ಅಂದ್ರೆ ಎಂಥಾಮನ್ಸ! ಅವ್ನಂತೋರು ಶಿಕ್ಕೂದೇ ಅಪ್ರೂಪ. ನಮ್ಮೂರಲ್ಲಂತೂ ಮತ್ತ್ಯಾರೂ ಇಲ್ಲೆ" ಎಂದು ಉಬ್ಬಿಸಿದರಾಯಿತು. ಲಂಕಾಪಟ್ಟಣವನ್ನೇ ಅಂಗೈಯಲ್ಲಿ ತಂದಿರಿಸುತ್ತಾನೆ ರಾವಣ! ಸಣ್ಣಪುಟ್ಟ ಕೆಲಸಕ್ಕೆ ಹೆಚ್ಚು ಸಂಬಳ ಕೊಟ್ಟರೂ ಮಾಸ್ತಿ ಬರುವದೇ ಇಲ್ಲ ಚೂರಿ ಕತ್ತಿಗಳಿಂದಾಗುವ ಕೆಲಸವನ್ನು ಕೊಡ್ಲಿ ಪಿಕಾಸುಗಳು ಮಾಡುವದಿಲ್ಲವೆನ್ನುವದು ಅವನ ಸಿದ್ಧಾಂತ....ಕೆಲಸ ಮಾಡುವದೂ ಹಾಗೇ. ಕಪ್ಪು ಒಂದು, ತುಂಡು ಎರಡು ಎನ್ನುವ ಪೈಕಿ ಅವ. ಅಳ್ಳಾಟೋಪಿ ಜನರೊಡನೆ ಅವನು ಗಡ್ಡ ಮಾಡಿಸಿಕೊಳ್ಳಲೂ ಕೂತುಕೊಳ್ಳುವದಿಲ್ಲ. ತಿನ್ನುಣ್ಣುವುದರಲ್ಲಿಯೂ ಅವನಿಗೆ ಸೂಕ್ಷ್ಮ, ನಾಜೂಕು ಗೊತ್ತಿಲ್ಲ. ಬೊಡ್ಡೆಯೇ

ಅವನ ಸೋಲಿಗೆ. ಒಡೆಯರ ಮನೆಗೆ ಕೆಲಸಕ್ಕೆ ಹೋದಾಗ ಹುಳಿ ಹಾಕಲಿ, ಗೊಜ್ಜು ಬಡಿಸಲಿ, ಬೇಕಾದರೆ ಅಕ್ಕಚ್ಚನ್ನೇ ಸುರಿಯಲಿ—ಅದು ಬೊಡ್ಡೆಗಟ್ಟಲೆ ಆಗಬೇಕು !

ಇಂಥ ಮಾಸ್ತಿಗೆ ಗೇಣೆತ್ತರದೊಂದು ಎಂಡ್ತಿ ! ಅವನು ಅವಳನ್ನು ಹೆಂಡತಿಯೆಂದು ತಿಳಿದೇ ಇಲ್ಲ. ಅವನ ಲೆಕ್ಕಕ್ಕೆ ಅವಳು 'ಮಗು'. ಮುದಿ-ತಾಯಿಯೊಡನೆ ಗಂಜಿ ಬೇಯಿಸುವದು ನೀರುಕಾಸಿ ರಾವಣನನ್ನು ಮೀಯಿ-ಸುವದು ಅವಳ ಕೆಲಸ. ಅವಳನ್ನು ಅವನು ಹೆಗಲಿಗೆ ಹಾಕುವ ಕಂಬಳಿಯಲ್ಲಿ ಸಹಜವಾಗಿ ಇಟ್ಟುಕೊಂಡು ಒಯ್ಯಬಹುದು !

ಮಾಸ್ತಿಗೊಂದು ಚೂರು ಗದ್ದೆಯಿದೆ. ಅವನ ಸೊಂತ ಹೊಟ್ಟೆ ಹೋರಿ ಯಿಂದ ಪೊರೆದುಕೊಳ್ಳುತ್ತಾನೆ. ಮಗು, ತಾಯಿಗಳಿಗೆ ಗಂಜಿ ಕಾಣಿಸುವದು ಅವನಿಗೆ ಬಿಗಿ. ಇದು ಅವನ ತಪ್ಪಲ್ಲ; ಅವನ ಬೊಡ್ಡೆಯದು ! ಆದರೂ ಒಂದು ದಿನವೂ ಅವರಿಗೆ ಗಂಜಿ ತಪ್ಪದಂತೆ ನೋಡಿಕೊಳ್ಳಲು ಅವನು ತನ್ನ ಬೊಡ್ಡೆಗೆ ವಿಧಿಸಿದ್ದಾನೆ.

ಊರ ಉಪಕಾರ ಮಾಡುವುದರಲ್ಲಿಯೇ ಅವನ ಆಯುಷ್ಯ ಕಳೆಯುತ್ತದೆ. ತನ್ನ ಗದ್ದೆಯನ್ನು ಹೆರವರ ನೇಗಿಲು ತಂದು ಹೂಡಬೇಕು ! ಆದರೆ ಅವನು ಹಾಗೆ ಮಾಡುವದಿಲ್ಲ. ತನ್ನ ದೇಹದ ಬಲದಿಂದ ಸುತ್ತಲಿನ ಒಕ್ಕಲಿಗರಿಗೆ ಸಹಾಯ ಮಾಡಿ ಅವರಿಂದಲೇ ತನ್ನ ಗದ್ದೆಯ ತುಂಡಿಗೆ ಹೆರೆರೆ ಮಾಡಿಸುತ್ತಾನೆ.

ನಮ್ಮೂರಿನವರ ಸ್ವಭಾವ ಕೆಟ್ಟದ್ದು. ಊರಿಗೇ ಮಾಡಿದ ಸೇವೆಯನ್ನು ಮರೆತು ಬಿಡುತ್ತಾರೆ. ಹೀಗಾಗಿ ಮಾಸ್ತಿ ಮಾಡಿದ ಸಾಹಸಗಳ ಲೆಕ್ಕ ಯಾರೂ ಇಟ್ಟಿಲ್ಲ ಅವನು ಎಲ್ಲವನ್ನೂ ಸಹಜವಾಗಿ ಮಾಡುತ್ತಾನೆ. ಊರವರು ಸಹಜವಾಗಿ ಮರೆಯುತ್ತಾರೆ. ಆರೇಳು ವರ್ಷಗಳ ಹಿಂದೆ ಮನೆಗಳು ತಾಗಿ ತಾಗಿ ಇರವ ನಮ್ಮ ಕೇರಿಯೇ ಸುಟ್ಟು ಹೋಗುವದರಲ್ಲಿದ್ದಾಗ ಹಂಡೆ ತುಂಬ ನೀರು ಹೊತ್ತು ಬೆಂಕಿಯನ್ನು ನಂದಿಸಿದ ಸಂಗತಿಯನ್ನು ಈಗ ಯಾರೂ ನೆನೆ-ಯುವದೇ ಇಲ್ಲ. ಕುಲಗೆಟ್ಟವನೆಂದು ಕೊಳೆಯಬಿಟ್ಟ ಒಬ್ಬ ಒಂಟಿ ಜೀವಿಯ ಹೆಣವನ್ನು ಒಬ್ಬನೇ ಹೊತ್ತುಕೊಂಡು ಹೋಗಿ ಸುಟ್ಟು ಬಂದು ಮಾಸ್ತಿ ಇವನೇ ಎಂದು ಹಲವರು ನಂಬುವದಿಲ್ಲ. ಸಸಾರವಾಗಿ ಸಿಕ್ಕಿದ್ದೆಲ್ಲ ಸೋರಿ ಹೋಗು-ವದೂ ಸುಲಭ ಎಂಬ ಮಾತು ಸುಳ್ಳಲ್ಲ.

ಬೊಡ್ಡೆ ಮಾಸ್ತಿಯನ್ನು ಭೋಳೆ ಮಾಸ್ತಿಯೆಂದು ಟೀಕಿಸುವವರೂ ಇದ್ದಾರೆ. ಯಾರೇ ಏನೇ ಹೇಳಿದರೂ ಅಲ್ಲಗಳೆಯದೆ ಮಾಡುವವರಿಗೆ ಮರ್ಯಾದೆ ಸಿಗುವದು ತಪ್ಪಿ ಹೋಗುತ್ತದೆ. ಒಂದು ತರದ ಜರ್ಬಿನಿಂದಿದ್ದವರಿಗೇ ಆದರ, ಆದರೆ ಮಾಸ್ತಿಗೆ ಇಂತಹದೇನೂ ಬೇಕಾಗಿಲ್ಲ.

ಕಳೆದ ಸುಗ್ಗಿಯಲ್ಲಿ ಹೀಗಾಯಿತು. ಮಾಸ್ತಿ ೨ ಕೊಳಗ ಬೀಜ ಕೈಗಡ ತಂದು ಬಿತ್ತಿದ್ದ. ಬೆಳೆ ಬಂದ ಮೇಲೆ ನೋಡುತ್ತಾನೆ ೨ ಕೊಳಗಕ್ಕೂ ತುಸು ಕಡಿಮೆ. ಕಡ ಕೊಟ್ಟ ಒಡೆಯರು ಬಂದಷ್ಟು ಬರಲೆಂದು ಪೈರನ್ನು ಸಾಗಿಸಿಕೊಂಡರು. ಮಾಸ್ತಿಯ ಮೋರೆ ಇಳಿಯಿತು. ಗದ್ದೆಯಿಂದ ಬಿಡಾರಕ್ಕೆ ಬರುವಾಗ ಒಂದು ಬಿಟ್ಟಿ ಬಂತು. ಕುಮಠೆಗೆ ಹೋಗಿ ಬೇಗ ಒಂದು 'ಮದ್ದು' ತರಬೇಕೆಂದು ಜೋಯಿಸರು ಒತ್ತಾಯಪಡಿಸಿದರು. ಬೆಳೆ ತೀರ ಕಡಿಮೆಯಾದ್ದರಿಂದ ಮನೆಗೆ ಮೋರೆ ತೋರಿಸುವದೇ ಬೇಡಾಗಿತ್ತು ಅವನಿಗೆ. ಕುಮಠೆಯ ಕಡೆಗೆ ಸವಾರಿ ಹೊರಟಿತು. ಸಾಮಾನು ತೆಗೆದುಕೊಂಡ. ಛಾ ಕುಡಿ ಎಂದು ಜೋಯಿಸರು ಕೊಟ್ಟ ೨ ಬಿಲ್ಲಿಯ ಅವಲಕ್ಕಿ ತಿಂದ. ಚಾದಂಗಡಿಯವರು ಇವನ ಆಳ್ತನ ಕಂಡು "ಸೌದೆ ಒಡ್ಕೊಡ್ತ್ಯ?" ಎಂದು ಕೇಳಿದರು. ಆ ಬಿಸಿನಲ್ಲಿಯೇ ಆರುಮಣ ಕಟ್ಟಿಗೆ ಒಡೆದು ಜೋಯಿಸರಿಗೆ ಒಂದು ತೊಲೆ ಕೇಸರಿ ಒಪ್ಪಿಸಿ "ಮದ್ದು ತಂದೆ" ಎಂದ. ಗುಡಿಸಲಿಗೆ ಹೋಗುವದಾದರೂ ಹೇಗೆ? ಬರಿಗೈಯಲ್ಲೇ? ಆರು ಮಣ ಕಟ್ಟಿಗೆ ಒಡೆದ ಹಣದಿಂದ ರಾಗಿಕೊಂಡು ಸುಮ್ಮನೆ ಮನೆಯಲ್ಲಿಟ್ಟು ಕೆಲಸವಿದೆಯೆಂದು ಹೊಂಡದ ದಂಡೆಯ ಮೇಲೆ ಹೋಗಿ ಮಲಗಿಕೊಂಡ. 'ಮಗು' ತಾಯಿಗಳಿಗೆ ಇದು ನಿತ್ಯದ ಮಾತು. ಅವರು ಉಸುರು ಎತ್ತಲಿಲ್ಲ.

ಆದಿನವೆಲ್ಲಾ ಮಾಸ್ತಿಯ ಬೊಡ್ಡೆ ಖಾಲಿ. ತನ್ನ ಗದ್ದೆಯಲ್ಲಿ ಇಷ್ಟು ಕಡಿಮೆ ಭತ್ತ ಬಂತೆಂದು ಅವನ ಚಿಂತೆ. ತಾನು ಯಾರಿಗೂ ಕೆಡಕು ಮಾಡಿಲ್ಲ ಆದರೂ....ತನ್ನ ಗದ್ದೆಯಿಂದ ಭತ್ತವನ್ನು ಹೆರವರು ಕದ್ದಿರಬಹುದೆಂಬ ಕಲ್ಪನೆಯೂ ಅವನಿಗೆ ಬರಲಿಲ್ಲ.

ಸಂಜೆಯಾದರೂ ಅವನು ಹಂದಲಿಲ್ಲ. ಮಗು, ತಾಯಿಗಳು 'ಇವ ಬರಲಿಕ್ಕಿಲ್ಲ' ಎಂದುಕೊಂಡು ಹಂದಲಿಲ್ಲ. ಬೊಡ್ಡೆಯನ್ನು ಬುಟ್ಟಿಯ ಅಡಿಗಿಟ್ಟು ಮಲಗಿಕೊಂಡರು.

ದೀಪ ಹಚ್ಚುವ ಹೊತ್ತಿಗೆ ಮಾಸ್ತ್ಯಮ್ಮನ ಮನೆಯೆದುರು ಸುಗ್ಗಿಯ ಹಗರಣ. ಆದರೆ ಎಲ್ಲಿ ಹುಡುಕಿದರೂ ರಾವಣನೇ ಇಲ್ಲ. ಅಂತೂ ಎಮ್ಮೆ ಹೊಂಡದ ಬದಿಗೆ ಇಳಿಮೋರೆ ಹಾಕಿಕೊಂಡು ಕುಳಿತ ರಾವಣನ ಪತ್ತೆಯಾಯಿತು. ಒಕ್ಕಲಿಗರು ಬಂದು ಹುರಿದುಂಬಿಸಿದುದೇ ತಡ. ರಾವಣನಿಗೆ ಉಮೇದು ಬಂದುಬಿಟ್ಟಿತು. ಎಲ್ಲವನ್ನೂ ಮರೆತ. ಹಸಿವೆಯನ್ನೂ ಹತ್ತಿಕ್ಕಿದ. ಬೇಡ ಬೇಡ ಎಂದರೂ ಅವನಿಗೆ ಮರಕಾಲು ಕಟ್ಟಿದರು. ಹಗರಣ ಸೂಡಿಯ ಬೆಳಕಿನಲ್ಲಿ ಕೇಹ ಹಾಕಹತ್ತಿತು. ರಾವಣನು ಸೀತೆಯ ಜುಟ್ಟು ಹಿಡಿದು “ ರಾಮನಾ ಕೊಲ್ಲುವೆ ” ಎಂದು ಕಿರಚಿದ. ಆದರೆ ಅವನ ಕಾಲು ನಡುಗಹತ್ತಿತು. ಹೊಟ್ಟೆ ಹಸಿವೆಯಿಂದ ಚುಯ್ಯ್ಯಾಗುಟ್ಟಿತು. ಎಲ್ಲಿ ಬೀಳುವೆನೋ ಎಂಬ ಭಯ. ಕೂಗುವದನ್ನು ನಿಲ್ಲಿಸಲಿಲ್ಲ. ಕಾಲು ನಡುಗುವದು ಹೆಚ್ಚಾಯಿತು. ಸೀತೆಗೆ ಏನೋ ಗಟ್ಟು ಹೇಳಹತ್ತಿದ. ಆದರೆ “ ಹಯ್ಯೋ ರಾಮಾ ” ಎಂದು ಒಂದೇಸವನೆ ಅಳುತ್ತಿದ್ದ ಸೀತೆಗೆ ರಾವಣನ ದುಃಖವೆಲ್ಲಿ ಕೇಳಿಸಬೇಕು? ಸೀತೆಯನ್ನು ಅಳುವಿನಿಂದ ಎಬ್ಬಿಸಲು ಮಾಡಿದ ಪ್ರಯತ್ನವೆಲ್ಲಾ ವ್ಯರ್ಥವಾಯಿತು. ರಾವಣನ ಕಾಲು ಥರಥರ ನಡುಗಿತು. ಸುತ್ತಲೂ ಸೂಡಿ, ಹಿಲಾಲು, ಕೇಹ! ರಾವಣನು ಧೊಪ್ಪೆಂದು ಬಿದ್ದ. ಹಗರಣ ನಿಂತಿತು.

ಮಧ್ಯರಾತ್ರಿ. ಮಾಸ್ತ್ಯಮ್ಮನ ಪೂಜೆ ನಡೆದಿತ್ತು. ಆರತಿಯ ಬೆಳಕು ಗುಡಿಯನ್ನೆಲ್ಲ ಬೆಳಗಿತ್ತು. ಎಲ್ಲವರೂ ಕೈಮುಗಿದು ನಿಂತಿದ್ದರು. ಮಾಸ್ತಿಯೂ ಒಂದು ಮೂಲೆಯಲ್ಲಿ ಮೌನವಾಗಿ ನಿಂತು ಮನಸ್ಸಿನಲ್ಲಿಯೇ ಬೇಡಿಕೊಂಡ. “ ಮಾಸ್ತ್ಯಮ್ಮಾ ಏನೇ ಆಗ್ಲಿ. ಜೀವ ಇರೂವರೇಗೂ ಯಾರ್ಕೇನ್ ಹೇಳ್ದ್ರು ಅನ್ನ ಮಾಡೂ ಶಕ್ತಿ ಕೊಡು. ಸಾಯೂವರೀಗೂ ಹಗ್ರಣ್ದಲ್ಲಿ ನನ್ನ ಕುಣ್ಸೂ ಭಾರ ನಿನ್ದು. ”

# ಬೆಳ್ಳಿ

ಮೂಲೆಹಳ್ಳಿಯಲ್ಲಿ ಸುಮಾರು ಮೂವತ್ತು ಗುಡಿಸಲುಗಳು. ಹೆಚ್ಚು ಕಡಿಮೆ ಅರ್ಧ ಫರ್ಲಾಂಗಿಗೆ ಒಂದರಂತೆ ಅವೆಲ್ಲ ಗುಡ್ಡದೋರೆಗೆ ಸಾಲುಗೊಂಡಿವೆ. ಒಮ್ಮೆ ಖಾಲೀ ಚಿಮಣೀ ಡಬ್ಬಿ ಬಡಿದರೆ ಅಲ್ಲಿಯವರೆಲ್ಲ ಒಂದೆಡೆಗೆ ಸೇರಬಹುದು. ಗುಡಿಸಲುಗಳ ಹಿಂದೆ ಕಾನು; ಮುಂದೆ ಜವಳು ಬಯಲು. ಗದ್ದೆ ಬಿಡಾರಗಳ ನಡುವೆ ಬಾಳೆಯ ತೋಟ. ಮೂಲೆಹಳ್ಳಿಯ ಬಯಲು ಹೊಡ್ಲು ಬೆಳೆಯುವದೆಲ್ಲಾ ಕಳೆಯೇ. ಅಂತೆಯೇ ಅಲ್ಲಿಯ ಒಕ್ಕಲಿಗರು ಒಂದು ಮೈಲಾಚೆ ಬಂಗಾರ ಮಕ್ಕಿಯಲ್ಲಿ ಹೊಲ ಮಾಡಿದ್ದರು. ಬೇಸಿಗೆಯಲ್ಲಿ ಜೇನು ಅಳಿಯಲು ಹೋದಾಗ ನಾನು ಬಂಗಾರ ಮಕ್ಕಿಯನ್ನು ಕಂಡಿದ್ದೆ. ಹೆಸರಿಗೆ ಸರಿಯಾಗಿದೆ ಮಕ್ಕಿ. ಎರಡು ಗುಡ್ಡಗಳ ನಡುವೆ ಅಗಲವಾದ ಬಯಲು. ನೀರು ಉರಿ ಬೇಸಿಗೆಯಲ್ಲೂ ಜುಳುಗುಡುತ್ತದೆ.

ಮೂಲೆಹಳ್ಳಿಯ ಗುಬ್ಬೆಗಳು ಮಾರೆತ್ತರದವು. ಒಳಗೆ ಹೋಗುವಾಗ ನೆಲಕ್ಕೆ ಮೂಗು ತಾಗುವಷ್ಟು ಬಾಗಬೇಕು. ಒಳಗೆ ಒಂದೆರಡು ಕೋಣೆಗಳು. ಕೋಳಿಯಗೂಡು, ಗಂಜೀಬೊಡ್ಡೆ, ಎತ್ತಿನ ಮೂಲೆ— ಎಲ್ಲವೂ ನಾಲ್ಕಾರು ತಟ್ಟೆಗಳಿಂದ. ಅಂಗಳದ ತೊಳಚೀಕಟ್ಟೆ ಮಾತ್ರ ಪ್ರತ್ಯೇಕ.

ಅಲ್ಲಿಯ ಲಂಗೋಟಿ ಬಾವೋರನ್ನು ನಮ್ಮ ಜಿಲ್ಹೆಯ ಹಳ್ಳಿಗಳಲ್ಲೆಲ್ಲ ಕಾಣಬಹುದು. ಹಗ್ಗದಂಥ ಉಡದಾರ, ಅದಕ್ಕೆ ಸಿಕ್ಕಿಕೊಂಡು ಕತ್ತಿ. ಮಣ್ಣು ನೀರು ಬಿಸಿಲುಗಳಿಂದ ಪುಟಗೊಂಡು ಬಾಳಿದ ಕಂಬಳಿ, ಲಂಗೋಟಿ ಮನೆಯ ಒಳಗೂ ಹೊರಗೂ ಇಷ್ಟೇ— ಅವರ ಅಗತ್ಯ, ಅಲಂಕಾರಗಳು. ಮುಂಗೈಗೆ 'ಗುಂಡು ಬಳೆ'ಯಿದ್ದವ ದೊಡ್ಡವ. ತಲೆಗೆ ಎಣ್ಣೆ ಸವರಿಕೊಂಡು ಜುಟ್ಟೆದಲ್ಲಿ ಹೂವು ಮುಡಿದವ ರಸಿಕ. ಕವಳದ ಚಂಚಿ ದೊಡ್ಡದಿದ್ದವ ಜಾತೀ ಗೌಡ. ಹೆಂಗಸರಿಗೆ ದಟ್ಟಿ. ಮಣಿಕಟ್ಟಿನಿಂದ ಮೊಣಕೈ ವರೆಗೆ ಬಳೆಗಳು.

ಕುತ್ತಿಗೆಯಲ್ಲಿ ಮಣಗಟ್ಟಲೆ ಭಾರದ ಮಣಿಸರಗಳು. ಕಿವಿಗೆ ಬೆಂಡು. ಕೋಳಿ ಆಕಳು ಎತ್ತುಗಳ ಸಂಖ್ಯೆಯೇ ಅವರ ಅಂತಸ್ತನ್ನು ನಿರ್ಣಯಿಸುವದು.

ಹೊತ್ತಾರೆ ಅಂಬಲಿ ಕುಡಿದು ಗಡಿಗೆ ತುಂಬಿಕೊಂಡು ಬಂಗಾರ ಮಕ್ಕಿಗೆ ಹೋದವರು ಬರುವದು ಜೈಗಿಗೆ. ಗಂಡಸರು ಹೂಡುವದು ಅಗೆಯುವದು ಮುಂತಾದ ಪುರುಷಯೋಗ್ಯ ಕೆಲಸಮಾಡಿದರೆ, ನೆಟ್ಟಿ ಕಳೇಕೀಳುವದು ಹೆಂಗಸರ ಪಾಲಿಗೆ. ಮರದಡಿಗೆ ಅಡಕಲಾಗಿರುವ ಗಂಜೀಬೊಡ್ಡೆಗಳಿಗೆ ನಾಯಿಗಳ ಕಾವಲು.

ಅವರು ಹೋರೆಯನ್ನೇನೂ ಬೇರೆ ವರ್ಣಿಸಬೇಕಾಗಿಲ್ಲ. ನಿಟ್ಟುಸಿರು, ಬೆವರಿನ ಜಳಕ ನಿತ್ಯದ ಪಾಡು. ಆದರೂ ಮಧ್ಯಾಹ್ನ ವಿಶ್ರಮಿಸಿಕೊಂಡಾಗ ನೋಡಬೇಕು ಅವರ ‘ ಗಪ್ಪ ’ ‘ ಪದ ’ ಕಿಲಕಿಲಾಟಗಳನ್ನು. ಬಾಯಿತುಂಬ ಕವಳ ಜಗಿದು ಹೆಂಗಸರು ಹೇನು ತೆಗೆಯಲು ಒಬ್ಬರಹಿಂದೊಬ್ಬರು ಸಾಲು ಹಿಡಿದು ಗಂಡಸರು ಅಸ್ತವ್ಯಸ್ತ ಬಿದ್ದುಕೊಂಡು ಊರಿನ ಯಾವದಾದರೊಂದು ಸುದ್ದಿಯ ಸೆರಗು ಹಿಡಿದರೆಂದರೆ ತೀರಿತು. ಒಂದು ತಾಸಿನೊಳಗೆ ದಣಿವಾರುತ್ತದೆ. ನಾಯಿಗಳು ನಾಲಿಗೆಯನ್ನು ಹೊರಗೆಹಾಕಿ ಗುಸುಗುಸು ಎಂದು ಶ್ವಾಸಬಿಡುತ್ತಿರುವಾಗಲೇ ಅವರು ಮತ್ತೆ ಕೆಲಸ ಸುರುಮಾಡುತ್ತಾರೆ.

ಗುಬ್ಬೆಗಳಿಗೆ ಬರಲು ಹೆಂಡತಿಯು ಬಚ್ಚಲೊಲೆಗೆ ಬೆಂಕಿ ಹಾಕುವಳು. ಬೆಚ್ಚಗೆ ಮಿಂದು ಅಂಬಲೀ ಸುರಿದು ನೆಲಕ್ಕೆ ಬೆನ್ನುಕೊಟ್ಟರೆ ಕೋಳಿಗಳೇ ಅವರನ್ನೆಬ್ಬಿಸಬೇಕು. ಬೆಳುದಿಂಗಳಿದ್ದಾಗ ಮಾತ್ರ ಅವರ ‘ ಟಿಮ್ಕಿ ’ ‘ ಗುಮ್ಟೆ ’ ಗಳು ಅವರನ್ನು ನಿದ್ದೆ ಹೋಗಗೊಡುವದಿಲ್ಲ.

ತಿಪ್ಪನು ಆ ಲೋಕಕ್ಕೆ ಕುಬೇರ. ತಿಪ್ಪಿ ಅವನ ‘ ಅವ್ವ ’. ಬೆಳ್ಳಿ ಒಬ್ಬಳೇ ಮಗಳು. ಶ್ರೀಮಂತರ ಮನೆಯವಳಾದುದರಿಂದ ತಿಪ್ಪಿ ದುಡಿಯಲಿಕ್ಕೆ ಹೋಗುತ್ತಿರಲಿಲ್ಲ. ಮನೆಯ ವ್ಯವಸ್ಥೆ ನೋಡಿಕೊಳ್ಳುವದು ಆ ‘ ಗೃಹಿಣಿ ’ಯ ಕೆಲಸ. ಕರುವನ್ನು ಮೇಯಿಸಿಕೊಂಡು ಬರುವದು ಬೆಳ್ಳಿಗೆ ಕಟ್ಟಿಟ್ಟಿತ್ತು.

ಬೆಳ್ಳಿಗೆ ತೊಟ್ಟಿಲು ಮದುವೆಯಾಗಿತ್ತು. ಅವಳಿಗೆ ಆರು ವರುಷ ಆಗುವದರೊಳಗೇ ಅವಳ ಬಾಲಪತಿಯು ಕಾಲವಶನಾಗಿದ್ದನು. ಇದರಿಂದ ತಂದೆ ತಾಯಿಗಳು ಮಗಳನ್ನು ಬಹಳ ನಾಜೂಕಾಗಿ ನೋಡಿಕೊಳ್ಳುತ್ತಿದ್ದರು.

ಕಲ್ಲನು ತೀರ ಬಡವ. ಅವನಿಗೆ ಅವನೇ ಗತಿ. ಕಾಳು ನಾಯಿಯು ಅವನ ಗೆಳೆಯ, ಮೈಗಾವಲು. ಅವನಿಗೆ ೨೪ ವರುಷ. ಕಂಬಳಿಸಹ ಚೆನ್ನಾಗಿಲ್ಲ. ಕೋಳಿ ಇಲ್ಲವೇ ಇಲ್ಲ. ಹೆಣ್ಣು ಯಾರು ಕೊಡಬೇಕು ಅವನಿಗೆ? ಬೆಳ್ಳಿಯ ಕಡೆಗೆ ಅವನ ಒಲವು. ಆದರೆ ತಿಪ್ಪನಿಗೆ ಕಲ್ಲನೆಂದರೆ ತೀರಿತು. ಇಲ್ಲದ ಸಿಟ್ಟು. ಒಮ್ಮೆ ಕಲ್ಲನಿಗೆ ತಿನ್ನಲು ಏನೂ ಸಿಗದಿರಲು ತಿಪ್ಪನ ಕೋಳಿಯೊಂದನ್ನು ಕದ್ದು ಹಸಿವೆ ಹಿಂಗಿಸಿದನಂತೆ ಅದಕ್ಕಾಗಿ ತಿಪ್ಪನು ಕಲ್ಲನನ್ನು ಜನ್ಮಜನ್ಮಾಂತರದ ಹಗೆಯೆಂದು ತಿಳಿದಿದ್ದ. ಕಲ್ಲನನ್ನು ಕೊಂದು ಅವನ ಮಾಂಸವನ್ನು ತನ್ನ ಕೋಳಿಗೆ ಹಾಕದಿದ್ದರೆ ತಾನು ತಿಪ್ಪನಲ್ಲವೆಂದು ಪಣ ತೊಟ್ಟಿದ್ದ.

ತಿಪ್ಪನು ಹೊಲಕ್ಕೆ ಹೋಗಿದ್ದ. ತಿಪ್ಪಿ ನೀರು ಕಾಯಿಸಲು ಜಗ್ಗಿಗಾಗಿ ಹೋಗಿದ್ದಳು. ಬೆಳ್ಳಿ ಕರು ಮೇಯಿಸರು ಬಯಲಿಗೆ ಇಳಿದೊಡನೆಯೇ ಅದು ಫುರ್ ಫುರ್ ಎಂದು ಪುಟಿಯುತ್ತ ಹಗ್ಗ ತಪ್ಪಿಸಿಕೊಂಡು ಓಡಿಹೋಯಿತು; ಅತ್ತಿತ್ತ ನೆಗೆದಾಡಿ ಹೊಡ್ಲಲ್ಲಿ ಹುಗಿದುಬಿತ್ತು. ಮೋರೆ ಬೆನ್ನು ಮಾತ್ರ ಕಾಣುತ್ತಿತ್ತು. ಅದನ್ನೆಬ್ಬಿಸಹೋಗಿ ಬೆಳ್ಳಿಯೂ ಸೊಂಟದವರೆಗೆ ಹುಗಿದುಕೊಂಡಳು. ಕರುವು ‘ ಬೇs ಬೇs ’ಎಂದೂ ಬೆಳ್ಳಿಯು ‘ ಅವ್ವಾ ಅವ್ವಾ ’ ಎಂದೂ ಕೂಗತೊಡಗಿದರು.

ಬಾಳೆಯ ಗಿಡಗಳಿಗೆ ನೀರು ಬಿಡುತ್ತಿದ್ದ ಕಲ್ಲನಿಗೆ ಕೂಗು ಕೇಳಿತು. ಅವನು ಅಲ್ಲಿಗೆ ಬಂದ. “ ಇದೇನಾಯ್ತೇ ಬೆಳ್ಳಿ ? ”

“ ಕಡೇಗ್ಹೇಳ್ತಿ ಮೊದ್ಲೆಬ್ಸೋ ”

ನೀಡಿದ ಕೈ ಎಳೆದು ಕಲ್ಲ ಬೆಳ್ಳಿಯನ್ನೆಬ್ಬಿಸಿದ. “ ನೀ ಹೋಗ್ಬ್ಯಾದು. ನಾ ಕರೂ ಎಬ್ಸ್ತೆ ” ಎಂದಳು ಬೆಳ್ಳಿ. “ಹೊಡ್ಲಲ್ ಮತ್ತುಗ್ದ್ ಬಿದ್ರೆ ?” ಎನ್ನುತ್ತಾ ಕಲ್ಲನು ತೋಟಕ್ಕೆ ಹೋಗಿ ಬಾಳೆಯ ಕಾಲನ್ನು ತಂದು ಕರುವನ್ನೆಬ್ಬಿಸಹತ್ತಿದ. ರಾಡಿಯ ಸೀರೆಯನ್ನು ಹಿಂಡುತ್ತ ಬೆಳ್ಳಿ ಕರುವನ್ನೇ ನೋಡುತ್ತಿದ್ದಳು. ಕರು ಎಬ್ಬಿಸುವ ಕಲ್ಲನ ಕಣ್ಣು ಇತ್ತಕಡೆಗೇ ಇತ್ತು. ಕರುವನ್ನೆಳೆದು ಹಗ್ಗ ಕಟ್ಟಿಕೊಟ್ಟ. ಒಬ್ಬರನ್ನೊಬ್ಬರು ಮೂಕರಾಗಿ ನೋಡಿದರು ‘ ಬೆ....ಳ್ಳಿ ”

"ನಮ್ಮಪ್ಪ ಬಯ್ತಾನೆ" ಎನ್ನುವಾಗ ಅವಳು ಅಡ್ಡ ಮೋರೆ ಹಾಕಿದಳು. ಕರುವು ರಾಡಿಯ ಬಾಲಬಡಿದು ಇಬ್ಬರ ಮೈಗೂ ಧಾರೆಯೆರೆಯಿತು. 'ಬೇ' ಎಂದು ಪೌರೋಹಿತ್ಯವಾಯಿತು.

ಕಾಲಡಿಯ ಜವಳಿನಿಂದ ಎದ್ದು ಒಡೆಯುತ್ತಿರುವ ಗುಳ್ಳೆಗಳನ್ನು ನೋಡುತ್ತಿದ್ದ ಬೆಳ್ಳಿಗೆ ಎದೆಯಲ್ಲಿ ಬಿಸಿನೀರು ಸುರಿದಂತಾಯಿತು. "ಬೆಳ್ಳಿ.... ಏ ಬೆಳ್ಳಿ. ಏ ಹಂಜ್ಮಾರ್ತಿ ಎಂತಾ ಮಾಡ್ತಿ?" ಎಂದು ತಿಪ್ಪಿ ತೋಟದಿಂದಲೇ ಕಂಡು ಗುಡುಗಿದಳು. "ಕಲ್ಲಾ, ನಿಮ್ಮನೆ ಹಾಳಾಗ. ನಮ್ಕೋಳೀ ತಿಂದಿ........ನಮ್ಮಗ್ಳ್ನ... ಥೂ ನಿನ್ಕುಲ ಹಾಳ್ಬೀಳ...."ಎಂದು ಬಾಯಿ ಹಾಯ್ದಂತೆ ಬಯ್ಯುತ್ತ ಬೆಳ್ಳಿಯ ರಟ್ಟೆ ಹಿಡಿದು ಕರುವಿನೊಡನೆ ದರದರ ಎಳಕೊಂಡು ನಡೆದಳು. ಬಾಲ ಅಲ್ಲಾಡಿಸುವ ಕಾಳುವಿನೊಡನೆ ಕಲ್ಲ ಬಿಡಾರಕ್ಕೆ ಕಾಲೆಳೆದ.

ರಾತ್ರಿ ಬೆಳ್ಳಿಯ ಮೈ ಕಾದು ಹಾಸಿಗೆ ಹಿಡಿದಿದ್ದಳು. ಗಂಡ ಹೆಂಡರಿಬ್ಬರೂ ಹಲ್ಲು ಕಡಿಯುತ್ತ ಏನೇನೋ ಹೊಂಚು ಹಾಕುತ್ತಿದ್ದರು. ಮಾತಾಡುತ್ತಿರುವಾಗಲೇ ತಿಪ್ಪನಿಗೆ ನಿದ್ದೆ ಬಂತು.

ಎಷ್ಟೋ ಹೊತ್ತಿನ ಮೇಲೆ ತಿಪ್ಪಿ ಗಂಡನನ್ನು ಅಲುಗಾಡಿಸಿ ಎಬ್ಬಿಸಿದಳು. ತಿಪ್ಪನು ಕಂಬಳಿಯ ಮುಸುಕು ಹಾಕಿಕೊಂಡು ಹೊರಗೆ ಹೊರಟ. "ಕಾಳು ಕಚ್ಚೀತು........ಕೂಡ್ಲೆ ಬಂದ್ಬುಡಿ ಮನೀಗೆ" ಎಂದೇನೋ ಉಪದೇಶಿಸಿದಳು ತಿಪ್ಪಿ. ತಿಪ್ಪ ಕತ್ತಿಯನ್ನು ಗಟ್ಟಿಯಾಗಿ ಹಿಡಿದ.

ಇರುಳಿನ ಶಾಂತಿಯನ್ನು 'ಧುಡುಂ' ಎಂಬ ಸಪ್ಪಳವೂ ನಾಯಿಗಳ ಬೊಗಳಾಟವೂ ಭೇದಿಸಿತು. ಕಲ್ಲನು ಬೆಚ್ಚಿ ಬಿದ್ದ. ಬಾವಿಯ ದಂಡೆಗೆ ಕಾಳು ಬೊಗಳುತ್ತಿತ್ತು. ಅಲ್ಲಿಗೆ ಬರುತ್ತಾನೆ "ಆಯ್ಯೋ ಸತ್ನೋ-ಓ ಕಲ್ಲಾ.." ಎಂಬ ಆರ್ತ ಧ್ವನಿ ಕೇಳಿಬರುತ್ತಿತ್ತು ಬಾವಿಯಿಂದ. "ನಾನೆಯೋ ಕಲ್ಲಾ.. ನಾನೇಯು ತಿಪ್ಪ."

ಅಂತೂ ತಿಪ್ಪನನ್ನು ಹೊರಗೆ ತಂದುದಾಯಿತು. ಅವನ ಪೆಟ್ಟಿಗೆ ಎಣ್ಣೆ ಹಚ್ಚಿದ ಕಲ್ಲ. "ಇಷ್ಟೊತ್ತ್ನಾಗೆ ಇಲ್ಯಾಕ್ಬಂದಿ ತಿಪ್ಪ?" ಎಂಬ ಪ್ರಶ್ನೆಯಿಂದ ತಿಪ್ಪನ ಮೋರೆ ಇನ್ನಷ್ಟು ಕಂದಿತು. ಆದರೆ ನಾಲಿಗೆ ತಡವರಿಸಲಿಲ್ಲ. "ಏನಂಬೂದು ಕಲ್ಲಾ. ಬೆಳ್ಳೀ ಮೇಲೆ ನಿನ್ಪ್ರೀತಿ ಅದೇಂತ್ ಕೇಳಿ ಭಾಳ

ಆನಂದಾಯ್ತು. ಅವ್ಳ್ಗ ನಿಂಗೆ ಕೊಡಬೇಕು.....ಮದ್ವೆ ಮಾಡ್ಕೈಕೂಂತ.... ಯ್ಯ....ಹಾಯ್....ಈ ಕಾಲೀಗೆ ಭಾಳ್ ಪೆಟ್ಟು........”

“ ಹೊತ್ತಾರೆ ಹೇಳೂಕಾಗ್ತಿತ್ತಿಲ್ವ? ಚೂಡೀನೂ ತರ್ಲೇ ಇಲ್ಲ. ಕತ್ಲೇಲಿ....”

“ ಭಾಳ್ ಸಂತೋಸಾತು ಈ ರಾತ್ರ್ಯೇ ಅವ್ಳ್ಗ ನಿಂಗೆ ಕೊಟ್ಬಿಡ್ಬೇಕೂಂತ ಬಂದೆ. ನಮ್ಮ್ ಮನ್ಯವ್ರೂ ಹೋಗ್ಬುಡಿ ಈಗ್ಳೇ ಅಂದ್ರು....”

ಬೆಳ್ಳಿ ಮೂಡುವಾಗ ಬೆಳ್ಳಿ ಕಲ್ಲನನ್ನು ಕೂಡಿದಳು.

ಬಾವಿಯಲ್ಲಿ ಬಿದ್ದ ತಿಪ್ಪನ ಕತ್ತಿ ಎಷ್ಟು ಮುಳುಗಿ ನೋಡಿದರೂ ಸಿಗಲಿಲ್ಲ.

# ಸಂಧಿಕಾಲ

ನಮ್ಮ ದೇಶವೆಲ್ಲಾ ಒಂದು ಸಂಧಿಕಾಲದಲ್ಲಿರುವಾಗ ' ಚೌಕು ಗ್ರಾಮು ' ಪ್ರಾಚೀನವೆನಿಸಿಕೊಳ್ಳುವದುಂಟೆ ? ಅದೂ ಅರ್ವಾಚೀನದ ಕಡೆಗೆ ನುಗ್ಗುತ್ತಿದೆ. ಮಾದಿಗರಿಂದ ಹಿಡಿದು ಬೇದಿಗ–ಬ್ರಾಹ್ಮಣರ ವರೆಗೆ ಒಂದು ಒಗೆಯ ಬದಲಾವಣೆ ಹಬ್ಬಿ ಬಂದಿದೆ. ನಮ್ಮ ' ಚೌಕುಗ್ರಾಮು ' ವಂತೂ ಚುರುಕು ಮನಸ್ಸು ಮಾಡುವದೇ ತಡ ಗೂಳಿ ಹಾಯ್ದಂತೆಯೇ.

ಕೆಲಸಿ ಚೆನ್ನಪ್ಪನ ಮನೆತನ ಪುರಾತನ ಕಾಲದಿಂದಲೂ ನಮ್ಮೂರಿನ ನಾಪಿಕ ಉದ್ಯಮ ಸಾಗಿಸಿಕೊಂಡು ಬಂದಿದೆ. ಮೈರೆಯಿಂದಲೇ ಅವರ ಹೊಟ್ಟೆ ಪಾಡು ನಡೆಯಬೇಕು. ಒಂದು ಸಣ್ಣ ತೋಟದ ಚೂರೂ ಇದೆ ಎನ್ನಿ. ಆದರೂ ಅವರ ಕಣಜ ಗದ್ದೆಗಳ ಬದಿಗೆ ಗೇಣಗಲ ಬಿಡುವ ಮೈರೆಯು ತೆನೆಗಳಿಗಾಗಿಯೇ ಬಾಯಿ ತೆರೆದಿರಬೇಕು.

ಸದ್ಯ ಶಂಕರನು ಚೌಕುಗ್ರಾಮುದ ಕೇಶಚ್ಛೇದನ ಕರ್ಮ ನಡೆಸುತ್ತಿದ್ದಾನೆ. ಪಿತ್ರಾರ್ಜಿತ ವಿದ್ಯೆ, ಪಿತ್ರಾರ್ಜಿತ ಹಡಪ, ಕೂಪು, ಕನ್ನಡಿ, ಹಣಿಗೆ. (ಸಾಬು ಸಹಾ ಇದ್ದಂತಿದೆ) ಅಜ್ಜ ಮುತ್ತಜ್ಜರಂತೆ ಬೋಳಿಸುವ ಕೆಲಸದಲ್ಲಿ ಶಂಕರ ಕುಶಲ. ತಿಂಗಳಿಗೊಮ್ಮೆ ಒಂದು ಕೇರಿಯ ತುದಿಗೆ ತೋಟದಲ್ಲಿ ತನ್ನ ಕಛೇರಿ ಮಾಡಿದನೆಂದರೆ ಬೆಳಗಿನ ೧೧ ರಿಂದ ೩ ರೊಳಗೆ ಇಡೀ ಕೇರಿಯ ಬೆಳೆದ –ಕತ್ತಿ ಹಾಕಲು ಯೋಗ್ಯವಾದ– ಕೂದಲೆಲ್ಲಾ ಆ ತೋಟದಲ್ಲಿ ಜೈ ಎನ್ನುತ್ತವೆ. ಅದೊಂದು ಕ್ಷೇತ್ರ.

ಶಂಕರ ಬರುವದು ಒಂದು ಆದಿತ್ಯವಾರ. ಇಂತಹ ಆದಿತ್ಯವಾರವೇ ಎಂಬ ನಿಯಮವಿಲ್ಲದಿದ್ದರೂ ೧–೧|| ತಿಂಗಳಿಗೊಮ್ಮೆ ಎಂದು ಅನುಮಾನದಿಂದ ಹೇಳಬಹುದು. ಆದಿನ ಅನೇಕರ ಹುಟ್ಟಿದ ವಾರ. ಅವರು ಮಂಡೆ ಮಾಡಿಸಿಕೊಳ್ಳುವದಿಲ್ಲ. ಇನ್ನು ಅದೇದಿನ ಕೆಲವರಿಗೆ ಅಮವಾಸ್ಯೆ, ಹುಣ್ಣಿವೆಗಳೆಲ್ಲಾ ಬಂದುಬಿಡುತ್ತವೆ. ಕೆಲವರಿಗಂತೂ ಅದು ಮಂಗಳವಾರವೋ ಶನಿ

ವಾರವೋ ಎಂಬ ಸಂಶಯ ಮೂಡಿಬಿಟ್ಟು ಪಂಚಾಂಗ ಬಿಚ್ಚಿ ಸಂಶಯ ನಿವಾರಿಸಿಕೊಳ್ಳಬೇಕಾಗುತ್ತದೆ. ಇಷ್ಟೆಲ್ಲಾ ಆಗುವುದರೊಳಗೆ ಶಂಕರ ತನ್ನ ಕಛೇರಿ ಮುಚ್ಚಿದರೂ ಮುಚ್ಚಿದನೇ. ಆದರೆ ಕೆಲವರು ಪಕ್ಕಾ ! ಮುಂಡೆ ಬೆಳಯದೇ ಇದ್ದರೂ ಮುಂಜಾಗ್ರತೆ ತೆಗೆದುಕೊಂಡು ನ್ಯೈರೆಯ ಭತ್ತವನ್ನು ಸಾರ್ಥಕ ಪಡಿಸುತ್ತಾರೆ.

ಶಂಕರನ ಉಪಕರಣಗಳ ವಿಷಯವಾಗಿ ನನಗೇನೂ ಹೇಳಬೇಕಿಲ್ಲ. ' ಪಿತ್ರಾರ್ಜಿತ ' ಎಂಬಲ್ಲಿ ಅವೆಲ್ಲ ಅಡಕವಾಗಿವೆ. ಯಾವುದೇನೇ ಇರಲಿ. ಕೂಪು ಮಾತ್ರ ಕರಗಸವೆಂದು ಎಲ್ಲರೂ ಒದರುತ್ತಾರೆ. ಒಡಕು ಪಾಟಿಯ ಮೇಲೆ ಮಸೆದು ಕೊಡುವ ಪುಣ್ಯಾತ್ಮರೂ ಇದ್ದಾರೆ.

ಇದು ಸಂಧಿಕಾಲವೆಂದು ಮೊದಲೇ ಹೇಳಿದೆನಲ್ಲ. ಕಳೆದ ಸಲ ಶಂಕರನ ಮನೆಗೇ ನಾನು ಸವಾರಿ ಮಾಡಬೇಕಾಯಿತು. ಆಗ ಅವನು ತನ್ನ ಪರಿಸ್ಥಿತಿಯನ್ನು ನನ್ನಮುಂದೆ ಪಸರಿಸಿಬಿಟ್ಟ ಕಣ್ಣೀರಿನಿಂದ ನನಗೆ ಬಹಳ ಕನಿಕರವಾಯಿತು. ನಾನಾದರೂ ಏನು ಮಾಡಲಿ ? ಸಂಧಿಕಾಲ. ಜನರೆಲ್ಲ ಬದಲಾಗಿದ್ದಾರೆ. ಒಬ್ಬನ ಹೊಟ್ಟೆಗೆ ತತ್ವಾರವೆಂದು ಊರೆಲ್ಲಾ ಮತ್ತೆ ಬೋಳಿಸಿಕೊಳ್ಳಲು ತಯಾರಾಗುವದು ಸಾಧ್ಯವೇ ಇಲ್ಲ.

ಮುಖ್ಯವಾಗಿ ಇವಿಷ್ಟು ನೆನಪಿಡತಕ್ಕ ಸಂಗತಿಗಳು.

ಮೊದಲನೆಯದಾಗಿ— ಇದೇ ಹೆಚ್ಚಿನ ಕಾರಣ—ಶಂಕರನ ಕೂಪಿಗೆ ' ಕ್ರಾಪು ' ಮಾಡಲು ಬರುವದಿಲ್ಲ. ಜನರೆಲ್ಲ ತಲೆಗೆ ಕಲಾಯಿ ತೆಗೆಸಿಕೊಳ್ಳುವದನ್ನು ನಿಲ್ಲಿಸಿರುವಾಗ (ಹಳೇ ಹದ್ದುಗಳನ್ನು ಬಿಡಿ. ಅವರ ತಲೆ ' ಸಹರಾ' ದಂತೆ ಆಗಿವೆ) ಶಂಕರನ ಹಡಪ ಈ ವಿದ್ಯೆಗೂ ಅನುವು ಮಾಡಿಕೊಡಬೇಕಾಗಿತ್ತು.

ಎರಡನೆಯದಾಗಿ ಶಂಕರನು ನ್ಯೈರೆ ಸಿಗುತ್ತದೆಂಬ ಧೈರ್ಯದಿಂದ (ತಪ್ಪಿಸುವಂಥ ಪಾಪವನ್ನು ' ಚೌಕುಗ್ರಾಮ 'ದ ಸಂಭಾವಿತ ಸಭ್ಯಗ್ರಾಸ್ತರು ಮಾಡುವದಿಲ್ಲವೆಂದು ತಪ್ಪು ತಿಳಿದು) ಎರಡು ತಿಂಗಳಿಗೊಮ್ಮೆಯೂ ಕೇರಿಗಳಿಗೆ ಬಾರದೆ ಬೆಳೆದ ಜುಟ್ಟು ಗಡ್ಡಗಳೇ (ಆದರಲ್ಲೂ ವಿಧವೆಯರು) ಅವನ ಮನೆಗೆ ಎಡತಾಕುವಂತೆ ಮಾಡಿದುದೂ, ಕೂಪಿಗೆ ದಮ್ಮಯ್ಯ ಎಂದರೂ ಸಾಣೆ ಹಿಡಿಸಿಕೊಂಡು ಬರದೆ ಕರಗಸ ಪ್ರಯೋಗ ಮಾಡಿದುದೂ ಗ್ರಾಮ ದೇವತೆಯ ಮನ

ಸ್ಸಿಗೂ ಬರಲಿಲ್ಲ. (ಕೆಲಸಿಯ ಮನೆತನದ ವೈರೆಯನ್ನು ತಪ್ಪಿಸಿದರೆ ಪಾಪ ಬರುವದೋ ಎಂದು ಶ್ರೀ ದೇವರಲ್ಲಿ ಪ್ರಸಾದ ಕೇಳಲು ಪಾಪವಲ್ಲವೆಂದೇ ಆಯಿತಂತೆ. ದೇವರ ಕ್ಷಮೆಗೂ ಮಿತಿಯುಂಟಲ್ಲವೇ ?)

ಮೂರನೆಯದಾಗಿ ಗಾಂಧಿಯುಗದ ಗಾಳಿ ನಮ್ಮ ಗ್ರಾಮಕ್ಕೂ ಬೀಸಿ ಸ್ವಾವಲಂಬನವೇ ಸ್ವರ್ಗದ ಹಾದಿಯೆಂಬ ತತ್ವ ಹಬ್ಬಹತ್ತಿತು. ಇದರಿಂದ ಕೇರಿಗೊಂದು ಕೂಪು ಬಂದು ನೆಲಸಿ ಗ್ರಾಸ್ತರು ತಾವೇ ಕೆಲಸಿಯ ಕಾರ್ಯ ಮಾಡಿಕೊಳ್ಳಹತ್ತಿದರು. ಪರಸ್ಪರ ಸಹಕಾರೀ ಸಂಘಗಳೂ ನಡೆಯಹತ್ತಿರುವದು ಶಂಕರನಿಗೆ ತೀರ ಮುಳುವಾಯಿತು.

ನಾಲ್ಕನೆಯದಾಗಿ ಪುನರ್ವಿವಾಹ ಸಂಸ್ಥೆಯೊಂದು ಹುಟ್ಟಿಕೊಂಡು ಎಲ್ಲೆಲ್ಲೂ ಸಕೇಶಿಗಳೇ ಹೆಚ್ಚಾಗಹತ್ತಿದ್ದಾರೆ. ಇದು ವಿಧವೆಯರ ಹಿತಕಾರಿಯಾದರೂ ಶಂಕರನ 'ವೃತ್ತಿ'ಗೆ ಇದರಿಂದ ಅಪಾರ ಹಾನಿಯಾಗಿದೆಯೆಂದು ಬೇರೆ ಹೇಳಬೇಕಾಗಿಲ್ಲ.

ಐದನೆಯದಾಗಿ ಚಂದಾವರದ ಕಡೆಯಿಂದ ಕ್ರಾಪು ಹೊಡೆಯಲು ಬರುವ ಕೆಲವು ಹಜಾಮರು ಒಂದೇ ಆಣೆಗೆ (ಕೊರಸಿದರೆ ಅರ್ಧ ಆಣೆಗೂ) ಉತ್ತಮ ಕ್ರಾಪು ಹೊಡೆದು ಹೋಗಹತ್ತಿದ್ದಾರೆ. ಇವರು ವಾರಕ್ಕೊಮ್ಮೆ ಬರುತ್ತಾರೆ. ವೈರೆಯಿಲ್ಲ. ಮಿಶನ್, ಕತ್ತರಿ, ಪೌಡರು ಸಹಾ ಇವರ ಹತ್ತರ ಇರುವದರಿಂದ ಇರುವೆಯಂತೆ ಜನ ಅವರನ್ನು ಮುತ್ತುತ್ತಾರೆ.

ಇನ್ನೂ ಚಿಕ್ಕಪುಟ್ಟ ಕಾರಣಗಳು ಅನೇಕ ಇವೆಯಾದರೂ ಇಷ್ಟೇ ಮಹತ್ವದವು.

ಕಳೆದಸಲ ಶಂಕರನ ಮನೆಗೆ ನಾನು ಹೋಗಿದ್ದೆನೆಂದೆನಲ್ಲ. ಅವನ ಕಣ್ಣೀರು ನನ್ನನ್ನು ಕರಗಿಸಹತ್ತಿತು. ಬೇಸಿಗೆಯ ಸೂಟಿಯಾದ್ದರಿಂದ ಕ್ರಾಪಿನ ಕಡೆಗೆ ವಿಶೇಷ ಗಮನವಿತ್ತಿಲ್ಲ ನನ್ನದು. "ನೋಡು ಶಂಕರ ನೀನೂ ಕ್ರಾಪು ಹೊಡೆಯಲು ಕಲಿ" ಅಂದೆ. "ಕಲಿಯಬೇಕಲ್ರಿ. ಮೊದಲು ತಲೆ ಕೊಡುವವರೇ ಇಲ್ಲ" "ಹಾಗಾದರೆ ನನ್ನ ತಲೆಗೂದಲು ತುಂಬಾ ಬೆಳೆದಿದೆ. ಕಲಿಯುವದಾದರೆ ಈ ನನ್ನ ಕ್ರಾಪನ್ನೇ ಇದರಂತೇ ಸಣ್ಣದಾಗಿ ಹೊಡೆ"

ಕರುಣೆಹುಟ್ಟಿ ಕ್ರಾಪನ್ನು ಅವನ ಕೈಯಲ್ಲಿ ಕೊಟ್ಟೆ. ಮುಗಿಯುವವರೆಗೂ ಕಣ್ಣು ತೆರೆಯದೆ ಕುಳಿತೆ. ೨–೩ ತಾಸು ನನ್ನ ಪ್ರದಕ್ಷಿಣೆ ಮಾಡಿ

ಇದ್ದ ಮುರುಕು ಕತ್ತರಿ ಹಣಿಗೆಗಳಿಂದಲೇ ದೇವರಿಗೆಲ್ಲಾ ಹರಿಕೆ ಹೇಳಿಕೊಳ್ಳುತ್ತ " ಈಗ ನೋಡಿ " ಎಂದು ತನ್ನ ಕನ್ನಡಿ ಕೊಟ್ಟ. ಅದರಲ್ಲಿ ನೋಡಿದರೆ ನನ್ನ ಕಿವಿಯೂ ಪೂರ್ಣವಾಗಿ ಕಾಣದು. ಕೆರೆ ಹೊಂಡಕ್ಕೆ ಹೋಗಿ ನೆಳಲಿನಲ್ಲಿ ಕ್ರಾಪಿನ ತಪಾಸಣೆ ನಡಿಸಿದೆ. ಎದ್ದು ಕಾಣುವಷ್ಟೇನೂ ಕೆಟ್ಟಿತ್ತಿಲ್ಲ. " ಹೀಗೇ ನಾಲ್ಕಾರು ಸಲ–ನಿಮ್ಮ ಮನೆಯ ಹುಡುಗರಿಗೇ–ಕ್ರಾಪು ಹೊಡೆದು ಸಾವಾನು ಅರಿಸಿಕೊ. ಅಂದರೆ ಏನೂ ಭಿಸಾತಿಲ್ಲ " ಅಂದು ಮನೆಗೆ ಬಂದೆ.

ದಾರಿಯಲ್ಲಿ ಸಿಕ್ಕವರೆಲ್ಲಾ ನನ್ನ ಕ್ರಾಪಿನ ವಿಷಯವಾಗೇ ಮಾತಾಡಿದರು. " ಯಾವ ಅಚಾರಿಯಪ್ಪಾ ನಿಮ್ಮ ಕ್ರಾಪು ಮಾಡಿದವ " ಅಂದರು. ನಾನು ಬೇಕಂತೇ ಶಂಕರನ ಹೆಸರು ಹೇಳದೆ—" ಆ ಚಂದಾವರದವರು ಏನೋ ಅವಸರದಲ್ಲಿ ಮಾಡಿದರು " ಅಂದೆ. ಮನೆಯವರಂತೂ " ಹಿಂದೇ ಹೋಗಿ ಬೋಳಿಸಿಕೊಂಡಾದರೂ ಬಾ. ಒಂದು ವೇಳೆ ಶಂಕರ ಮಾಡಿದರೂ ಹೀಗೆ ಮಾಡಲಿಕ್ಕಿಲ್ಲ ಯಾವ ಕುಂಬಾರ ಅವ ? " ಎಂದು ಬಿಟ್ಟರು. ಕನ್ನಡಿ ನೋಡಿದೆ. ಮತ್ತೆ ಶಂಕರನ ಮನೆಗೆ ಪ್ರಯಾಣ ಬೆಳಸಬೇಕಾಯಿತು.

" ನೋಡು ಶಂಕರ. ಕ್ರಾಪು ಅಡ್ಡಿಯಿಲ್ಲ. ಆದರೂ ಮೊದಲನೇಸಲ ಮಾಡಿದ್ದು. ಸಾಹಿತ್ಯ ಇಲ್ಲ. ನೀನು ಪ್ರಯತ್ನ ಪಟ್ಟರೆ ಒಂದೇ ವಾರದಲ್ಲಿ ಕಲಿಯಬಹುದು. ಆದರೆ.... ಈ ಕ್ರಾಪನ್ನು ಸದ್ಯ ಇಳಿಸಿಬಿಡು " ಅಂದೆ. ತನ್ನ ಕುಶಲಕಲೆ ಅಷ್ಟೇನೂ ಕಡಿಮೆಯದಲ್ಲವೆಂಬ ಹೆಮ್ಮೆಯಿಂದ ಶಂಕರ ನನಗೆ ಗಾಂಧಿಕ್ರಾಪು ಮಾಡಿಕೊಟ್ಟ !

ಮೊನ್ನೆ ಶಂಕರನ ಪ್ರಗತಿಯನ್ನು ಕಾಣಲು ಹೋಗಿದ್ದೆ. ಅಡ್ಡಿಯಿಲ್ಲ. ಮಕ್ಕಳ ಮೇಲೆ ಅವನು ಮಾಡಿದ ಪ್ರಯೋಗ ಚನ್ನಾಗಿದೆ. ಅವನದೊಂದು ವರುಷದ ಯೋಜನೆ ( One your scheme ) ಯೆಂದು ಹೇಳಬಹುದು. ಈ ಅವಧಿಯಲ್ಲಿ ಅವನು ಒಳ್ಳೇ ಕ್ರಾಪಿನ ಕೆಲಸಿಯಾಗುವದರಲ್ಲಿ ಸಂಶಯವಿಲ್ಲ.

ಇನ್ನು ಒಂದು ವೇಳೆ ಅವನಿಂದಾಗದಿದ್ದರೆ ಅವನ ಮಕ್ಕಳಾದರೂ ಆಗಬಹುದಲ್ಲ.

# ಅಂತೆ

●

ನಮ್ಮ ಬಿಡಾರದ ತೋಟದಲ್ಲಿ ಒಂದು ಚೌಡಿಯಿರುವದಂತೆ. ಈಗಲೂ ನಮ್ಮ ಮನೆಯವರು ಆ ಚೌಡಿಗೆ ವರುಷಕ್ಕೊಂದು ಬಾಳೆಕೊನೆಯ ಪೂಜೆ ಕೊಡುತ್ತಾರೆ. ಇತ್ತಲಾಗಿ ಚೌಡಿಯ ಪ್ರಭಾವವೇನೂ ಕಾಣುವದಿಲ್ಲವಾದರೂ ರಾತ್ರಿಹೊತ್ತು ಒಮ್ಮೊಮ್ಮೆ ಬಳೆಸರದ ಸದ್ದಾಗುವದಂತೆ. ಚೌಡಿಗೆ ಪೂಜೆ ಒಪ್ಪಿಸುವ ಕೆರೆಯ ಬದಿಗೆ ಅಶುಚಿಯಾದರೆ ಚೌಡಿ ಅಳುವದೂ ಕೇಳಿಸುತ್ತ ದಂತೆ. ಪುಣ್ಯವಂತರಿಗೆ—ಆಸ್ತಿಕರಿಗೆ—ಮಾತ್ರ ಅದು ಕೇಳಿಸುತ್ತದೆಂಬುದು ನಂಬಿಗೆಯ ಮಾತು. ನಾನು ಹಲವು ಸಲ ಇದನ್ನೆಲ್ಲ ಕೇಳಲು ಕಿವಿ ಎಳೆದು ಕೊಂಡು ಬಿಡಾರದಲ್ಲಿ ಇರುಳೆಲ್ಲ ಕುಳಿತದ್ದುಂಟು. ಇದರಿಂದ ನಾನು ಪಾಪಿ ಯೆಂಬುದೇ ಸಿದ್ಧವಾಯಿತು ಮಾತ್ರ!

ನನ್ನ ಅಜ್ಜಿ ಸದ್ರಿ ಚೌಡಿಯ ಮಹಾತ್ಮೆಯನ್ನು ಮೂರು ಸಂಜೆಯ ಕಥಾಮಾಲಿಕೆಯಲ್ಲಿ ಸೇರಿಸುತ್ತಿದ್ದಳು. ಅಲ್ಲಿ ತೋಟಮಾಡಿದ್ದು ಬಿಡಾರ ಕಟ್ಟಿದ್ದು ನಮ್ಮ 'ಸಂತಾನ'ಬೆಳೆದದ್ದು ಚೌಡಿಯ ಕೃಪೆಯಿಂದ. ನಮ್ಮ ಪೂರ್ವಜರು ಅಂಜನ ನೋಡಿ ಈಚೌಡಿಯನ್ನು ವಶಪಡಿಸಿಕೊಂಡು ಅಲ್ಲಿ ಕಾಲೂರಿದರಂತೆ.

ಈ ಚೌಡಿ ನಮ್ಮ ಮನೆಯ ಮೇಲೆ ಕರುಣಾಕಟಾಕ್ಷ ಬೀರುತ್ತ ಬಂದಿದೆ ಯಂತೆ. ನಮ್ಮ ತೋಟದ ಪಾಗಾರಗಳ ಆಚೆಗೆ ಕಣ್ಣೆತ್ತೂ ನೋಡುವದಿಲ್ಲ ವಂತೆ ಅದು. ಆಚೆ ಈಚೆ ಮನೆಗಳ ತೋಟದಲ್ಲಿ ಕೋಡ ಬಂದು ಲೂಟಿ ಮಾಡಿದರೂ ನಮ್ಮ ತೋಟಕ್ಕೆ ಇಣಿಕಿ ಸಹ ನೋಡುತ್ತಿದ್ದಿಲ್ಲವಂತೆ ಅವು. ಸುತ್ತಲಿನ ಕೊಟ್ಟಿಗೆಗಳನ್ನು ಕೊಳ್ಳೆ ಹೊಡೆಯುವ ಹುಲಿ ಹಂದಿಗಳು ನಮ್ಮ ಕೊಟ್ಟಿಗೆಯನ್ನು ತೆರೆದಿಟ್ಟದ್ದು ಕಂಡರೂ, ನಮ್ಮ ದನಕರುಗಳು ಕೂಗುವದನ್ನು ಕೇಳಿಯೂ, ಅಡ್ಡ ಮೋರೆ ಹಾಕಿಕೊಂಡು ಹೋಗುತ್ತಿದ್ದವಂತೆ. ನಮ್ಮ ತೋಟದಲ್ಲಿ ಬಿದ್ದ ತೆಂಗು ಅಡಿಕೆಗಳನ್ನು ಕಳ್ಳತನದಿಂದ ಹೆಕ್ಕಲು ಯಾರಾ

ದರೂ ಬಾಗಿದರೆ ನಮ್ಮ ಎಲೆ ಬಳ್ಳಿಗೆ ಕಳ್ಳನಂಟಿಕೆಯಿಂದ ಕೈಚಾಚಿದರೆ ಅವರ ಬೆನ್ನ ಹಿಂದೆ ಯಾರೋ ಬಳೆಸರ ಅಲುಗಿಸಿದಂತೆಯೂ “ ಯಾರದು ” ? ಎಂದು ಬೆದರಿಸಿದಂತೆಯೂ ಕೇಳುತ್ತಿತ್ತಂತೆ; ತಿರುಗಿ ನೋಡಿದರೆ ಏನೂ ಇಲ್ಲ! ಒಮ್ಮೆ ಒಬ್ಬ ಮುಕ್ರಿ ಮಧ್ಯಾಹ್ನದ ಹೊತ್ತು ಸೀಯಾಳ ಕಳಲು ಏರಿದನಂತೆ. ಯಾರೋ ಕಾಲು ಹಿಡಿದು ದರದರ ಎಳೆದಹಾಗೆನಿಸಿತಂತೆ. ಅವನು ಯಾರೂ ಇಲ್ಲದ್ದನ್ನು ಕಂಡು ಹಟದಿಂದ ಹತ್ತಿ ಸೀಯಾಳಕೊಯ್ದು ನೀರು ಕುಡಿದು ತನ್ನ ಬಿಡಾರಕ್ಕೆ ಮುಟ್ಟುವದರೊಳಗಾಗಿಯೇ ರಕ್ತ ಕಾರಿಕೊಳ್ಳಹತ್ತಿದನಂತೆ. ನಮ್ಮ ಮುತ್ತಜ್ಜನಿಗೋ ಅಜ್ಜಸಿಗೋ ( ಅದು ಯಾರ ಆಳಿಕೆಯ ಕಾಲವೆಂಬುದು ಕತೆ ಹೇಳುವ ನನ್ನಜ್ಜಿಗೇ ನೆನಪಿಲ್ಲ.) ಕರೆ ಬಂತಂತೆ. ಅವನು ಹೋಗಿ ಎಲ್ಲಾ ಸಂಗತಿಯನ್ನೂ ತಿಳಿದು ಚೌಡಿಗೆ ಆ ಮುಕ್ರಿಯಿಂದ ಪೂಜೆ ಕೊಡಿಸುತ್ತೇನೆಂದು ಹೇಳಿಕೊಂಡನಂತರ ಗುಣವಾಯಿತಂತೆ.

ನಮ್ಮ ಚೌಡಿ ನಮ್ಮ ಮನೆಯವರನ್ನು ಅನೇಕ ಗಂಡಾಂತರ, ಸಂಕಟಗಳಿಂದ ಪಾರುಮಾಡಿದ ವಿಷಯ ನನ್ನ ಬಾಲ್ಯದ ಬೆಳುದಿಂಗಳ ಕತೆಯಲ್ಲಿ ಕೇಳಿದ್ದೇನೆ. ಮುಂದೆ ಅವನ್ನೆಲ್ಲ ಬರೆಯುವೆನೆಂಬ ಕಲ್ಪನೆ ಆಗ ನನಗಿದ್ದಿದ್ದರೆ ಮರವು ನನ್ನನ್ನು ಮೋಸಗೊಳಿಸಲು ಬಿಡುತ್ತಿದ್ದಿಲ್ಲ. ಸದ್ಯ ನನಗೆ ಒಂದೆರಡು ಸಂಗತಿ ಮಾತ್ರ ನೆನಪಿದೆ. ಒಮ್ಮೆ ಒಂದು ಬತ್ತಿಹೋದ ಅಡಿಕೆಮರಕ್ಕೆ ತುಂಬಾ ಎಲೆ ಆಗಿತ್ತಂತೆ. ಎಷ್ಟು ಸಂಬಳ ಕೊಡುತ್ತೇವೆಂದರೂ ಆಳುಗಳಿಗೆ ಜೀವದ ಆಸೆಯೇ ಹೆಚ್ಚಾಗಿ ಅದನ್ನು ಹತ್ತಲು ಒಪ್ಪಲಿಲ್ಲವಂತೆ. ಅನೇಕ ಆಳುಗಳಿಗೆ ಬಾಯ್ಬಿಟ್ಟು ಬೇಸತ್ತು ಸಿಟ್ಟಿನಿಂದ ಆಗುವದೆಲ್ಲಾ ಆಗಲಿ, ಚೌಡಿಯ ದಯೆಯೊಂದಿರಲಿ—ಎಂದು ಹೇಳಿ ನಮ್ಮ ಅಜ್ಜನ ಅಣ್ಣನೋ ತಮ್ಮನೋ ಆ ಬತ್ತಿದ ಮರಕ್ಕೆ ಏಣಿ ಸಾಚಿ ನೆಟ್ಟಗೆ ತುದಿಗೆ ಹೋದನಂತೆ. ಮರ ಸುತ್ತಲಿನ ಅಡಿಕೆ ಮುಂಡಗಳಿಗಿಂತ ಎತ್ತರ. ಚೌಡಿಯು ಆ ಒಣ ಅಡಿಕೇ ಮರದ ಪೊಳ್ಳಿನೊಡನೆ ಪ್ರವೇಶಿಸಿ ನಿಂತಿರಬೇಕು. ಏರಿದ ಪೂರ್ವಜ ಒಂದು ಚೂಳಿ ಎಲೆ ಕೊಯ್ದ. ಚೌಡಿಗೂ ತ್ರಾಸಾಯಿತೋ ಏನೊ. ಮರವು ಬುಡದಲ್ಲಿಯೇ ಲಟ್ ಅಂದಿತು. ತುದಿಗಿದ್ದ ನಮ್ಮ ಪೂರ್ವಜನ ಎದೆ ಒಡೆಯಿತಂತೆ. ಆದರೂ ಅವನು ಧೈರ್ಯ ಹಿಡಿದು ತನಗಿಂತ ಕೆಳಗಿರುವ ಅಡಿಕೆ ಮುಂಡವೊಂದರ ಮೇಲೆ ಹಾರಿದನಂತೆ. ಚೌಡಿಯ ದಯ. ಅವನು ಸರಿ

ಯಾಗಿ ಅಡಿಕೆ ಮರದ ಹೆಡೆಗಳ ನಡುವೆಯೇ ಹೋಗಿ ಬಿದ್ದ. ವೈ ಜಜ್ಜಿ ದಂತಾದರೂ ನಮ್ಮ ಪೂರ್ವಜ ಬದುಕಿದ! ಚೌಡಿಗೆ ಎಷ್ಟು ಆನಂದವಾಗಿರ ಬೇಡ.

ಹೇಳಿದರೆ ಇಂಥ ಹತ್ತಿಪ್ಪತ್ತು ಸಂಗತಿಗಳನ್ನು ಹೇಳಿಬಿಡಬಹುದು. ಆದರೆ ಒಂದು ಚೌಡಿ ಅಥವಾ ಒಂದು ಯಕ್ಷಿಣಿ ಇಲ್ಲವೆ ಒಂದು ಜಟ್ಗ ನಮ್ಮ ಕಾವಲಿಗಿರುವಾಗ ಅದರ ಕೃಪೆಯ ಕಥೆಗಳನ್ನೆಲ್ಲ ಜನರಿಗೆ ಹೇಳಿಬಿಟ್ಟರೆ ಅದಕ್ಕೆ ಸಿಟ್ಟು ಬರುತ್ತದಂತೆ. ನನ್ನ ಮೇಲೆ ಚೌಡಿಯ ದಯ ಇಲ್ಲವೆಂಬ ಸಂಶಯ ಬಲವಾಗಿದ್ದುದರಿಂದಲೇ ಇಷ್ಟನ್ನು ನಾನು ಬರೆದದ್ದು. ನಾನೆಂದರೆ ಅದ ಕ್ಕಾಗ ಎಂಬುದೇ ಖಾತ್ರಿಯಾದರೆ ಉಳಿದ ಸಂಗತಿಗಳನ್ನು ಹೇಳುವೆ. ನಾನು ಅಷ್ಟು ಪಾಪಿಯೆಂದಾಗಲಿ, ಚೌಡಿಗೆ ನನ್ನ ಮೇಲೆ ಕೃಪೆಯಿಲ್ಲವೆಂದಾಗಲಿ ನಾನು ಪೂರ್ಣ ನಂಬಿ ಬಿಟ್ಟಿಲ್ಲ. ತುರ್ತ ಯಾವದೋ ಒಂದು ಕಾರಣದ ಮೂಲಕ ತನ್ನ ಪ್ರಭಾವ ತೋರಿಸುವದನ್ನು ನಿಲ್ಲಿಸಿದ ಚೌಡಿ ಯೋಗ್ಯ ಪೂಜೆ ಪುನಸ್ಕಾರಗಳಿಂದ ತೃಪ್ತಿಗೊಂಡು ನನ್ನನ್ನು ತನ್ನ ಕೃಪಾಛತ್ರದ ಕೆಳಗೆ ತರುವ ದಿಲ್ಲ ಅಂತ ಹೇಳಲೂ ಬರುವದಿಲ್ಲ. ಅದರಲ್ಲಿ ನನ್ನ ಭಕ್ತಿ ವಿಶ್ವಾಸ ಹೆಚ್ಚ ಬೇಕು; ನಾನು ಆ ತೋಟದ ಪಾಗಾರಗಳ ನಡುವೆಯೇ ಹೋಗಿ ನೆಲಸಬೇಕು. ನನ್ನ ಮೇಲೆ ಅದರ ದಯೆ ಹುಟ್ಟಿತೋ ಇಲ್ಲವೋ ಎಂಬುದನ್ನು ಪರೀಕ್ಷಿಸಲು ನನ್ನ ಪೂರ್ವಜನಂತೆ ಬತ್ತಿದ ಮರಕ್ಕೆ ಏಣಿ ಸಾಚಬೇಕು. ಅಥವಾ ನನ್ನ ಜ್ಜಿಯ ಮುತ್ತಜ್ಜಿಯಂತೆ ಕಾಲುಜಾರಿ ದರೆಯ ಕೆಳಗೆ ಬಿದ್ದು ಬದುಕಬೇಕು.... ಇದೆ ನನಗೂ ಆ ಹಂಬಲವಿದೆ. ಯಾವದಕ್ಕೂ ಮುಹೂರ್ತ ಬರಬೇಕಲ್ಲ?

# ಮನೆ ಹೊದಿಕೆ

●

ಮನೆ ಹೊದಿಕೆಯ ದಿನ ನಾವು ಸಾಲೆಗೆ ಹೋಗುತ್ತಿದ್ದಿಲ್ಲ. ನಮ್ಮ ಮನೆ ಹೊದಿಕೆಯ ದಿನ ನಮಗೆ ಹಬ್ಬವಾಗುತ್ತಿತ್ತು. ಈಗ ಆ ದಿನದ ಉತ್ಸಾಹವನ್ನು ಕಣ್ಮುಂದೆ ಚಿತ್ರಿಸಿಕೊಳ್ಳಲೂ ಸಾಧ್ಯವಾಗದು. ಒಕ್ಕಲು ಮಕ್ಕಳು ಬರುತ್ತಾರೆ. ಮೂಕರಂತೆ ನಾಲ್ಕಾರು ತಾಸು ದುಡಿದು (ನಡುವೆ ಕುಡಿಯಲು ನೀರು ಬೇಕಾದರೆ ಕೆರೆಗೇ ಹೋಗುತ್ತಾರೆ) ಸಂಬಳ ತೆಗೆದುಕೊಂಡು ನಡೆದು ಬಿಡುತ್ತಾರೆ. ಮನೆಯಲ್ಲಿ ಒಬ್ಬಿಬ್ಬರು ಇದ್ದು ಹೊದಿಕೆಯನ್ನು ನೋಡುತ್ತಿದ್ದರಾಯಿತು. ಹೆಂಗಸರೇ ಅದನ್ನು ಮಾಡುತ್ತಾರೆ.

ಅಂದಿನ ಹೊದಿಕೆಯೆಂದರೆ ಹೊಸದಾಗಿ ಗುಡಿ ಕಟ್ಟಿದಂತೆ. ದೊಡ್ಡ ಬೆಳಗಾಗುವುದರೊಳಗೆ ಒಕ್ಕಲು ಬಂದು ಸೋಗೆಯ ರಾಶಿ ಹಾಕುವದು, ಮಾಡವನ್ನು ಹತ್ತಿ ಹೋಗಲು ಏಣಿ ಕಟ್ಟುವದು ಮುಂತಾದ ಸಿದ್ಧತೆಗಳನ್ನೆಲ್ಲ ಮಾಡಿಕೊಂಡು ಉಪಲಕ್ಕಿಯನ್ನು ಮೆದ್ದು ಇಲ್ಲದ ಹರಟೆ ಕೊಚ್ಚುತ್ತ ಸಂಜೆಯ ವರೆಗೂ ಹೊದಿಸುತ್ತಿದ್ದರು. ಅದು ಬಿಟ್ಟಿಯ ದಿನ, ಸಂಬಳವಿಲ್ಲ. ಅಂತೆಯೇ ಕೆಲಸ ಇಷ್ಟು ಶಿಸ್ತಾಗಿ ಸಾಗುತ್ತಿತ್ತೇನೊ. ನಡುನಡುವೆ ಗಡದ್ದಾಗಿ ಕವಳ ಜಗಿಯಬೇಕು. ಅಕ್ಕಿಯ ಪಣೆಯನ್ನು ಮೋರಬೇಕು. ಮಾಡಿನ ಮೇಲೇ ಪ್ರಸಂಗ ಪದಗಳಾಗಬೇಕು. ಮನೆಯ ಯಜಮಾನರ ಮತ್ತು ಅವರ ಪೂರ್ವಜರ ಗುಣಗಾನವಾಗಬೇಕು. ಒಂದೇ ಎರಡೇ, ಮನೆಯವರೆಲ್ಲ ಬಿದ್ದ ಕರಿ ಗುಡಿಸುತ್ತ ಒಕ್ಕಲಿಗರೊಡನೆ ಪುರಾಣ ಹೇಳಬೇಕು. ಇವೆಲ್ಲಕ್ಕೂ ಹೆಚ್ಚಿನದೆಂದರೆ ಕೋಳೊಪ್ಪಿಸುವದು ಹೊದಿಕೆ ಮುಗಿದ ಮೇಲೆ ಒಕ್ಕಲಿಗರ ಮುಖಂಡನು ಒಂದು ಕಬ್ಬಿಣದ ಚೂರನ್ನೂ ಮಾವಿನ ತುಮುಕೆಯನ್ನೂ ಹಿಡಿದು ದೇವರಲ್ಲಿ ಪ್ರಾರ್ಥಿಸಿಕೊಂಡು "ಕೊಳೊಪ್ಪಿತೋ ?" ಎಂದು ಅಂಗಳದಲ್ಲಿ ನಿಂತ ಯಜಮಾನನಿಗೆ ಮೂರು ಸಲ ಕೇಳಿ ಅವನು 'ಒಪ್ಪಿತು' ಎಂದ ಮೇಲೆ ಅವನ್ನು

ಕೋಳ ಮೇಲಿಟ್ಟು ಕೈ ಮುಗಿದು ಇಳಿದು ಬರಬೇಕು. ನಂತರ ಅವರ ಅಭ್ಯಂಗ ಸ್ನಾನ, ಪಾಯಸದೂಟ. ಇದಾದ ಮೇಲೆ ಮತ್ತೊಂದು ಗಜಗವಳ ಮುಗಿಸಿ ಸೂಡಿ ಬೀಸಿ ಬಿಹಾರಗಳಿಗೆ ಹೋಗುವವು. ಇಡೀ ದಿನ ನಮಗೆ ಹಬ್ಬದಂತೆ ಆನಂದ.

ನಾವು ಸಣ್ಣವರಿದ್ದೆವೆಂದು ಆ ಬಗೆಯ ಆನಂದವಿತ್ತೋ, ರೈತರು ಸಂಬಳ ತೆಗೆದುಕೊಳ್ಳದೇ ಬಿಟ್ಟಿ ಮಾಡುತ್ತಿದ್ದರೆಂದೇ ಆ ನಲಿವಿತ್ತೋ ನನಗೆ ಈಗ ಹೇಳಲು ಬರುವಂತಿಲ್ಲ. ಇಂದಂತೂ ಮನೆ ಹೊದಿಕೆ ಸಂಬಳದಿಂದ ಶುಷ್ಕ ವಾಗಿದೆಯೆಂಬುದು ನಿಜ. ಹಬ್ಬದ ಬಣ್ಣವನ್ನು ತೊಡೆದು ಹಾಕಿದುದು ಹಣವೇ ಎಂದು ಹೇಳಬಹುದೇ ?

ಈ ಬಿಟ್ಟಿಯ ಹಬ್ಬ ಹಾಳಿಗಿ ಸಂಬಳದ ರೂಢಿ ಬಂದುದು ಹೀಗಂತೆ ನಮ್ಮ ಪಟೇಲರ ಮನೆಯಲ್ಲಿ ಮನೆ ಹೊದಿಕೆಯ ಸಮಯ ಹೀಗಾಯಿತಂತೆ.

ನಗುತ್ತ ಕೆಲೆಯುತ್ತ ಹೊದಿಸುತ್ತಿರುವಾಗ ಹೊನ್ನನೆಂಬ ಒಕ್ಕಲಿಗನ ಬಾಯಿಯ ಗಜಗವಳವು ಹೊರಹೊಮ್ಮಿ ಒಂದು ಹನಿಯು ಕೆಳಗೆ ದೇವರ ಪೀಠದ ಮೇಲೆ ಬಿತ್ತಂತೆ. ಇದನ್ನು ಹೊನ್ನನ ಹೊರತು ಯಾರೂ ನೋಡ ಲಿಲ್ಲ. ತನ್ನ ಉಗುಳು ಪಟೇಲರ ಮನೆದೇವರ ಪೀಠದ ಮೇಲೆ ಬಿದ್ದುದನ್ನು ಕಂಡು ಅವನು ಹೆದರಿದನು ಯಾರಿಗೂ ಹೇಳಲಿಲ್ಲ. ಯಾರೂ ಕಾಣಲಿಲ್ಲ. ಆದರೂ ಅವನು ಒಳಗೊಳಗೇ ಹೆದರಿ ಹೆದರಿ ಹೆಪ್ಪಾದ.

ಮನೆಗೆ ಹೋದ ಅವನಿಗೆ ಜ್ವರವೂ ಬಂತು. ಒಂದು ವಾರ ಜ್ವರ ಇಳಿ ಯಲೇ ಇಲ್ಲ. ಕನಸಿನ ಮೇಲೆ ಕನಸು ಬಿತ್ತು. ಪಟೇಲರ ಮನೆ ದೇವರು ಬಂದು ಬೆದರಿಸಿದಂತೆ ಕಂಡಿರಬೇಕು. ಬಾಯಿಗೆ ಬಂದಂತೆ ಬಡಬಡಿಸಿದ. ಆ ಬೊಗಳುಸನ್ನಿಯನ್ನು ಕೇಳಿ ಹೊನ್ನನ ಹೆಂಡತಿ ವಸ್ತುಸ್ಥಿತಿ ಊಹಿಸಿದಳು. ಪಟೇಲರ ಮನೆಗೆ ಹೋಗಿ ಜೋಡುಗಾಯಿ ಇಟ್ಟು, ತಪ್ಪುದಂಡ ಕೊಟ್ಟು, ಗುಣವಾದರೆ ಪೂಜೆಕೊಡಿಸುವೆನೆಂದು ಬೇಡಿಕೊಂಡಳು. ಪಟೇಲರ ಪಿತ್ತ ನೆತ್ತಿಗೇರಿತು. “ ಅಶುಚಿಯಾದರೂ ಹೇಳಲೇ ಇಲ್ಲ ಪಾಪಿ. ಅದಕ್ಕೆ ದೇವರು ಯೋಗ್ಯವಾದುದನ್ನೇ ಮಾಡಿದ.” ಎಂದು ಬಿಟ್ಟರು. ಇಷ್ಟೇ ಅಲ್ಲ ತಮ್ಮ ಮನೆಯಲ್ಲಿ ಕಳೆದ ಹಲವು ದಿನಗಳಿಂದ ಚೌಡಿ ತೀಡುತ್ತಿದೆಯೆಂದೂ, ಎಮ್ಮೆ ಆಕಳುಗಳು ಸರಿಯಾಗಿ ಹಿಂಡುವದಿಲ್ಲವೆಂದೂ ಇದಕ್ಕೆಲ್ಲ ಹೊನ್ನನು ಮಾಡಿದ

ಅಶುಚಿಯೇ ಕಾರಣವೆಂದೂ ಅಬ್ಬರಿಸಿದರು. ಕೊನೆಗೆ ದೊಡ್ಡದೊಂದು ಪೂಜೆಯನ್ನು ಮಾಡಿಸಿಕೊಡುತ್ತೇನೆಂದು ಹೊನ್ನನ ಹೆಂಡತಿ ಹೇಳಿ ಕಾಲಿಗೆ ಬೀಳಲು ಪಟೇಲರೂ, ಅವರೊಡನೆ ಅವರ ಮನೆದೇವರೂ ತಣಿದರು. ಇವರು ಕ್ಷಮಿಸಿದ ಸುದ್ದಿ ಕೇಳಿ ಹೊನ್ನನಿಗೆ ದಿನೇ ದಿನೇ ಗುಣವಾಗಹತ್ತಿತು. ಪೂಜೆ ಕೊಡಿಸಿದರೂ ಪಟೇರ ಬಾಯಿ ಮುಚ್ಚಲಿಲ್ಲ. "ಬಿಟ್ಟಿಯೆಂದರೆ ಹೀಗೇ. ದೇವರ ಮೇಲೂ ಉಗಳುತ್ತಾರೆ. ಈ ಮಕ್ಕಳು" ಎಂದು ಇಡೀ ಒಕ್ಕಲ ಸಂತತಿಯನ್ನೇ ಬೈದರು.

ಇದೊಂದೇ ಕಾರಣದಿಂದ ಒಕ್ಕಲು ರೇಗಲಿಲ್ಲ. ಮರುಸಲದ ಹೊದಿಕೆಯ ಸಮಯ ಒಕ್ಕಲು ಕವಳವನ್ನೇ ಹಾಕಬಾರದೆಂದೂ ಮಾಡನ್ನು ಏರಿದಾಗ ಮಾತಾಡಬಾರದೆಂದೂ ಕಟ್ಟಪ್ಪಣೆ ಮಾಡಿದರು. ಪರಿಣಾಮ ಹೇಳಬೇಕೇ? ಬಿಟ್ಟಿ ಕೆಲಸ ಬಿಟ್ಟಿ ಕೆಲಸವೇ ಆಯಿತು. ಪಟೇಲರು "ಬಿಟ್ಟಿಯೇ ಹೀಗೆ. ಸಂಬಳ ಕೊಟ್ಟು ಬಿಟ್ಟರೆ ಕೆಲಸ ಹೇಗೆ ಅರ್ಧಮರ್ಧ ಮಾಡುತ್ತಾರೆ ನೋಡುವ. ಮತ್ತೆ ಅವರ ಹಂಗಾದರೂ ಯಾಕೆ?" ಎಂದು ಮನೆ ಹೊದಿಕೆಯನ್ನು ಸಂಬಳದಿಂದ ಮಾಡಿಸಿ ಆ ಹಬ್ಬವನ್ನೇ ನಾಶಮಾಡುವುದರಲ್ಲಿ ಮೊದಲಿಗರಾದರು. ಈಗ ಮನೆ ಸೋರುವದೇನೂ ಕಡಿಮೆಯಾಗಿಲ್ಲ! ಆದರೂ ಬಿಟ್ಟಿಯ ಹಂಗಿಲ್ಲ; ಸಂಬಳ ಕೊಟ್ಟಿದ್ದೇವೆ ಎಂಬ ತೃಪ್ತಿಯಾದರೂ ಇದೆ!



# ಬಿದಿರ ಬೀಸಾಳೆ

●

ಆ ನಮೂನೆಯ ಬೀಸಾಳೆ ಈಗ ನಮ್ಮೂರಿನಲ್ಲಿ ಕಾಣಲೂ ಸಿಗುವದಿಲ್ಲ. ಅಪ್ಪಿತಪ್ಪಿ ನಮ್ಮ ಮನೆಯಲ್ಲಿ ಮಾತ್ರ ಅದರ ಒಂದು ಸವಕಲು ಚೂರು ಉಳಿದುಬಿಟ್ಟದೆ. ಕಳೆದ ಬೇಸಿಗೆಯಲ್ಲಿ ಮನೆಹೊದಿಕೆ ಮಾಡುವಾಗ ಅಟ್ಟದ ಮೇಲೆ ಹಳೇ ಬೆಲ್ಲದ ಕೊಡಗಳ ಸಂದಿಯಲ್ಲಿ ಅದು ತಪಸ್ಸು ಮಾಡುತ್ತಿರು ವದು ಹೊಳೆಯಿತು. ತೆಗೆದುನೋಡಿದೆ. ನನ್ನ ಮೈಗೆ ಗಾಳಿ ಬೀಸಿಕೊಳ್ಳು ವುದರ ಬದಲು ಅದಕ್ಕೇ ಉಸಿರು ತುಂಬುವ ಪರಿಸ್ಥಿತಿ! ಹಿಡಿಕೆ ಮಾತ್ರ ತುಸು ಬಂದೋಬಸ್ತಾಗಿತ್ತು. ಒಂದು ಹಾಳೆ ಕತ್ತರಿಸಿ ಕಟ್ಟದೆ. ಗರಗರ ಎಂದಿತು. ಗಾಳಿಮಾತ್ರ ಅಷ್ಟಕ್ಕಷ್ಟೇ.

ಆರಾಮಕುರ್ಚಿಯ ಮೇಲೆ ಕುಳಿತು ಜೀರ್ಣೋದ್ಧಾರ ಮಾಡಿದ ಆ ಬೀಸಣಿಕೆಯನ್ನು ತಿರುವುತ್ತಿದ್ದಂತೆ ನನ್ನ ಬಾಲ್ಯಗ ನೆನಪಾಯಿತು ಸ್ಮೃತಿ ಪಟಲದಲ್ಲಿ ಆ ನಮೂನೆಯು ಸಿಗದಿರಲು ಕಾರಣವೂ ಬರೆದಿತ್ತು.

ಅಂದಿನ ' ಇಟ್ಟ್ಯಾ ಮಕ್ಕಳು ' ಈಗ ಇಲ್ಲವೇ ಇಲ್ಲ. ಇದ್ದು ಅವರ ಕುಟುಂಬದವರೆಂದು ಕೇಳಿಸಿಕೊಂಡು ಅದೇ ಉದ್ಯೋಗ ಮಾಡುತ್ತಿದ್ದರೂ ಅವರಿಗೂ ಇವರಿಗೂ ಅಜಗಜಾಂತರ. ಈಗಿನ ಬಡಕಾಟ ರುದ್ರರನ್ನು ನೋಡಿ ಅಂದಿನ ಕುಡುಕ ಧಾಂಡಿಗರನ್ನು ನೆನೆಯುವದೂ ಕಷ್ಟ.

ಚಿಕ್ಕಂದಿನಲ್ಲಿ ಅದು ನನಗೆ ಆಟವಾಗಿತ್ತು ಪ್ರತಿದಿನ ಮುಚ್ಚಂಜೆ ಅಂಗಳದ ತುದಿಗೆ ನಿಂತು ಇಟ್ಟ್ಯಾ ಮಕ್ಕಳು ಕಳ್ಳುಕುಡಿದು ಪದ ಹೇಳುತ್ತ ಜೋಲಿ ಹೊಡೆಯುತ್ತ ಸಾಗುವದನ್ನು ನೋಡುತ್ತಿದ್ದೆ. ನಮ್ಮನ್ನು ಕಂಡರೆ ಅವರು ಬಡಬಡಿಸುವದನ್ನು ನಿಲ್ಲಿಸಿ ಎಲ್ಲರಂತೆ ಸರಿಯಾಗಿ ಮಾತಾಡು ತ್ತಿದ್ದರು. " ಒಡ್ಯಾ ಪೆಟ್ಲಾಂಡಿ ಮಾಡ್ಕೊಡ್ತೆ ಒಂದ್ ಚೂರು ಹೊಗೆ ಸೊಪ್ಪು ಇದ್ರೆ... " ಎಂದು ಎಷ್ಟುಸಾರೆ ಅವರು ನನ್ನಿಂದ ಕವಳ ಸಂಪಾ

ದಿಸಿದ್ದುಂಟು. ಚೌತಿ ಹಬ್ಬದಲ್ಲಂತೂ ಬಿದಿರ ಬುಟ್ಟಿ ಚೊಬ್ಬೆಗಳನ್ನು ಹೊರೆಹೊರೆಯಾಗಿ ತರುತ್ತಿದ್ದರು. ಎರಡು ಚಕ್ಲಿ, ಕೊಟ್ಟರೆ ಸಾಕು ಅವುಗಳನ್ನು ಕೊಡುತ್ತಿದ್ದರು. ಅವರಿಗೆ ಕೊಡಲು ನಮ್ಮ ಪಾಲಿನ ಕಚ್ಕಾಯ ಗಳನ್ನು ಬಚ್ಚಿಡುತ್ತಿದ್ದೆವು. ಪ್ರತಿಯಾಗಿ ಪೆಟ್ಲಾಂಚಿ ಸಿಗುತ್ತಿತ್ತು !

ಅವರು ಸತ್ತದನ ಎಮ್ಮೆಗಳನ್ನು ಸುಲಿದು ಅವುಗಳ ಚರ್ಮವನ್ನು ಮಾರುತ್ತಿದ್ದರೂ ಹದ ಹಾಕುವದು ಜೋಡು ಹೊಲಿಯುವದು ಮಾಲಗಳ್ಳಿಯ ಚಮಗಾರರ ಹಕ್ಕಾಗಿತ್ತು. ಎಲ್ಲಿ ಹದ್ದು ಹಾರಿದರೂ ಅವರು ಹಾಜರು. ಒಂದು ಪ್ರಾಣಿ ಸತ್ತ ಕೂಡಲೆ ಅದರ ಕಣ್ಣನ್ನು ಕಿತ್ತು ರಾಜಹದ್ದಿಗೆ ಕಾಗೆ ಮುಟ್ಟಿಸುವದು. ಹದ್ದು ಹಾರಾಡಿ ಮಾದಿಗರನ್ನು ಕರೆಯುವದು. ಎಂದು ಅವರ ನಂಬಿಕೆ.

ಅವರ ಕೌಶಲ್ಯ ಬಿದಿರ ಬೀಸಣಿಕೆ, ಚಾಪೆಗಳನ್ನು ಮಾಡುವುದರಲ್ಲಿ, ಬೆತ್ತದ ಬುಟ್ಟಿಗಳನ್ನು ಹೆಣೆಯುವುದರಲ್ಲಿ. ಬಿದಿರು ಕೊಟ್ಟು ಒಂದು ಕವಳ ಕೊಟ್ಟರೆ ಸಾಕು, ಅವರು ಚಿಕ್ಕಪುಟ್ಟ ಡೊಬ್ಬೆಗಳನ್ನು ಮಾಡಿ ಕೊಡುತ್ತಿದ್ದರು.

ಅಂದಿನ ಇಟ್ಟೊ ಮಕ್ಕಳು ನಮ್ಮೂರಿನ ಒಂದು ಘಟಕವಾಗಿದ್ದರು. ಬ್ರಾಹ್ಮಣರು ಅವರನ್ನು ಕಾಣುವ ಬಗೆಯನ್ನು ಬೇರೆ ಹೇಳಬೇಕೆ ? ಏನಾಯಿತೋ ಏನೊ. ಇಟ್ಟೊ ಮಕ್ಕಳು ನಮ್ಮೂರನ್ನು ಬಿಟ್ಟು ಹೋದರು. ಒಂದು ಸಂಗತಿ ಮಾತ್ರ ನೆನಪಿದೆ.

ನಮ್ಮೂರ ಪಟೇಲರು ಪ್ರೀತಿಯಿಂದ ಸಾಕಿದ ಎಮ್ಮೆ ಯಮುನ ವಾಹನರ ಪ್ರೀತಿಗೆ ಪಾತ್ರವಾಯಿತು. ಪಟೇಲರಿಗೆ ಅದನ್ನು ಹದ್ದು, ಇಟ್ಟೊ ಮಕ್ಕಳ ಪಾಲಿಗೆ ಕೊಡುವದು. ಇಷ್ಟೋ ಸೇರಲಿಲ್ಲ. ತಮ್ಮ ಮನೆಯ ತೋಟದ ಮೂಲೆಗೆ ಹುಗಿಸಿ ಅದರ ಮೇಲೆ ಒಂದು ಹಲಸಿನ ಹಣ್ಣು ಹುಗಿಸಿದರು. ಹಲಸಿನ ಮರವೇನೋ ಎಮ್ಮೆಯಂತೇ ಬೆಳೆಯಿತು; ಅದು ಹಾಲು ಕೊಡುವಂತೆ ಕಾತಿತು. ಆದರೆ ಇಟ್ಟೊ ಮಕ್ಕಳ ಮನಸ್ಸು ಮುರಿಯಿತು. ತಮ್ಮ ಹಕ್ಕು ಹೀಗೆ ತಪ್ಪಿಹೋದುದು ಅವರ ದೇವರಿಗೂ ಸರಿಹೋಗಲಿಲ್ಲವಂತೆ. ಪೂಜಾರಿಗೆ ಕೆಟ್ಟ ಕನಸು ಬಿತ್ತಂತೆ; ಅಪಶಕುನಗಳಾದವಂತೆ. ಬ್ರಾಹ್ಮಣರು

ಸತ್ತ ಎಮ್ಮೆಯ ಮೇಲೂ........... ಎಂದು ಅವರು ಶಪಿಸಹತ್ತಿದರು. ಇದೇ ಸುಮಾರಿಗೆ ಕಳ್ಳು ಸಿಗುವದೂ ಕಷ್ಟವಾಯಿತು. ಅಂತೂ ಕೆಟ್ಟಕಾಲ ಬಂತು. ಒಬ್ಬಿಬ್ಬರನ್ನು ಬಿಟ್ಟು ಇಟ್ಟೂ ಮಕ್ಕಳೆಲ್ಲ ಗಟ್ಟದ ಕಡೆಗೆ ಬಿಡಾರ ಸಾಗಿಸಿದರು.

ಈಗ ಆ ನಮೂನೆಯ ಬೀಸಾಳೆ ಸಿಗುವದೇ ಇಲ್ಲ. ಸತ್ತ ದನಕರುಗಳನ್ನು ಸುಲಿಯುವವರೂ ಇಲ್ಲ. “ ಬ್ರಾಂಬ್ರೀ ಆಕೆಲ್ಸ ಮಾಡ್ಲಿ ” ಎಂದು ನಮ್ಮೂರಿನಲ್ಲುಳಿದ ಒಬ್ಬಿಬ್ಬ ಇಟ್ಟೂ ಮಕ್ಕಳು ಹಂಗಿಸುತ್ತಾರೆ.

---

# ಸುಬ್ರಮ್ಮಣ್ಯನ ಮದುವೆ

●

ಅವನ ಹೆಸರು ಸುಬ್ಬ. ಗುಣರೂಪಗಳಿಗೆ ತಕ್ಕಂತೆ ಊರಿನವರು ಅದನ್ನು 'ಸುಬ್ರಮ್ಮಣ್ಯ' ಎಂದು ತಿದ್ದಿದಾರೆ. ಅದೊಂದು ಯೋಗ್ಯ ನಾಮಕರಣ.

ವಿಶ್ವೇಶ್ವರ ಹೆಗಡೆಯವರಿಗೆ ಇವನೊಬ್ಬನೇ ತಮ್ಮ. ತನ್ನ ಮಕ್ಕಳಿಗೆ ಮದುವೆ ಮನೆ ಕಾಲ ಮುಗಿಸಿ ತನಗೆ ಹೆಣ್ಣನ್ನು ಗಂಟು ಹಾಕಿ ಕೊಡದ ಅಣ್ಣನ ಮೇಲೆ ಸುಬ್ರಮ್ಮಣ್ಯನ ಸಿಟ್ಟು ಅಷ್ಟಿಷ್ಟಲ್ಲ. ಆದರೆ ವಿಶ್ವೇಶ್ವರ ಏನು ಮಾಡ್ಬೇಕು? ಸುತ್ತುಮುತ್ತಲಿನ ಗ್ರಾಮದಲ್ಲೆಲ್ಲೂ ನಮ್ಮ ಸುಬ್ರಹ್ಮಣ್ಯನಿಗೆ ಹೆಣ್ಣೇ ಹುಟ್ಟದು. ಜನ್ಮಕುಂಡಲಿಯಲ್ಲಿ ಮದುವೆಯಾಗುವದಿಲ್ಲ ಎಂದೇನೂ ಬರೆದಿಲ್ಲ. ಜಾತಕ ಕೂಡುವ ಹುಡುಗಿಯರಿಲ್ಲವೆಂದೂ ಅಲ್ಲ. ಸಿರಿವಂತಿಕೆ ಯಿಲ್ಲದಿದ್ದರೂ ಊಟಕ್ಕೆ ಕೊರತೆಯಿಲ್ಲ. ಕನ್ನೆಯರನ್ನು ದಾಟಿಸಿಕೊಂಡರೆ ಸಾಕೆಂಬ ಪಿತೃಗಳಿಗೂ ಸದ್ರಿ ಸುಬ್ರಮ್ಮಣ್ಯನಲ್ಲಿ ಯಾವ ಹಗೆಯೋ? ಇವನ ಕಷ್ಟ ಅವರಿಗೆ ತಿಳಿಯುವದೇ ಇಲ್ಲವೊ ಏನೊ. ಪಾಪ ೨೭ ವರುಷ ಆಯಿತು. ಗಟ್ಟಿದೇಹ, ಮರ್ಯಾದೆವಂತ ಪುರುಷ. ಹಲ್ಲು ಸ್ವಲ್ಪ ಮುಂದೆ, ಯಾವಾಗಲೂ ಹಿ ಹಿ ಹಿ ಎಂಬ ನಗೆ, ಮಾತಾಡಲು ಸುರು ಮಾಡಿದರೆ ಎಲ್ಲಿಗೆ ಹರಿಯ ಬಹುದೆಂಬ ನಿಯಮವಿಲ್ಲದಿದ್ದರೂ ಮದುವೆಯ ವಿಷಯ ಅದರಲ್ಲಿ ಬಂದೇ ತೀರುವದು.

ಕೆಲವರಿಗೆ ಸುಬ್ರಮ್ಮಣ್ಯ ಹುಚ್ಚ. ನನ್ನ ಅಭಿಪ್ರಾಯ ಹೇಳುವದಾದರೆ ಅವನು ಪೂರ್ಣ ಹಾಗೇನೂ ಅಲ್ಲ. ಇನ್ನು ಒಂದು ವೇಳೆ ಅವನ ಮೆದುಳಿ ನಲ್ಲಿ ಯಾವದಾದರೂ ತಂತಿಗಿಂತಿಗಳು ಹೆಚ್ಚು ಕಡಿಮೆಯಾಗಿದ್ದರೆ ಅದಕ್ಕೆ ಇವನಿಗೆ ಹೆಣ್ಣು ಕೊಡದ ಕನ್ಯಾಪಿತೃಗಳೇ ಮುಖ್ಯ ಕಾರಣವೆಂದು ಹೇಳಬೇಕು. ಮದುವೆಯಾದರೆ ಅವನು ಬಹಳ ಸರಿಯಾಗಿರುವನೆಂದು ನಾನು ಆಣೆ ಮಾಡಿ ಹೇಳಬಲ್ಲೆ. ಆದರೆ ನನ್ನ ಮಾತನ್ನು ಕನ್ಯಾಪಿತೃಗಳು ನಂಬಬೇಕಲ್ಲ?

ಕಿವಿಯಲ್ಲಿ ಯಾರು ಊದಿದರೇನೋ—ಪಿಟ್ಲ ಕುಂಬಳ ದೇಶದಲ್ಲಿ ಹೆಂಗಸರಿಗೂ ಕನ್ಯೆ ದೊರೆಯುತ್ತದೆಂದು! ತನಗೆ ಅಲ್ಲಿಂದಾದರೂ ಹೆಣ್ಣು ತರದಿದ್ದರೆ ಪಿತ್ರಾರ್ಜಿತ ಆಸ್ತಿಯಲ್ಲಿಯ ಪಾಲು ಕೂಡಲೇ ಸಿಗಬೇಕೆಂದು ಕುಳಿತುಬಿಟ್ಟ ಸುಬ್ರಮ್ಮಣ್ಯ. ವಿಶ್ವೇಶ್ವರ ಹೆಗಡೆಯವರಿಗೆ ಇಕ್ಕಳ ಹಾಕಿದ ಹಾಗಾಯಿತು. ಮನೆಯನ್ನು ವಿಭಾಗಿಸುವದಕ್ಕಿಂತ ಸ್ತ್ರೀಮಲೆಯಾಳದ ಯಾತ್ರೆ ಮಾಡಿ ಬರುವದೇ ಅಗ್ಗವೆಂದೆನಿಸಿತು.

ನಾಲ್ಕಾರು ಜನರ ಗುಂಪೊಂದು ಹೆಣ್ಣು ತರಲು ಹೊರಟಿತು. ಅದರಲ್ಲಿ ನಾನೂ ಇದ್ದೆ. ಸುಬ್ರಮ್ಮಣ್ಯನಿಗೆ ಧೋತರ, ಬೆರಳಿಗೆಲ್ಲಾ ಉಂಗುರ, ಶಾಲು ಇತ್ಯಾದಿ ಅಲಂಕಾರ ಮಾಡಿತ್ತು. ಸಾಯುವ ಹೊತ್ತು ಬಂದರೂ ಬಾಯಿ ಬಿಡಬಾರದೆಂದೂ ಸ್ಪಷ್ಟವಾಗಿ ತಿಳಿಸಿದ್ದೆವು.

ಕುಂಬಳ ದೇಶದಲ್ಲಿ ಸಾವಿರಾರು ಸುಬ್ರಮ್ಮಣ್ಯರು ತಮ್ಮ ಗೃಹಿಣಿಗಳನ್ನು ಹೊಂದಿರುವಾಗ ನಮ್ಮ ಸುಬ್ರಮ್ಮಣ್ಯನಿಗೆ (ಜತೆಯಲ್ಲಿ ನಾವೆಲ್ಲಾ ಇರುವಾಗ) ಹೆಣ್ಣು ಸಿಗದೇ? ಒಬ್ಬ ಏಜಂಟನನ್ನು ಹಿಡಿದು ಮದುವೆಯ ಚಪ್ಪರವೊಂದನ್ನು ಸೇರಿ ಸುಬ್ರಮ್ಮಣ್ಯನಿಗೆ ನೆರೆದ ಕನ್ನೆಯರಲ್ಲಿ ಒಬ್ಬಳನ್ನು ಆರಿಸಲು ಹೇಳಿದೆವು. ಸ್ವತಃ ಸುಬ್ರಮ್ಮಣ್ಯನಿಗೆ ಹುಡುಗಿಯರನ್ನು ಆರಿಸುವ 'ಚಾನ್ಸು' ದೊರೆತಿರುವಾಗ ಅವನ ಬಾಯಿ ತೆರೆಯದಂತೆ ನೋಡಿಕೊಳ್ಳುವದು ನನಗೆ ಬಲು ಬಿಗಿಯ ಕೆಲಸವಾಯಿತು. ಅಂತೂ ಒಂದು ಹುಡುಗಿಯನ್ನಾರಿಸಿದ.

ಮರುದಿನ ಸುಸಜ್ಜಿತರಾಗಿ ಆ ಕನ್ನೆಯ ಮನೆಯನ್ನು ಅಲ್ಲಿಯ ಏಜಂಟನೊಡನೆ ಸೇರಿ ವಿಷಯ ಪ್ರಸ್ತಾಪಿಸಿದೆವು. ಚಹ ಕುಡಿಯುತ್ತಾ ಮಾತು ಒಂದು ನಿಶ್ಚಯಕ್ಕೆ ಬಂದಿತು. ನಮಗೆಲ್ಲ ಮನಸ್ಸು ಹಗುರವಾಯಿತು. ಕೇಳಬೇಕೇನು? ಸುಬ್ರಹ್ಮಣ್ಯನ ಆನಂದದ ಎಲ್ಲೆ ಮೀರಿ ಮುರಿದ್ಹೋಯಿತು. "ಅದೆ! ಆ ಕಿಡಿಕೀ ಬಳೀಗೆ ನಿಂತು ನನ್ನನ್ನೇ ನೋಡ್ತಾಳೆ! ಅವ್ಳೇ ಅಲ್ದ ನನ್ನ ಹೆಣ್ತಿ?" ಎಂದು ಕೇಳೇ ಬಿಟ್ಟ. ಚಿವುಟಿ ಸುಮ್ಮನಿರಿಸಲು ಮಾಡಿದ ಯತ್ನ ನಿಷ್ಫಲವಾಯಿತು. ಸುಬ್ರಮ್ಮಣ್ಯನದೊಂದು ಚಟ. ಒಮ್ಮೆ ಬಾಯಿ ತೆರೆಯಿತೆಂದರೆ ತೀರಿತು. ಅದು ಸೋತೇ ನಿಲ್ಲಬೇಕು. "ಓ ಯಜಮಾನ್ರೆ. ನಿಮ್ಮ ಮಗ್ಳ ನಾನು ಭಾಳ ಚಲೋದಾಗಿ ನೋಡಕೊಂಡ್ರೇ ಅಳಿಯ ಹೇಳಿ! ....ಅಥೊ ಎಂತಕ್ಕೊ ಸುಮ್ಮಂಗಿಪ್ದು ?.... ಅಲ್ಲ ಯಜಮಾನ್ರೆ

ನನ್ನಣ್ಣ ನನ್ಗೆ ಹೆದರಿಸಿದ್ದ ನನ್ಗೆ ಎಲ್ಲೂ ಹೆಣ್ಣೇ ಹುಟ್ಟಿಲ್ಲೆ ಹೇಳಿ........ ಹೇಗಾತೋ ವಿಶ್ವೇಶ್ವರಣ್ಣ? ನಿನ್ಗೊ ಬ್ಬಂಗೇ ಹೆಣ್ಣು, ನನ್ಗೆ ಎಲ್ಲೂ ಇಲ್ಲೆ ಹೇಳ?........" ನಮ್ಮ ತಾಳ್ಮೆ ತಪ್ಪಿತು. ಹುಡುಗಿಯ ಮನೆಯವರೆಲ್ಲ ಕಣ್ಣು ಕಿಸಿದುಕೊಂಡು ಬಾಯಿ ತೆರೆದು ನೋಡಹತ್ತಿದರು. ಎಲ್ಲಾ ಬಣ್ಣ ಮಸಿ ನುಂಗಿತು ಎನ್ನುವಂತೆ ನಮ್ಮ ಪ್ರಯತ್ನಕ್ಕೆ ಫಲ ಸಿಕ್ಕರೂ ಸಿಗಲಿಲ್ಲ. "ಇದೇನು ಮಹಾತ್ಮೆ ಹೆಗಡೇರೆ?" ಎಂದು ಹುಡುಗಿಯ ತಂದೆ ವಿಶ್ವೇಶ್ವರ ಹೆಗಡೆಯರನ್ನು ಕೇಳಿದ. ನಮ್ಮ ಕುಂಟು ನೆವಗಳೆಲ್ಲ ಹಾಳಾದವು. ಇಷ್ಟ ರಲ್ಲಿಯೇ ಸುಬ್ರಮ್ಮಣ್ಯನ ಮಾತು ಹೆಂಗಸರ ಜತೆಗೆ ಸೇರಲು ಹೊರಟಿತ್ತು; ಕಿಡಕಿಯ ವರೆಗೂ ಸಾಗಿತ್ತು.

ಊರಿಗೆ ಬಂದು ಸುಬ್ರಮ್ಮಣ್ಯನನ್ನು ಗುದ್ದಿದೆವು. "ವಸ್ತುಸ್ಥಿತಿ ಹೇಳಿದರೆ ಸಿಟ್ಟು ನಿನುಗೆ" ಎಂದು ವ್ಯಾಕರಣ ಶುದ್ಧವಾಗಿ ಹುಬ್ಬು ಗಂಟಿಕ್ಕಿ ಹೇಳಿದ.

ಅವನ ಆಗಿನ ಮಾನಸಿಕ ಪರಿಸ್ಥಿತಿಯನ್ನು ಊಹಿಸಿ ನಾನು ಅವನಿಗೆ ಒಂದು ಉಪನ್ಯಾಸ ಮಾಡಿದೆ—"ನೋಡು ಸುಬ್ರಮ್ಮಣ್ಯ ಭಕ್ತನು ದೇವನ ಕರುಣೆಗಾಗಿ ನಿರೀಕ್ಷಿಸುತ್ತಾನೆ. ಈ ಜೀವನವೆಲ್ಲ ಹಾಗೆ ಪರಮಾತ್ಮನ ಕೃಪೆಗಾಗಿ ಕಾದಿರಬೇಕು. ಅನಂತ, ಅಜ್ಞೇಯ, ಅಪ್ರಮೇಯವಾದವುಗಳನ್ನು ಅವಲಕ್ಕಿಯಂತೆ ಸಾವಧಾನವಾಗಿ ಚರ್ವಿತ ಚರ್ವಣ ಮಾಡುತ್ತಿದ್ದರೆ ಈ ನಶ್ವರ ದೇಹ ಈಶ್ವರನ ಅಡಿದಾವರೆಯಲ್ಲಿ ಗಂಡನ ಕಾಲಿಗೆ ಹೆಂಡತಿ ಬೀಳುವಂತೆ (ಇದನ್ನು ಹೇಳುವಾಗ ಅವನ ಕಿವಿ ನೆಟ್ಟಗೆ ನಿಂತವು!) ಮೋಕ್ಷ ಕಾಣುತ್ತದೆ. ಆದ್ದರಿಂದ ನೀನೂ ನಿರೀಕ್ಷಿಸು. ನಾನು ಬೇಗ ಮದುವೆಯಾಗುವೆ; ಹೆಣ್ಣು ಹೆತ್ತು ಪ್ರಥಮ ಕನ್ಯೆಯನ್ನು ನಿನಗೇ ಧಾರೆಯೆರೆದು ಕೊಡುವೆ. ವರದಕ್ಷಿಣೆಗಾಗಿ ಏನು ಕೊಡಬೇಕು? ಚಿನ್ನದ ಉಂಗುರವೋ ಬೆಳ್ಳಿಯ ನಾಣ್ಯಗಳೋ?

"ಯಾವದಾದರೂ ಅಡ್ಡಿಯಿಲ್ಲ" ಎಂದು ಅವನು ಇಳಿಮೊಗದಲ್ಲಿ ಹೇಳಿದ. ಅವನ ಉತ್ತರವನ್ನು ಕೇಳಿ ಅವನು ನಾವು ತಿಳಿದುಕೊಂಡಂತೆ ಹುಚ್ಚನಲ್ಲ ಅನಿಸಿತು. ಸುಬ್ರಮ್ಮಣ್ಯನ 'ಮದುವೆಯಾಗವನಕ ಹುಚ್ಚು ಬಿಡದು; ಹುಚ್ಚು ಬಿಟ್ಟನಕ ಮದುವೆಯಾಗದು' ಎಂಬುದನ್ನು ದಾಟಿ ಇನ್ನಾವುದೋ ಸತ್ಯದಲ್ಲಿ ಸಾಗಿದ್ದ.

# ಬಳಚಿಯ ಬುಟ್ಟಿ

●

ನಿತ್ಯದಂತೆ ರಾಂಶೆಟ್ಟರಮಗ ಬೆಳಗಿನ ಚಹ ಮುಗಿಸಿ ಹಕ್ಕಿಹೊಳ್ಳಿಯ ಮೇಲೆ ಕುಳಿತ. ತಂದೆ ತೀರಿ ಮೂರು ತಿಂಗಳಾಯಿತು. ಕಲಿತ ಅರೆತ್ತೆ ಇಂಗ್ಲೀಷು ಮರೆಯಹತ್ತಿತು. ಪ್ರಾಯ ಬಂದಿದೆ; ಚಿಂತೆ. ಮದುವೆ ಮಾಡ ಬೇಕೆಂದು ಮುದಿತಾಯಿಯ ಆಶೆ. ಆದರೆ ಸರಿಯಾದ ಹೆಣ್ಣೇ ಈ ಊರಿ ನಲ್ಲಿಲ್ಲ. ಇಂದು ಮುದಿತಾಯಿ ಬೆಳಗಿನ ಬಿಸಿನೀರು ಕುಡಿದು ತನ್ನ ತವರ ಮನೆಗೆ ಹೋಗಿದ್ದಾಳೆ. ತಾಯಿ ಹೆಣ್ಣು ಹುಡಿಕಿಕೊಂಡು ಬರಬಹುದೆಂದು ಶೆಟ್ಟರ ಮಗನ ಆಶೆ. ಒಂದು ತರದ ಆಲಸ್ಯ ಅವನನ್ನು ಅಂಟಿಕೊಂಡಿದೆ. ತುಸು ಮೋಡವೂ ಕಟ್ಟಿದೆ. ಆಕಳಿಕೆಯ ಮೇಲೆ ಆಕಳಿಕೆ. ಕೇರಿಯ ತುದಿಗೆ ಅವನ ಮನೆ. ಜತೆಯವರು ಬೇಕಾದರೆ ಅರ್ಧಮೈಲು ಹೋಗಬೇಕು. ಹೋಗಬೇಕೆಂದು ಅನಿಸಿದರೂ ಆಲಸ್ಯ ಅವನನ್ನು ಹೊಳ್ಳಿಗೆ ಅಂಟಿಸಿದೆ. ಮೇಲಾಗಿ ಆ ಬಳಚಿಯ ಬುಟ್ಟಿಯನ್ನು ನೋಡಿದತನಕ ಅವನಿಗೆ ಆಲಸ್ಯವೂ ಸರಿಯಾಗಿ ಕವಿಯುವಂತಿಲ್ಲ! ಅದೇ ನಿರೀಕ್ಷಣೆಯಲ್ಲಿ ಕುತ್ತಿಗೆಯನ್ನು ಉದ್ದ ಮಾಡುತ್ತಿದ್ದ.

ಎಂದಿನಂತೆ ಬಳಚಿಯ ಬುಟ್ಟಿಯನ್ನು ಹೊತ್ತು ಅಂಬಿಗ ಹುಡುಗಿ ಬಂದಳು. ಅದೇ ಹರೆಯ. ಅದೇ ಅರಬತ್ತಲೆ. ಅದೇ ದೇಹಸೌಷ್ಟವ, ಕವಳ ಜಗೆದಂಥ ಬಾಯಿ. ಶೆಟ್ಟರಮಗನ ಮೈ ಝುಮ್ಮೆಂದಿತು ತಾನು ಬಳಚಿ ತಿನ್ನುವವನಲ್ಲವೆಂಬ ಸಂಗತಿ ಎಲ್ಲರಿಗೂ ಗೊತ್ತಿರುವಾಗ ಬುಟ್ಟಿಯನ್ನು ಕರೆಯುವದೆಂತು? ಬಳಚಿ ಬುಟ್ಟಿಯ ಹುಡಿಗಿಗಂತೂ ಇತ್ತ ಲಕ್ಷವೇ ಇಲ್ಲ. ಆದರೂ ಎಷ್ಟೋ ದಿನಗಳಿಂದ ಹಾಕಿ ಕುಳಿತ ಹೊಂಚು ಇಂದು "ಏ ಬುಟ್ಟಿ" ಎಂದು ಕರೆಯಲು ಪ್ರೇರೇಪಿಸಿತು. ತಾಯಿಯೂ ಇಲ್ಲವೆಂಬ ಧೈರ್ಯ. ಮೇಲಾಗಿ ಕೇರಿಯ ತುದಿ. ಏ ಎನ್ನುವಾಗಲೇ ಅವನ ದನಿ ಕಂಪಿಸಿತು.

ಅಂತೂ ಬುಟ್ಟಿ ಬಂತು. “ನೀವೂ ತಿನ್ತ್ರಾ?” ಎಂದು ಕೇಳುತ್ತ ಬುಟ್ಟಿಯನ್ನು ಕೆಳಗೆ ಇಳಿಸಿದಳು. “ಇಲ್ಲಿ ಬೇಡ. ಮನೆಯ ಹಿಂದೆ.” ಎಂದು ಶೆಟ್ಟರಮಗ ಆಕಡೆ ನಡೆದ. ಏನೆಲ್ಲಾ ವಿಚಾರ. ಏನೆಲ್ಲಾ ದೃಷ್ಟಿ. ಹುಡಿಗಿಯೂ ಬಂದಳು. ಬಚ್ಚಲಮನೆಯಲ್ಲಿ ಬುಟ್ಟಿ ಇಡಲು ಹೇಳಿದ. “ದರ ಹೇಗೆ?” ಎಂದು ಕೇಳುವಾಗ ಅವನ ಕಣ್ಣು ಎಲ್ಲೆಲ್ಲೂ ಸುತ್ತಾಡಿದವು. “ಆಯ್ಯೋ ವೊಡ್ಯಾ ನಿಮ್ಮಪ್ಪ್ನೋರು ಅಂತ್ರೆ ನಮ್ಗೆ ಸಾಕ್ಷಾತ್ ದೇವ್ರು. ಅವ್ರು ಮಾಡ್ದ ಸಹಾಯ ನೆನ್ಪು ಮಾಡ್ಕಂಡ್ರೆ........ಬಂಗಾರ್ದ್ಥಾ ಮನ್ಸ್ರು. ನೀವು ಬಳ್ಚೀ ತಿಂಬೂದಾಂದ್ರೆ ಎಷ್ಟ್ಬೇಕೋ ಅಷ್ಟು ತಕಳಿ. ನಿಮ್ಹತ್ರ ನಾವು ಹಣ ಕೇಳ್ದ್ರೆ ದೇವ್ರು ಒಪ್ಲಿಕ್ಕಿಲ್ಲ.” ಅನ್ನುವಾಗ ಆನ್ನೂವರೆಗೂ ಶೆಟ್ಟರ ಮಗನೊಡನೆ ಮಾತಾಡಿದ ಅವಳು ಸಮೀಪದ ಸೋದರಿಯಾದಳು. “ಮೀನ ಬೇಕಾದ್ರೂ ತಂದ್ಕೊಡ್ತೆ.” ಕಾಮನು ಸೋತ. “ದೇವ್ರು ಒಪ್ಲಿಕ್ಕಿಲ್ಲ” ಎಂಬ ಮಾತು ಮಾರ್ದನಿಸಿತು. “ನಮ್ಜಾತೀ ಜನ್ರು ಬಳ್ಚೀ ತಿನ್ನೂದಿಲ್ವೆ? ನನ್ಗೆಲ್ ಗೊತ್ತು? ನಾನು ಪೇಟೀಲಿ ಇದ್ದವ. ಹೋಗ್ಲಿ. ಬಳ್ಚೀ ಬೇಡ. ನಾಳೀಗೆ ಮೀನಾ ತಂದ್ಕೊಡ್ತೀಟ?”

“ಹುಂ.”

ಬಳಚಿಯ ಬುಟ್ಟಿ ಮರಳಿತು. “ದೇವ್ರು ಒಪ್ಲಿಕ್ಕಿಲ್ಲ” ಎಂಬ ಮಾತು ಶೆಟ್ಟರಮಗನ ಮನಸ್ಸಿನಲ್ಲಿ ಮಾರ್ದನಿಸಿತು.

---

# ದನಗಾಹಿ

●

ನಮ್ಮೂರಿನಲ್ಲಿ ವಿಶ್ವವಿದ್ಯಾಲಯವನ್ನಾದರೂ ಸ್ಥಾಪಿಸಬಹುದು. ಆದರೆ ದನಗಾವಲನ್ನು ಮಾಡುವದು ಸಾಧ್ಯವಿಲ್ಲ. ಮೊದಲನೆಯದಾಗಿ ದನಗಳೇ ಅದಕ್ಕೆ ತಯಾರಿಲ್ಲ. ಒಂದೇ ಗೋಲೆಯಾಗಿ ಒಂದೇ ಕಡೆಗೆ ಮೇಯುವ ದೆಂದರೆ ಹುಡುಗರು ಸಾಲೆಗೆ ಹೋದಂತೆ ಎಂಬ ಸತ್ಯವನ್ನು ಅವು ಕಂಡಂತಿದೆ. ಎರಡನೆಯದಾಗಿ ದನಕಾಯುವಂಥ ಜವಾಬುದಾರಿಯ ಕೆಲಸ ಮಾಡಲು ಯಾರೂ ಸಿದ್ಧರಿಲ್ಲ. ನಮ್ಮೂರಿನ ದನಗಾವಲೆಂದರೆ ಹುಲಿಯ ಬಾಯಿಯಲ್ಲಿ ಹುಲ್ಲೆಯನ್ನು ಸಾಕುವಂತೆ ಹುಲ್ಲಿಗಾಗಿ ಚಂದಾವರದ ಬೆಟ್ಟದಕಡೆಯ ಬಯಲುಗಳಿಗೆ ಹೋಗಬೇಕು. ಅಲ್ಲಿ ಹುಲಿ ಹಗಲಿನಲ್ಲೂ ಬಾಯಿ ತೆರೆದು ಕುಳಿತಿರುತ್ತದೆ. ದನಗಳು ಹುಲಿಯ ವಾಸನೆ ಹಿಡಿದು ಅತ್ತ ಮೇಯು ಹೋಗಲೇ ಸಿದ್ಧವಾಗುವದಿಲ್ಲ. ಕಾಯುವವನಿಗಂತೂ ಹುಲಿಯ ಕೂಗು ಕೇಳಿಯೇ ಎದೆಯ ದೀಪ ನೊಂದಿಹೋಗುವವೆಂಬ ಭಯ. ಕೋವಿ ಈಟಿ ಗಳನ್ನು ಕೊಟ್ಟರೂ ಈ ಕೆಲಸಕ್ಕೆ ಯಾರೂ ಬರುವಂತಿಲ್ಲ. ಕುಪ್ಪನ ಮನೆ ಹಾಳಾದ ನಂತರವಂತೂ ಈ ಕೆಲಸ ಇನ್ನಿಷ್ಟು ಬಿಗಿಯಾಗಿದೆ ಆದ್ದರಿಂದ ಮೊದಲು ಹುಲಿ ಕೊಲ್ಲುವ ಕೆಲಸ ಮಾಡಬೇಕೆಂದು ಶಿಕಾರಿಗೆ ಹೋಗಲು ಹತ್ತಿದ್ದಾರೆ. ಒಂದೆರಡೇ ವರುಷಗಳಲ್ಲಿ ಆರೆಂಟು ಹುಲಿ, ಹುಲಿ ಬುರ್ಕ ಗಳನ್ನು ಕೊಂದಾಯಿತು. ಈ ಖಾತೆಯಲ್ಲಿ ಪ್ರಗತಿಗಾಗಿ ಹುಲಿಯ ಹಿಂಡೆಲ್ಲ ನಾಶವಾದರೆ ದನಗಾವಲಿಗೆ ತಾಮುಂದೆ ತಾಮುಂದೆ ಎಂದು ಒಕ್ಕಲಿಗರು ಬರಬಹುದು. ಪ್ರತಿತಿಂಗಳು ಬಾಲಕ್ಕೆ ಎರಡು ಸಿದ್ದೆ ಅಕ್ಕಿ, ವರುಷಕ್ಕೊಂದು ಕಂಬಳಿಯ ಜೋಡಿ ಸಿಗುವ ಕೆಲಸವನ್ನೇ ಒಕ್ಕಲಿಗರಷ್ಟೇ ಏಕೆ ಜೋಡು ಪದವೀಧರರೂ ಕೂಡ ಮಾಡಬಹುದು. 'ತಿಂಗಳಿಗೆ ಮೂರು ನಾಲ್ಕು ಖಂಡಿ ಅಕ್ಕಿ ಸಿಗುವ ಕೆಲಸವದೆ' ಎಂದು ಪ್ರಕಟಿಸಿ ಅರ್ಜಿಗಳನ್ನು ಕರದರೆ

ಕರ್ನಾಟಕ ನಿಸರ್ಗಪ್ರಿಯರಾದ ಎಷ್ಟೋ ಕವಿಗಳೂ ಈ ಕಾರ್ಯಕ್ಕೆ ಬರುವರೆಂಬ ಭೀತಿ ನನಗಿದೆ.

ನಿಜವಾಗಿಯೂ ದನ ಕಾಯುವದೆಂದರೆ ಎಷ್ಟು ಸುಲಭ—ಆದರೆ ಸಭ್ಯ—ವೃತ್ತಿ ನೋಡಿ. ದನಗಳನ್ನು ಗೋಲೆಯಲ್ಲಿ ಸೇರಿಸಿಕೊಂಡು ಬಯಲಿಗೆ ಹೋಗಿಬಿಟ್ಟರಾಯಿತು. ಅವು ಮೇಯುತ್ತವೆ. ಕಾಯುವವನು—ಕೃಷ್ಣನಂತೆ—ದಿಬ್ಬದ ಮೇಲೆ ಕೊಳಲೂದುತ್ತ ಕುಳಿತರಾಯಿತು. ಜತೆಗೆ ಗೋಪಿಕಾ ಸ್ತ್ರೀಯರಿದ್ದರಂತೂ ತೀರಿತು. ಆದರೆ ಹೀಗೆಲ್ಲ ಆಗುತ್ತಿರುವಾಗ ಹದಿನಾರು ಮೆಟ್ಟಿನ ಪಟ್ಟೆಹುಲಿಯೊಂದು ಬರಬಾರದು ಇಷ್ಟೇ !

ಕುಪ್ಪನ ಮನೆ ಹಾಳಾದ ನಂತರ ಎಂದು ಹೇಳಿದೆನಲ್ಲ. ಅದನ್ನು ಹೇಳಲಿಕ್ಕೇ ಹೊರಟಿದ್ದೆ, ಇಷ್ಟೆಲ್ಲ ಸುತ್ತು ಬರಬೇಕಾಯಿತು. ಕ್ಷಮಿಸಿ.

ನಮ್ಮೂರಿನಲ್ಲಿ ದನಕಾಯಲು ಒಂದು ಪಿಳ್ಳೆಯೂ ಸಿದ್ಧವಿಲ್ಲದಾಗ ಕುಪ್ಪನು ಅಡಕ್ಕೆ ಮುಂದೆ ಬಂದುದು ನಮ್ಮೂರಿನ ದನಗಾವಲಿನ ಇತಿಹಾಸದಲ್ಲಿ ಮಹತ್ವದ ಸಂಗತಿ. ಕುಪ್ಪನಿಗೆ ಬರೆಹ ಇದ್ದಿದ್ದರೆ ಆವನೊಬ್ಬ ಪ್ರಖ್ಯಾತ ಕನ್ನಡ ಕವಿಯಾಗಿ ಬಿಡುತ್ತಿದ್ದ. (ಅವನ ಕವಿತಾಶಕ್ತಿಯನ್ನು ಕುರಿತು ಇನ್ನೊಮ್ಮೆ ಹೇಳುವೆ.) ಏಕೊ. ಆವನು ಕವಿಯಾಗುವದು ಸರಸ್ವತಿಗೇ ಸರಿ ಕಾಣಲಿಲ್ಲವೆಂತ ತೋರುತ್ತದೆ. ಅವನು ಸರಸ್ವತಿಯನ್ನೂ ಗಣಿಸುತ್ತಿದ್ದಿಲ್ಲ. ಆದರೆ ಯಮುನೇ ಅವನ ಹಗೆ ಕಟ್ಟಿದುದು ಶೋಚನೀಯ. (ಸರಸ್ವತಿಯು ಯಮುನೊಡನೆ ವ್ಯಭಿಚಾರ ಮಾಡುವವಳಲ್ಲ, ಎಂದು ಹೇಳಲೂ ಬಾರದು.)

ಹಗಲಿನಲ್ಲಿಯೇ ಹುಲಿಯ ಅಬ್ಬರ ಕೇಳಿಬರುತ್ತಿರುವಾಗ ಕುಪ್ಪ ತನ್ನ ಹೆಂಡತಿ ಮಗನೊಡನೆ ಧೈರ್ಯದಿಂದ ಕಾವಲು ಮಾಡುತ್ತಿದ್ದ. ಎಷ್ಟೋ ದನಕರುಗಳು ಹುಲಿಯ ಬಾಯಿಗೆ ಬಿದ್ದುದು ನಿಜ. ಆದರೆ ಹುಲಿಯಂತಹ ಮನುಷ್ಯನೆದುರು ಹುಲಿ ಅಂಜಲೇ ಬೇಕಲ್ಲವೆ ? ಕುಪ್ಪ ಹುಲಿಯೇ. ಕಂಠದ ಅಬ್ಬರದಿಂದಲೇ ಹುಲಿಯನ್ನು ಹಿಮ್ಮೆಟ್ಟಿಸುವ ಶಕ್ತಿ ಅವನಿಗಿತ್ತು. ಇದೆಲ್ಲ ತೋರಿಕೆಗೆಂದೂ ಕುಪ್ಪನ ನಿಜವಾದ ಶಕ್ತಿ ಹುಲಿದೇವರ ಪೂಜೆಯಿಂದ ಬಂದು

ದೆಂದೂ ಕೆಲವರು ಹೇಳುತ್ತಿದ್ದರು. ಅನ್ನೇನೇ ಇರಲಿ ಹುಲಿಗೆ ಹೆದರಿ ಕಾವಲು ನಿಲ್ಲದಂತೆ ಕುಪ್ಪ ನೋಡಿಕೊಂಡ.

ಕೆಲದಿನಗಳ ಮಟ್ಟಿಗೇನೋ ವಿಶೇಷ ದನ ಹಾನಿಯಿಲ್ಲದೆ ಕಾವಲು ಸಾಗಿತು. ಊರಿನವರೆಲ್ಲ ಕುಪ್ಪನ ಧೈರ್ಯಕ್ಕೆ ತಲೆದೂಗಿದರು. ಆದರೆ ಕುಪ್ಪನು ಹುಲಿಯಿಂದಲೇ ಮಡಿದನು.

ಒಂದುದಿನ ಕುಪ್ಪ ಹೆಂಡತಿ ಮಗನೊಡನೆ ದನ ಕಾಯುತ್ತಿರುವಾಗ ಹುಲಿಯ ಬೊಬ್ಬೆ ಕೇಳಿಸಿತು. ಅದರ ದನಿಯ ಮೇಲಿಂದಲೇ ಹುಲಿಯು ಯಾವುದೋ ಗಂಡಾಂತರದಲ್ಲಿ ಸಿಲುಕಿದೆಯೆಂದು ತಿಳಕೊಂಡ. ದನದ ಗೋಲೆ ಮನೆಯ ಕಡೆಗೆ ಓಡಹತ್ತಿತು. ದನಗಳೆಲ್ಲ ಹಳುವದ ಹೊರಗೆ ಹೋದಮೇಲೆ ಹೆಂಡತಿ ಮಗರನ್ನು ದನಗಳ ಹಿಂದೆ ಕಳಿಸಿ ತಾನು ತುಸು ತಡೆದು ಬರುವೆನೆಂದು ಹೇಳಿದ. ದೂರದಿಂದ ಹುಲಿಯ ಬೊಬ್ಬೆ ಕೇಳಿಬರುತ್ತಿರುವಾಗ ಹೆಂಡತಿ ಮಗರಿಬ್ಬರೂ ಇವನನ್ನು ಬಿಟ್ಟಾರೆ? ಸಂಗತಿಗೇ ಒಯ್ದರು. ಆದರೆ ಕುಪ್ಪನ ಮನಸ್ಸೆಲ್ಲ ಆ ಹುಲಿಯ ಆತುರದ ಸ್ವರದ ಕಡೆಗೇ ಇತ್ತು.

ಬಿಡಾರಕ್ಕೆ ಬಂದವನೇ ಕೊಪ್ಪದವರು ಹೊಲಕ್ಕೆ ಹೋಗಿದ್ದಾರೋ ಎಂದು ನೆರೆಮನೆಯ ಬೀರನನ್ನು ಕೇಳಿದ. ಹೊಲಕ್ಕೆ ಹೋಗುವುದಾದರೆ ಕುಪ್ಪನನ್ನು ಬಿಟ್ಟು ಹೋಗುವದುಂಟೇ? ಹುಲಿಯ ಆರ್ತಸ್ವರದ ಸುದ್ದಿಯನ್ನು ಬೀರ ನಂಬಲಿಲ್ಲ. "ದಿನ್ದ ಹಾಂಗೇ ಕೂಗೂಕೆ ಸಾಕು. ಸಾಯ್ಲಿ ಬಿಡು" ಎಂದು ಹೇಳಿ ಮನಸ್ಸಿಗೆ ಹಾಕಿಕೊಳ್ಳಲೇ ಇಲ್ಲ.

ರಾತ್ರಿ ಮಲಗಿಕೊಂಡರೂ ಕುಪ್ಪನ ಕಿವಿಯಲ್ಲಿ ಆ ಆರ್ತಕೂಗೇ ಮಾರ್ದನಿಸಹತ್ತಿತು. ಬೀರನನ್ನು ಮೆಲ್ಲಗೆ ಎಬ್ಬಿಸಿ ತನ್ನ ನಿಶ್ಚಯ ಹೇಳಿದ. "ನಿನ್ಗೆ ಹುಚ್ಚು. ಮನ್ಕೊ." ಎಂದು ಬೀರ ಮುಸುಕು ಹಾಕಿಬಿಟ್ಟ. ಬಂದು ಮಗನನ್ನು ಮಾತ್ರ ಮೆಲ್ಲಗೆ ಎಬ್ಬಿಸಿದ. ಕೋಸ ಎದ್ದ. ೧೦–೧೨ ವರ್ಷದ ಹುಡುಗ. ತಂದೆಯ ಮಾತಿನಂತೆ ಸದ್ದು ಮಾಡದೆ ಈಟಿ, ಕತ್ತಿ ಹಿಡಿದು ಹಿಂಬಾಲಿಸಿ ನಡೆದ.

ನಕ್ಷತ್ರಗಳ ಬೆಳಕಿನಲ್ಲಿ ತಂದೆ ಮಗ ಇಬ್ಬರೂ ಬೆಟ್ಟ ಹೊಕ್ಕರು. ( ಬೆಟ್ಟ ಅಂದರೆ ಅಷ್ಟೇನೂ ದಟ್ಟವಾಗಿಲ್ಲ. ) ಕೋಸ "ಅಪ್ಪಾ ಅಕೊ! ಹುಲಿ ಕೂಗು" ಎಂದ. ಕುಪ್ಪನಿಗೂ ಕೇಳಿಸಿತು. ಅದೇ ಆರ್ತಸ್ವರ. ಮುಂದೆ ಹೋಗಲು ಕತ್ತಲೆ. ಹಿಂದೆ ಹೋಗಿ ಕೊಪ್ಪದವರಿಗೆ ಹೇಳೋಣ ಎಂದೆನಿಸಿತು. ವಿಚಾರಿಸುತ್ತ ನಿಂತಂತೆ ಚುಂಚುಂ ಬೆಳಗಾಗಹತ್ತಿತು. ಇರುಳು ಸವೆದದ್ದು ಆಗ ತಿಳಿಯಿತು ಅವರಿಗೆ. "ಬಗೀಕೆ ಬೆಳ್ಗಾಗ್ಲಿ. ನೋಡಬಿಡ್ವ" ಅಂದ ಕುಪ್ಪ. "ಹು" ಎಂದು ಕೋಸ ಅಲ್ಲೇ ಮುರುಟಿ ಕುಳಿತ.

ಆರ್ತಸ್ವರದ ಸುಳುವು ಹಿಡಿದು ಮುಂದೆ ನಡೆದರು. ನಿಜವಾಗಿಯೂ ಹುಲಿಗೆ ಏನೋ ಆಗಿರಬೇಕೆಂದು ಕೋಸನಿಗೂ ಅನಿಸಿತು. ಮತ್ತೂ ಮುಂದೆ ಹೋದಂತೆ ಸಂಶಯ ಇನ್ನಿಷ್ಟು ನಿಜ ಅನಿಸಹತ್ತಿತು. "ಅಪ್ಪಾ ಹಂದಿಕುಳಿ ಸಮೀಪ ಬಂತು" ಅಂದ ಕೋಸ. ಈಗ ಕುಪ್ಪನಿಗೆ ಸತ್ಯ ಹೊಳೆಯಿತು. "ಬಾ ಬೇಗ. ಸತ್ತೇ ಬಿತ್ತು ಹುಲಿ ಇನ್ನು" ಎನ್ನುತ್ತ ದೂರ ದಾಪು ಹಾಕಹತ್ತಿದ.

ಹಾಗೆಯೇ ಆಗಿತ್ತು. ಇಡೀ ಬೆಟ್ಟದಲ್ಲೆಲ್ಲ ತನ್ನ ಸಂತತಿಯನ್ನು ಹಬ್ಬಿಸಿದ ಮುದಿ ಹದಿನಾರು ಮೆಟ್ಟಿನ ಹುಲಿ ಹಂದಿಕುಳಿಯಲ್ಲಿ ಬಿದ್ದು ಏಳಲಾರದೆ ಬೊಬ್ಬೆ ಹೊಡೆಯುತ್ತಿತ್ತು ! ಕೈಯ ಈಟಿಯಿಂದ ಸಹಜವಾಗಿ ಕೊಲ್ಲಬಹುದೆಂದು ಕೋಸನನ್ನು ದೂರ ನಿಲ್ಲಿಸಿ ಜೋರಾಗಿ ತಿವಿದ. ಈಟಿಯ ಮೊನೆ ಹುಲಿಯ ಕಣ್ಣಿಗೇ ನಾಟಿತು. ಸಾಯುವ ಹೊತ್ತಿಗೆ ಜೀವಿಗಳಿಗೆ ಎಲ್ಲಿಯ ಶಕ್ತಿ ಬರುತ್ತದೆಯೋ. ಹುಲಿ ಕುಪ್ಪಳಿಸಿ ಕುಪ್ಪನ ಸಮೇತ ಮತ್ತೆ ಕುಳಿಗೆ ಬಿತ್ತು. ಕೋಸ "ಅಯ್ಯೋ ಅಪ್ಪಾ" ಎಂದು ಚೀರಿದ. ಹುಲಿಯ ಅಬ್ಬರ ಬೆಟ್ಟವನ್ನೆಲ್ಲ ಕಂಪಿಸಿತು. ಕುಳಿಯಲ್ಲಿ ಕುಪ್ಪ ಹುಲಿಯೊಡನೆ ಕಾದುವದು ಸಾಧ್ಯವೇ? ಅದರಲ್ಲಿಯೂ ಮರಣೋನ್ಮುಖ ಹುಲಿ. ಕುಪ್ಪನ ಪ್ರಾಣ ಹೀರಿಯೇ ಸತ್ತಿತು.

ಕುಳಿಯ ಬದಿಗೆ ಕುಳಿತು ಕೋಸ ಹಣೆ ಹಣೆ ಬಡಿದುಕೊಂಡು ಅತ್ತ. ಕೆಳಗೆ ಇಳಿಯಲೂ ಸಾಧ್ಯವಿಲ್ಲ. ಹುಲಿ ಮತ್ತು ಕುಪ್ಪರ ಹೆಣ ಬಿದ್ದಿದೆ, ಅಳುತ್ತ ಮನೆಗೆ ಬಂದ ಕೋಸ.

ಮುಂದಿನ ಸಂಗತಿ ಆಗುವಂತೆ ಆಯಿತು. ಕೋಸನಿಗೆ ಮಾತ್ರ ಹುಲಿಯ ಕುಲದ ಮೇಲೆ ಕೋಪ ಹುಟ್ಟಿತು. ತಾನು ಒಂದಾದರೂ ಹುಲಿಯನ್ನು ಕೊಲ್ಲದಿದ್ದರೆ ಕೋಸನಲ್ಲವೆಂದು ಪಣತೊಟ್ಟ.

ಒಂದಲ್ಲ ಮೂರು ಹುಲಿ ಕೊಂದ ಕೋಸ. ದನಗಾಹಿಯಾಗೇ ಅವನದೂ ಇಂತಹದೊಂದು ದುರಂತ. ಹಾಡಿದ್ದನ್ನೆ ಹಾಡುವ ಕಿಸವಾಯಿ ಜೀವನ. ನಾನೂ ಹಾಗಾಗಬಾರದೆಂದು ಕೋಸನ ಕೊನೆಯನ್ನು ಈಗ ಹೇಳಲೊಲ್ಲೆ.

# ಮಂಗಳಾರತಿ

●

ಕೆಲವು ವರ್ಷಗಳ ಹಿಂದೆ ನಮ್ಮೂರಿನಲ್ಲಿ ಹೀಗಾಯಿತು.

ಹೊಲಗಳಲ್ಲಿ ಹಸಿರೊಡೆಯಿತು. ಗ್ರಾಮದವರೆಲ್ಲ ಕೂಡಿ ಗ್ರಾಮದೇವತೆಗೆ ಕೃತಜ್ಞತೆಯ ಪೂಜೆ ಕೊಡಲು ಹೋಗಿದ್ದರು. ಊರಿಗೆ ಊರೇ ದೇವಸ್ಥಾನ ದಲ್ಲಿ ನೆರೆದಿತ್ತು.

'ಯೆಂಕ' ಅಪ್ಪ ಅಬ್ಬೆಯ ಕಣ್ಣು ತಪ್ಪಿಸಿ ಬಯಲಿನ ಒಂದು ಮೂಲೆಯಲ್ಲಿ ಕುಳ್ಳಿ ಒಡ್ಡಿ ಅದರ ಸಮೀಪದಲ್ಲಿಯೇ ಎಸುಡಿಯ ಬೇಟೆ ಮಾಡುತ್ತಿದ್ದ. ನೆವಕ್ಕೆ ಹೀಗೆ ಕೆಲಸ ಮಾಡುತ್ತಿದ್ದರೂ ಅವನ ದೃಷ್ಟಿ ಇನ್ನೆಲ್ಲೋ ಇತ್ತು. ಇವನಂತೆ ಹಿರಿಯರ ಹಿಂಡಿನಿಂದಗಲಿ 'ಚೊರಕ' 'ಬೊಮ್ಮಿ'ಯರು ಹೊಲದ ಬದಿಯ ಬಾಳೆಯ ತೋಟವೊಂದರಲ್ಲಿ ಗಾಳ, ಮೀನದ ಚೊಬ್ಬೆಗಳನ್ನು ಇಟ್ಟುಕೊಂಡು ಏನೇನೋ ಅಂತರಂಗ ನಡಿಸಿ ದ್ದರು. ಯೆಂಕನಿಗೆ ಬೊಮ್ಮಿ ಬೇರೆಯುವರೊಡನೆ—ಹರೆಯುದರೊಡನೆ— ಮಾತಾಡುವದನ್ನು ಕಂಡರೆ ಸಿಟ್ಟು. ತಾನು ಎಷ್ಟು ಪ್ರೀತಿಸಿದರೂ ಅವಳು ತನಗ ಒಲಿಯುವದಿಲ್ಲವಲ್ಲ! ಹಣದಾಸೆಗೂ ಮನಸ್ಸು ತಿರುಗಿಸಳಲ್ಲ. ಕೋಳಿ ಹಿಂಡು, ಎರಡು ವಾಲ್ಗಿ ಎತ್ತು, ಒಂದು ಗಾಡಿ, ಸೊಂತ ತೋಟ ಇರುವ ತನ್ನನ್ನು ಬಿಟ್ಟು ತಾಳೀ ಚಕ್ಕೆಯ ಗಂಜಿಯಿಂದ ಜೀವ ಹಿಡಿದ ಚೊರಕನಿಗೇ ಗಂಟು ಬಿದ್ದಳಲ್ಲ! ಚೊರಕನನ್ನು ಏನು ಮಾಡಲಿ? ತಾನು ಬೊಮ್ಮಿಯನ್ನು ಬಯಸಿದ್ದನ್ನು ತಿಳಿದೂ ತಿಳಿದೂ ಹೀಗೆ ಸೊಕ್ಕು ತೋರಿ ಸುವದೆಂದರೆ ಮನಸ್ಸಿನಲ್ಲಿಯೇ ಇವರಿಬ್ಬರನ್ನೂ ಕೊಂದ; ಕೊಂದು ಬೊಮ್ಮಿಗೆ ಪುನರ್ಜನ್ಮ ಪಡೆದು ಕೊಟ್ಟ. ಮದುವೆಯಾದ. ಮದುವೆಯಾಗುವಷ್ಟರಲ್ಲಿ ಚೊರಕನಿಗೂ ಜೀವ ಬಂದು ಬಿಟ್ಟಿತು! ಹೀಗೆಲ್ಲ ಕನಸಿಸುತ್ತ ಎಸುಡಿಯ ಬಿಲದಲ್ಲಿ ಕೈ ಹಾಕುತ್ತಿರಲು ಒಂದು ಮೊನೆ ನಾಟಿತು. ಸ್ವಲ್ಪ ಕೈ ಕೊರಿಸಿ

ಬಿಲ ಸೇರಿದ ಏಡಿಯ ಮೇಲೆ ರೇಗಿಕೊಂಡ. ಆ ಸಿಟ್ಟು ತಣಿಯುವುದರೊಳಗೆ ಗದ್ದೆಗೆ ಒಂದು ಎತ್ತು ಬಿದ್ದಿತು. ಬೇಲಿಯನ್ನು ಸರಿಸಿ ತನ್ನ ಕಣ್ಣಮುಂದೇ ಬಂದ ಎತ್ತನ್ನು ದೂರದಿಂದಲೇ ತರುಬಲು ಹೈ ಹೈ ಎಂದ. ಹಸಿರು ಮುರಿದು ಬಿದ್ದ ಸಸಿಗಳನ್ನು ಕಂಡು ಎತ್ತು ಹೈ ಹೈಗೆಲ್ಲ ಹೆದರುವದೇ? ತುಸು ಮುಂದೆ ಬಂದ. ಎತ್ತಿನ ಗುರುತು ಹತ್ತಿತು. ಚೊರಕನದು! ಪಿತ್ತ ಏರಿಬಿಟ್ಟಿತು. ಟೊಂಕದಲ್ಲಿದ್ದ ಕತ್ತಿಯನ್ನೇ ಬೀಸಿ ಒಗೆದುಬಿಟ್ಟ. ಹಿಂಗಾಲಿಗೆ ಹತ್ತಿ ರಕ್ತ ಸುರಿಯಹತ್ತಿತು. ಎತ್ತು ಕೂಗಿತು. ಕತ್ತಿಯನ್ನು ಬಿಟ್ಟು ಯೆಂಕ ಓಡಿದ.

ಚೊರಕ ಬೊಮ್ಮಿಯರು ಕೇವಲ ಸಾಮಾನ್ಯ ಮಾತಿನಲ್ಲಿಯೇ ತೊಡಗಿದ್ದರೆ ಇಷ್ಟು ಹೊತ್ತಿಗೆ ಅವರ ಲಕ್ಷ್ಯ ಈಕಡೆ ಹರಿಯುತ್ತಿತ್ತು. ಅಂತೂ ಎತ್ತು ಬೀಳುತ್ತ ಏಳುತ್ತ ಗದ್ದೆಯಲ್ಲಿ ಚಡಪಡಿಸುವದನ್ನು ಕಂಡು ಚೊರಕ, ಬೊಮ್ಮಿ ಇಬ್ಬರೂ ಹೋಗಿ ನೋಡಿದರು. ನೆತ್ತರ ಹರಿದಿತ್ತು. ಕತ್ತಿಯೂ ಸಿಕ್ಕಿತು.

ಎತ್ತಿನ ಕಾಲಿಗೆ ಲಂಗೋಟಿಯನ್ನೂ, ಬೊಮ್ಮಿಯ ದಟ್ಟಿಯ ದಡಿಯನ್ನೂ ಹರಿದು ಕಟ್ಟುತ್ತಿರುವಾಗಲೇ ದೇವಸ್ಥಾನದಲ್ಲಿ ಮಹಾಪೂಜೆಯ ಶಂಖ ಜಾಗಟೆಗಳು ಕೇಳಿದವು. ರಕ್ತ ಹರಿಯುವದು ನಿಲ್ಲಲಿಲ್ಲ. ಚೊರಕನು ಮನೆಗೆ ಓಡಿ ಕಾದಿಟ್ಟ ಕಾಯ್ಬೆಲ್ಲ ತಂದು ಕಟ್ಟಿದ. ಎತ್ತನ್ನು ಎತ್ತಿಕೊಂಡು ಹೋಗುವದೆಂತು?

ಪೂಜೆ ಮುಗಿಸಿ ಜನರೆಲ್ಲರೂ ಬರಹತ್ತಿದರು. ಇವರು ಅಲ್ಲೇ ಎತ್ತನ್ನು ಹಿಡಿದು ನಿಂತಿದ್ದರು. ಬಂದ ಮಂದಿಯಲ್ಲಿ ಚೊರಕನೂ ಇದ್ದ. ಏನೂ ಅರಿಯದವನಂತೆ ಮುಂದೆ ಬಂದು "ಪಾಪ! ಏನಾಯಿತು? ಯಾರು ಹೊಡೆದರು?" ಎಂದು ಎತ್ತಿನ ಮೈಸವರಿ ದುಃಖಪ್ರದರ್ಶಿಸಿದ. ಚೊರಕ ಬೊಮ್ಮಿ ಎಷ್ಟೇ ಸಿಟ್ಟಿನಿಂದ ಸತ್ಯ ಸಾರಿದರೂ ಅದು ಅಸೂಯೆಯ ಮಾತೆಂದು ತೀರ್ಮಾನಾಯಿತು.

* * * *

ಗ್ರಾಮಸ್ಥರಿಂದ ನ್ಯಾಯ ಬಗೆಹರಿಯಲಿಲ್ಲ. ಚೊರಕನ ಅಜ್ಜನಿಗೆ ಹುಚ್ಚೇಹಿಡಿದಿತ್ತು. ೧೦೦ ರೂ. ಕೊಟ್ಟು ತಂದ ಎತ್ತಿನ ಜೋಡಿ. ಚೊರಕ

ಬೊಮ್ಮ ಕಂಡವರಿದ್ದಾರೆ ಯಂಕ ಅಲ್ಲಿದ್ದುದನ್ನು. ಆದರೂ ಕೈ ಬೆಚ್ಚಗೆ ಮಾಡಿಸಿಕೊಂಡ ಪಾಟೀಲ ಶಾನುಭೋಗರು ಯೆಂಕನೇ ಅಂತ ಹೇಳಲು ಸಾಕಷ್ಟು ಆಧಾರವಿಲ್ಲವೆಂದು ಮುಗಿಸಿಬಿಟ್ಟರು.

ಎತ್ತು ಸತ್ತರೂ ಸಿಟ್ಟು ತಣಿಯಲಿಲ್ಲ. ಚೊರಕನ ಅಜ್ಜ ಮಾಮಲೇದಾರರಿಗೆ ಗಂಟು ಬಿದ್ದು ಗೋಳೋ ಎಂದು ಅತ್ತ. ಗ್ರಾಮಸ್ಥರ ಮುಖಾಂತರ ಅಪೀಲು ಮಾಡೆಂದು ಬಿಟ್ಟರು. ಮುದುಕನೂ ಗಟ್ಟಿ. ಕಚೇರಿಯ ಬಾಗಿಲಲ್ಲಿಯೇ ಸತ್ಯಾಗ್ರಹ ಮಾಡಿದ. ಕೊನೆಗೊಮ್ಮೆ ತಾವೇ ಹಳ್ಳಿಗೆ ಬಂದು ನೋಡುವೆವಾಗಿ ವಚನವಿತ್ತರು.

ಸರಕಾರದ ಕೆಲಸವೆಲ್ಲ ಹಾಗೇ. ಇಂದು ಅರ್ಜಿ ಮಾಡಿದರೆ ನಾವು ಸಾಯುವ ಒಳಗೇ ಆ ಕೆಲಸ ಆಗುವದೆಂಬ ನಿಶ್ಚಯವಿಲ್ಲ. 'ಮುಂದೆ ಹಾಕುವದು' ಸರಕಾರದ ಜೀವಧಾರಣ ಸೂತ್ರಗಳಲ್ಲೊಂದು! ಗದ್ದೆಯಲ್ಲಿ ತೆನೆ ಮೂಡಿದಾಗೊಮ್ಮೆ ಅಧಿಕಾರಿಗಳು ಬಂದರು. ಅಷ್ಟರಲ್ಲಿಯೇ ಅವರ ಕಿಸೆ ಬೆಚ್ಚಗಾಗಿತ್ತೆಂದು ಬೇರೆ ಹೇಳಬೇಕೇ? ಯೆಂಕನ ತಂದೆ ಸ್ವಲ್ಪ ಹಣ ಕಾಸಿದ್ದವ; ಗ್ರಾಮಸ್ಥರ ಮರ್ಜಿ ಹಿಡಿದವ. ಇಂಥವನ ಮುಂದ ನ್ಯಾಯ ನಡುಗಲೇ ಬೇಕಲ್ಲವೇ?

ಅಧಿಕಾರಿಗಳು ಚೊರಕ ಬೊಮ್ಮರಯರ ಹೇಳಿಕೆಯನ್ನೂ ಪೂರ್ಣ ತೆಗೆದು ಹಾಕಲಿಲ್ಲ.

"ನೀವು ಯೆಂಕನನ್ನು ನೋಡಿದ್ದು ಎಲ್ಲಿಂದ?"

"ಬಾಳೆಯ ತೋಟದಿಂದ"

"ನಿಂತೋ ಕುಳಿತೋ?"

"ಕುಳಿತು."

"ಒಳಿತು ಬನ್ನಿ ಈಗ ಅಲ್ಲೇ ನಿಮ್ಮಹಾಗೆ ಕುಳಿತು ನೋಡುವ. ಎತ್ತು ಬಿದ್ದ ಸ್ಥಳದಲ್ಲಿ ಒಬ್ಬರು ನಿಂತು ಕತ್ತಿ ಬೀಸಲಿ. ಕಾಣುತ್ತದೆಯೋ ನೋಡುವ"

ಎದೆಮಟ ಪೈರು ಬೆಳೆದಾಗ ಬಾಳೆಯ ತೋಟದ ತಗ್ಗಿನಿಂದೆಲ್ಲಿ ಕಾಣಬೇಕು? ಮಾಮಲೇದಾರರು "ಡಿಸ್‌ಮಿಸ್" ಅಂದು ಊಟಕ್ಕೆ ಹೊರಟರು.

ಎಲ್ಲರೂ ಸರಿ ಸರಿ ಯೆಂದು ಯೆಂಕನು ನಿರಪರಾಧಿಯೆಂಬ ತೀರ್ಪನ್ನೇ ಸಾರಿದರು. ಬೊಮ್ಮಿ ಮಾತ್ರ ಬೆರಗಾದಳು. ನಾವು ಕಣ್ಣಲ್ಲಿ ಕಂಡದ್ದೂ ಈ ಸಾಹೇಬರ ಕೈಯಲ್ಲಿ ಸುಳ್ಳಾಯಿತಲ್ಲ ಎಂದು ಅವಳು ಗೊಣಗಿಕೊಂಡಳು. ಮುಂದೆ ಬಂದು ಅಧಿಕಾರಿಗೆ ಹೇಳಿದಳು—"ನೋಡಿ ಸೋಮಿ. ಈ ಕೆಲ್ಸ ಆದ್ದು ನೆಟ್ಟೇಕೂಡೆ. ಈಗೆ ಇಷ್ಟೆತ್ರ ಆಗೀವೆ ಹುಲ್ಲು. ಇದ್ನೆಲ್ಲಾ ಕೊಯ್ದ್ರೆ ಇಲ್ನಿಂತ್ಕಂಡು ಅಲ್ಲಿ ಕತ್ತಿ ಬೀಸಿದ್ದು ಕಾಣ್ಬೌದು." ಇಷ್ಟು ಸರಳವಾದ ವಿಷಯ ಬೇರೆ ಯಾರಿಗೂ ತಿಳಿದಿತ್ತಿಲ್ಲ ಎಂದಲ್ಲ. ಪಾಟೀಲರ ಮಾತು ಮೀರಿ ಹೇಳಲು ಯಾರೂ ಸಿದ್ಧರಿದ್ದಿಲ್ಲ ಮಾಮಲೇದಾರರಿಗೂ ಇದು ಹೊಳೆದಿತ್ತು. ದರ್ಪದಿಂದ ಇಂಥ ಸಣ್ಣ ಸಂಗತಿಯನ್ನು ಅಡಗಿಸಬಹುದೆಂದು ತನ್ನ ಆಡಂಬರದಿಂದ ಇದನ್ನು ಯಾರೂ ಎತ್ತದಂತೆ ನೋಡಿಕೊಳ್ಳಬಹುದೆಂದು ನಂಬಿದ್ದರು.

ಬೊಮ್ಮಿಯ ಮಾತು ಎಲ್ಲರಿಗೂ ಹೌದೆನಿಸಿತು. "ನೋಡುವ. ಪೈರು ಕೊಯ್ಯುವ ಹೊತ್ತಿಗೆ ಇನ್ನೊಮ್ಮೆ ಬರುವೆ"ನೆಂದು ಹೇಳಿ ಸಾಹೇಬರು ನಡೆದರು. ಅವರ ಮೊಗ ಇಳಿದಿತ್ತು.

"ಬೊಮ್ಮಿ, ಸಾಯ್ಬ್ರು ಮೊಕಕ್ಕೆ ಪಂಗ್ನಾಮ್ತೀನೇ ಮಾಡ್ದ್ಳಲ್ಲ!" ಅಂದ ಚೊರಕ.

# ಸುಬ್ಬನ ಮೇಳದ ಪುಟ್ಟ

ಸುಬ್ಬ ಸತ್ತು ಆರೇಳು ವರುಷವಾದರೂ ನಮ್ಮೂರಿನ ಆಟದ ಮೇಳ ಅವನ ಹೆಸರಿನಿಂದಲೇ ಬದುಕಿಕೊಂಡಿದೆ. ದೇವಲ್ ಸರ್ಕಸ್ ಕಂಪನಿ ಇಲ್ಲವೆ? ಅದರಂತೆ. ಸುಬ್ಬ ಸತ್ತಮೇಲೆ ಒಂದೆರಡು ವರುಷ ಈ ಮೇಳ ಮುಗ್ಗಿಬಿದ್ದಿತ್ತು. ಪುಟ್ಟ ಸೇರಿಕೊಂಡಮೇಲೆ ಅದಕ್ಕೆ ಸಂಜೀವಿನಿ ಸಿಕ್ಕ ಹಾಗಾಯಿತು. ಈಗ ಈ ಮೇಳ ಮತ್ತೆ ತನ್ನ ಪಗಡೆ ಕಿರೀಟಗಳನ್ನು ಮೆರೆಯಿಸಹತ್ತಿದೆ; ಸುಬ್ಬನ ಮೇಳದ ಮೃದಂಗ ಪುನಃ ಧಿಕ್ ತೋಂಗುಡಹತ್ತಿದೆ. ಆದರೆ 'ಸುಬ್ಬನ ಮೇಳ' ಅಂದಷ್ಟಕ್ಕೆ ಜನ ಸೇರುವದಿಲ್ಲ ಈಗ. "ಪುಟ್ಟನ ಪಾರ್ಟು ಯಾವದು?" ಎಂದು ಮೊದಲು ಕೇಳಿಕೊಳ್ಳುತ್ತಾರೆ. ಪುಟ್ಟ ಇಲ್ಲ ಅಂದರೆ ಸುಬ್ಬನ ಹೆಸರೂ ಸತ್ತಹಾಗೆಯೇ.

ಪುಟ್ಟ ಇಷ್ಟು ಪ್ರಸಿದ್ಧವಾಗಲು ಅವನ ಆಕಾರವಷ್ಟೇ ಕಾರಣವಲ್ಲ. ಅವನು ಯಾವ ಪಾರ್ಟು ಕೊಟ್ಟರೂ ರೈಸಿಕೊಂಡು ಹೋಗುತ್ತಾನೆ. ಅರ್ಥವನ್ನು ಹೊಸ ರೀತಿಯಲ್ಲಿ ತಿರುಗಿಸಿ ಹಳೆಯ ಕತೆಗಳಿಗೆ ನವೀನ ಗತಿ ಕೊಡುತ್ತಾನೆ.

ಕಳೆದ ವರುಷ ಒಂದೆರಡು ಆಟ ನೋಡಿವೆ. ಒಂದರಲ್ಲಿ ಪುಟ್ಟ ಲಕ್ಷ್ಮಣನ ಪಾರ್ಟು ಮಾಡಿದ್ದ. ರಾಮ ಸೀತೆಯರು ವನವಾಸಕ್ಕೆ ಹೋಗುವ ಸಂದರ್ಭ. ಕೈಕೇಯಿಯ ಒತ್ತಾಯ ಜೋರಾಗಿದೆ. ಲಕ್ಷ್ಮಣನಿಗೆ ಹಿಡಿಸಲಾರದಷ್ಟು ಕೋಪ. ಸಾರಿಯೇ ಬಿಟ್ಟ: ಅಣ್ಣಯ್ಯ ತಂದೆಯವರ ಮಾತನ್ನು ನಡಿಸಲು ನೀನು ಬೇಕಾದರೆ ಅರಣ್ಯಕ್ಕೆ ಗಮನ ಮಾಡಬಹುದು ಕಂಡೆಯಾ? ಅಗ್ರಜಾ, ಕುಹಕಿಯಾದ ಇವಳಿಗೆ (ಕೈಕೆಗೆ) ಒಂದು ಕೈ ತೋರಿಸಿ ಬಿಡುತ್ತೇನೆ. ಕ್ಷಮಿಸು ಸೋದರಾ. ರಾಜ್ಯದಲ್ಲಿ ನನಗೆ ಹಕ್ಕಿದೆ ನನ್ನ ಪಾಲನ್ನು ನಾನು ನ್ಯಾಯವಾಗಿ ಪಡೆದೇ ಪಡೆಯುವೆ. ಅಣ್ಣಯ್ಯ ಇಂಗ್ಲೀಶು ಮಾಡುವ ಇಂಥ ಹೆಂಗ

ಸಂಗೆ ಹೆದರಿದರೆ ಸಾಧ್ಯವೇ....ಸಭಿಕರೆಲ್ಲಾ ಚಪ್ಪಾಳೆ ಹೊಡೆದರು. ರಾಮನಿಗೆ ಮಾತ್ರ ಏನು ಹೇಳಬೇಕೆಂಬುದೇ ತಿಳಿಯಲಿಲ್ಲ. ಆದರೆ ಅವನೂ ಚುರುಕು. ಪುಟ್ಟನು ಒಡ್ಡಿದ ಇಂಥ ಅನೇಕ ಘಟೀತಿಗಳಿಂದಲೇ ಅವನು ಪಾರಾಗಿದ್ದ. ಈಗಲೂ ಅವನು ಮಂಕಾಗದೆ "ಸೋದರಾ ನೀನನ್ನುವದು ನಿಜ. ನ್ಯಾಯವಾಗಿ ನೀನು ಪಾಲು ತೆಗೆದುಕೊಳ್ಳಬಹುದು. ಆದರೆ ಈಗ ಕೋರ್ಟಿಗೆ ರಜೆಯಲ್ಲವೇ? ಲಕ್ಷ್ಮಣಾ, ನನ್ನೊಡನೆ ತುಸು ದಿನ ಅಲೆದಾಡಿ ಬಂದು ದಾವೆಯನ್ನು ದಾಖಲು ಮಾಡುವಂಥವನಾಗು. ತಿಳಿಯಿತೇ ತಮ್ಮಾ. ಲಕ್ಷುಮಣಾ?" ಏನೋ ರಾಮನ ಪುಣ್ಯ "ಅಯೋಧ್ಯೆಯ ಕೋರ್ಟು ಕಚೇರಿಗಳನ್ನು ನನ್ನ ಮನಬಂದಾಗ ತೆರೆಯಿಸಲಾರೆನೇ?" ಎಂದು ಲಕ್ಷ್ಮಣನು ಕೇಳಲಿಲ್ಲ!

ಇನ್ನೊಂದು 'ರಾಮಾಯಣ'ದಲ್ಲಿ ಪುಟ್ಟ ರಾವಣನಾಗಿದ್ದ. ಥೇಟು ರಾವಣ! ಸೀತಾಪಹರಣವಾಯಿತು. ಅಶೋಕವನಕ್ಕೆ ಸೀತೆಯನ್ನು ತಂದು ನಮ್ಮ ರಾವಣನು ಹೀಗೆ ಹೇಳುತ್ತಾನೆ: ಸೀತಾ, ಮುಪ್ಪಿನಲ್ಲಿ ಮಕ್ಕಳಾಗುವದುಂಟೆ? ದೇವರು ದಿಂಡರಿಂದ ಸಂತತಿಯಾಗುತ್ತದೆನ್ನಲು ದೇವರು ಪರಸ್ತ್ರೀಗೆ ಹೆದರುವದಿಲ್ಲವೆ? ಆದ್ದರಿಂದ ಸೀತಾ,

ನಿನ್ನ ಪತಿಯು ವೃದ್ಧ
ಪಿತನಿಂದ ಪುಟ್ಟಿಲ್ಲ
ದಶರತನ ಹೆಂಡರು
ಪತಿವ್ರತೆಯರಲ್ಲಾ.

ಎಂದು ಹಾಡಿದ! ಕತೆಯು ಅಡ್ಡಹಾದಿ ಹಿಡಿಯದಂತೆ ನೋಡಿಕೊಳ್ಳಲು ಶೋಕಿಸುವ ಸೀತೆಯು ಉಕ್ಕಿಬರುವ ನಗೆಯನ್ನು ಅಕ್ಕಿಸಿಕೊಂಡು ಬಹಳ ಬುದ್ಧಿ ಖರ್ಚು ಮಾಡಬೇಕಾಯಿತು.

ಪುಟ್ಟನದೊಂದು ಗುಣ. ಕತೆಯು ಮುಂದುವರಿಯದೆ ನಿಂತು ಬಿಡುತ್ತದೆಂಬ ಸಂಶಯ ಬಂದೊಡನೆಯೇ ತನ್ನ 'ಹೊಸತನ'ವನ್ನು ಬಿಟ್ಟು ಸರಿಹಾದಿಗೆ ಬರುತ್ತಾನೆ ಮೊದಮೊದಲು ಜತೆಯ ಪಾರ್ಟುದಾರರಿಗೆ ಏನೇನೂ ಹೊಳೆಯುತ್ತಿದ್ದಿಲ್ಲ. ಆಗ ಪುಟ್ಟನು.

ಹೆದರಬೇಡವೊ ಪಾರ್ಥ
ನಾನು ಪುಟ್ಟಾ
ಹೇ ಏಳುವೆ ಹೊಸಾ ಅರ್ಥ
ನಾನು ದಿಟ್ಟಾ—

ಎಂದು ದಿಮಿ ದಿಮಿ ಕುಣಿದು ಬಿಡುತ್ತಿದ್ದ !

ಒಂದು ಸಲ ದಶರಥನ ಪಾರ್ಟು ಮಾಡಿದ ಪುಟ್ಟನು ಕುಣಿಕುಣಿದು ದಣಿದ. ಭಾಗವತರು ದಶರಥನನ್ನು ಮತ್ತೆ ಕುಣಿಸಲು ರಭಸದಿಂದ ಪದಾ ಹೇಳಿದರು. ಪುಟ್ಟನು " ಅಯ್ಯಾ! ದೇವತೆಗಳಿರ ವೃದ್ಧ ನೃಪನು ಕುಣಿಕುಣಿದು ದಣಿಯುವದನ್ನು

ಕಂಡೂ ಕಂಡೂ ಕರುಣಿಸಬಾರದೇ ! !................" ಎಂದು ಶೋಕ ಮಾಡಿ ಬಿಟ್ಟ !

ಇತ್ತಿತ್ತಲಾಗಿ! ಪುಟ್ಟನಿಗೆ ಹಳೇ ಕತೆಗಳೆಂದರೆ ಸೇರುವುದೇ ಇಲ್ಲ. ಅವನೇ ಬಿಳಿ ಜನರ ಹಾವಳಿ, ' ದರ್ಕಾರಿಲ್ದ ಸರ್ಕಾರ ' ಎಂಬೆರಡು ಹೊಸ ಬಗೆಯ ಯಕ್ಷಗಾನಗಳನ್ನು ಬರೆದಿದ್ದಾನೆ. ನಾನು ಅವುಗಳನ್ನು ಅವಲೋಕಿ ಕೊಟ್ಟಿದ್ದೇನೆ. ಯೋಗ್ಯ ಕಂಡಲ್ಲಿ ಪ್ರಕಟಿಸಿಕೊಡುವ ಆಶ್ವಾಸನ ಮಾಡಿದ್ದೇನೆ.

# ಮಣ್ಣಿನ ಮಗು

●

ಊರಲ್ಲೆಲ್ಲ ಅಲೆದಾಡಿ ಮಧ್ಯರಾತ್ರಿಯಲ್ಲಿ ಮನೆ ಸೇರಿದ ಶಂಕ್ರಣ್ಣ. ಅನ್ನ ತಣಿದು ಹೋಗಿತ್ತು. ಕುರುಡು ದೀಪದ ಬಳಿಯಲ್ಲಿ ಸರಸಿಯು ನಿದ್ದೆ ಹೋಗಿದ್ದಳು. ತಂಗಿಯನ್ನೆಬ್ಬಿಸಿ ಉಂಡು ಮಲಗಿದ ಶಂಕ್ರಣ್ಣನಿಗೆ ನಿದ್ದೆಯೇ ಬರಲಿಲ್ಲ. "ಇನ್ನೇನು ಮಾಡಲಿ? ತಂಗಿಯ ಜೀವನ ಹಾಳಾಗಬೇಕೆ?" ವಿಚಾರಗಳ ಕೋಲಾಹಲದಲ್ಲಿ ಹಾಸಿಗೆಯ ಮೇಲೆ ಉರುಳಾಡುತ್ತಿದ್ದ.

ಸರಸಿಗೆ ಮಧ್ಯರಾತ್ರಿಯಲ್ಲಿಯೇ ಅಣ್ಣನು ಹೋದ ಕೆಲಸ ಆಯಿತೋ ಇಲ್ಲವೋ ಎಂದು ಕೇಳಲು ನಾಲಿಗೆ ಏಳಲಿಲ್ಲ. ಅವಳಿಗೆ ನಿದ್ದೆ ಮುಗಿದು ಹೋಗಿತ್ತು. ದೀಪ ಸಣ್ಣಮಾಡಿ ನೆವಕ್ಕೆ ಮಲಗಿದ್ದಳು.

"ಒರಕ ಬದ್ನಿಲ್ಯಾ ಸರ್ಸಿ?" ಬಾಗಿಲ ಹೊರಗಿನಿಂದ ಮೆಲ್ಲಗೆ ಕೇಳಿದ ಅಣ್ಣ. "ತಿರ್ಗಿ ತಿರ್ಗಿ ಸಾಕಾದ್ರೂ ಮನ್ಗಿದ್ದೀ ಇಲ್ಯೋ ನೋಡ್ತೆ" ಅಂದಳು ತಂಗಿ. ಮತ್ತೆ ಹಳೆಯ ಮಾತು. ಸರಸಿಯ ಅಳು. ಅಣ್ಣ ಎಷ್ಟೇ ಸಂತೈಸಿದರೂ ನಿಲ್ಲದು. "ಏನು ಮಾಡ್ಲಿ? ಬಾಯಲ್ಲಿ ವೇದಾಂತ ಹೇಳ್ವೋರು ಭಾಳ. ಮಾಡೂದಂದ್ರೆ ಯಾರಿಗೂ ಆಗ. ನಮ್ದುತೀ ಕಲ್ತೋರೆಲ್ಲಾ ನಪುಂಸಕ್ರೇ........ 'ಅಪ್ಪ ಕೇಳೊ -........ ಅಬ್ಬೆ ಕೂಸ್ನ ಮೊದ್ಲು ನೋಡೊ' ಎಂದ್ಹೇಳ್ವೋರೇ ಎಲ್ಲಾ. 'ವಿಧವಾ ವಿವಾಹಕ್ಕೆ ನನ್ನ ಮನಸ್ಸು ಸಿದ್ಧವಿದೆ. ತುರ್ತ ಸಾಧ್ಯವಿಲ್ಲ." ಅಂದ ಒಬ್ಬ. ಆ ಪುಣ್ಯಾತ್ಮಂಗೆ ಮನ್ಸಿದ್ರೂ ಧೈರ್ಯಿಲ್ಲೆ" "ಅಣ್ಣ ಸಾಕು ನೀ ಹುಡ್ಕೋದು ಯನ್ನ ಹಣೇಲಿ ದೇವ್ರೇ ಬರದ್ನಿಲ್ಲೆ...." ಮಾತು ಹೊರಡದಾಯಿತು. ಶಂಕ್ರಣ್ಣನಿಗೂ ಅಲ್ಲಿ ನಿಲ್ಲಲಾಗಲಿಲ್ಲ ಮೌನ. "ಯನ್ಬಗ್ಗಾಗಿ ಇನ್ನು ತಿರ್ಗೋದ್ ಸಾಕು. ನೀ ಮೊದ್ಲು ಒಂದು ಕೂಸ್ನ ಹುಕ್ಲಿ ಮಂತಾನಾ ಹೂಡು." ಆದರೆ ತಂಗಿಯ ಹಣೇಬರದಲ್ಲಿ ಮತ್ತೆ ಕುಂಕುಮ ಕಂಡನಕ ತಾನು ಮದುವೆಯಾಗಬಾರದೆಂಬ

ಶಂಕ್ರಣ್ಣನ ನಿಶ್ಚಯ ಬಲವಾಗಿತ್ತು. ಅದನ್ನು ಆಡಿ ತೋರಿಸಲು ಸಿದ್ಧನಾಗಿದ್ದಿಲ್ಲ

*          *          *          *          *

" ಯಾರು ಅದು ? "

" ನಾನು ಸರ್ಸಿ ಭಟ್ರ್ರ ಗೌಜಿ ಮಾಡಡಿ ದಮ್ಮಯ್ಯ "

" ಸರ್ಸಕ್ಕ ! ಈ ಅಪ್ರಾತ್ರೇಲಿ....ನನ್ಕಾಲ್ ಬಿಡು....ಆಣೆ. "

" ಹಾಗ್ ಹೇಳಡಿ ದಮ್ಮಯ್ಯ...."

" ಬೇಡ....ಕಾಲ್ಬಿಡಿ....ಹೀಗ್ಯೆಂತಕ್ಮಾಡ್ತಿ ? "

" ಅದ್ರ್ಯಾ ಹೇಳವ ? "....." ಹೆಣ್ಜನ್ಮ ವ್ಯರ್ಥ "

" ನಿಮ್ಮ ಮನೇ ವಾರಾನ್ನ ಉಂಡು....ಸರ್ಸಕ್ಕ. "

" ಮೆಲ್ಗೆ....ದಮ್ಮಯ್ಯ. ಹಾಗ್ಹೇಳಡಿ ...ನಿಮ್ಕಿಂತಾ ಯಾರಿದ್ರ್ "
ಹೊರಗೆ ಸೋ ಎಂದು ಮಲೆನಾಡಿನ ಮಳೆ ಸುರಿಯುತ್ತಿತ್ತು. ಆಚೆಕೇರಿಯ ಪ್ರಸಂಗದ ಮೃದಂಗ ಕೇಳಿಸುತ್ತಿತ್ತು. ಹರೆಯದ ದೇಹಗಳ ಮೇಲೆ ತಿಳಿವಿನ ಅಂಕುಶ ನಾಟಲಿಲ್ಲ.

*          *          *          *          *

" ದಮ್ಮಯ್ಯ ಅತ್ಗೆ....ಬಯ್ಯಡ. ಹುಕ್ಕಾಗ್ಗಿದ್ರೆ ಸದ್ಗತ್ಯೇ ಇಲ್ಲೆ ಹೇಳಿ....ದೇವ್ರಲ್ಲಿ ತಪ್ಪು ಒಪ್ಕಂಡೇ ಮಾಡ್ಕಂಡ್ದೆ

ದಣಿದು ಬಂದ ಶಂಕ್ರಣ್ಣ.

" ಥೂ ನಿನ್ನ ಜನ್ಮ ತಂಗ್ಯಡ, ತಂಗಿ. "

§          §          §          §          §          §

" ಯಾರ್ಬೇಕು ನಿಮ್ಗೆ ? "

" ಹರಿ ಭಟ್ಟರು "

" ಯಾವ ಹರಿಭಟ್ರು ? "

" ಘಟ್ಟದ ಕೆಳ್ಗೆ ಸಂಸ್ಕೃತ ಕಲೂಲ್ ಹೋದವ್ರು. "

“ ಓಹೋ ಕೆಳಗಿನ್ಮನೇ ಹರ್ಬಟ್ರೋ....ಅವ್ರೇನು ನಿಮ್ಮ ನೆಂಟ್ರೋ ನೋಡ್ತೆ ”

“ ಹುಂ ”

† † † † † †

ಸಹ್ಯಾದ್ರಿಯಿಂದ ಒಂದು ಪ್ರವಾಹ ಹರಿದು ಬರುತ್ತಿತ್ತು. ಅಡವಿಯ ತೊರೆ. ಹಗಲು ಸಹ ಹುಲಿಯ ಭೀತಿ. ಜೇನು ಅಳೆಯಲು ಹೋದ ಕೆಲವು ಗೌಡರು ಕಂಡು ಬಂದರಂತೆ. ಒಂದು ಪ್ರಾಯದ ಹೆಣ್ಣು—ಹುಚ್ಚಿ—ತೊರೆಯ ಬದಿಗೆ ಮಣ್ಣಿನ ಮಗುವನ್ನು ಮಾಡಿ ಮಾಡಿ ನೀರಿನಲ್ಲಿ ಕರಡಿಬಿಡುತ್ತಿದ್ದುದನ್ನು.

# ಇಬ್ಬರು ಭಕ್ತರು

ಒಂದು ಹೆಂಡತಿಗೆ ಇಬ್ಬರು ಗಂಡರಾದರೆ ಅವರು ನಮ್ಮೂರಿನ ಗಣಪತಿ, ಗಣೇಶ ಭಟ್ಟರಷ್ಟು ಜುಟ್ಟಾ ಜುಟ್ಟಿ ಮಾಡಿಕೊಳ್ಳಲಿಕ್ಕಿಲ್ಲ! ಗಣಪತಿ ಗಣೇಶ ಭಟ್ಟರಿಬ್ಬರೂ ಶ್ರೀ ವಿನಾಯಕನ ಭಕ್ತರು. ಇವರಲ್ಲಿಯ ಭೇದವಿಷ್ಟೆ—ಗಣಪತಿ ಭಟ್ಟರ ವಿನಾಯಕನ ಮೂರ್ತಿ ದೊಡ್ಡದು; ಗಣೇಶ ಭಟ್ಟರದು ಸಣ್ಣ. ಇಬ್ಬರೂ ತಂತಮ್ಮ ಮೂರ್ತಿಗಳಿಗೆ ದೇವಸ್ಥಾನ ಕಟ್ಟಿಸಿದ್ದಾರೆ. ಇಬ್ಬರೂ ಚೌತಿಯ ಹಬ್ಬದಲ್ಲಿ ಬೆನಕನನ್ನು ಮಾಡಿ ಮಾಡಿ ಪುಣ್ಯವನ್ನು ಸ್ಟೋಕ್ (Stock) ಮಾಡುತ್ತಾರೆ. ಆದರೆ ಗಣಪತಿ ಭಟ್ಟರು ಎಂದೂ ಸಣ್ಣ ಬೆನಕನ ಮೂರ್ತಿ ಮಾಡರು. ಗಣೇಶಭಟ್ಟರಿಗೆ ದೊಡ್ಡ ಮೂರ್ತಿಯೆಂದರೆ ಇಲ್ಲದ ಕೋಪ. ಹೀಗಾಗಿ ಬೆನಕನ ಮಣ್ಣು ಕಡಿಮೆ ತಾಗುವದೆಂದು ಗಣೇಶ ಭಟ್ಟರಲ್ಲಿಯೇ ಬೆನಕನನ್ನು ಮಾಡಿಸುವವರು ಹೆಚ್ಚು. ದೊಡ್ಡ ಬೆನಕನನ್ನು ಮಾಡಿಸಿದರೆ ಹೆಚ್ಚು ಪುಣ್ಯ ಬರುವದೆಂದು ನಂಬಿದ ಹಲವರು ಗಣಪತಿ ಭಟ್ಟರ ಪಕ್ಷಕ್ಕಿದ್ದಾರೆ.

ಗಣೇಶ ಭಟ್ಟರು ಬೆನಕನ ಅಚ್ಚು ಮಾಡಿಟ್ಟುಕೊಂಡಿದ್ದಾರೆ. ಹೀಗಾಗಿ ಬೇಗನೇ ಒಂದೇ ನಮೂನೆಯ (ಆದರೆ ಬೇರೆ ಬೇರೆ ಬಣ್ಣದ) ಬೆನಕನ ಹಿಂಡನ್ನೇ ಅವರು ಮಾಡಿಕೊಡುತ್ತಾರೆ. ಚಿಕ್ಕದಾದರೂ ಚೊಕ್ಕದಾಗಿರಬೇಕೆಂದು ಇವರ ಮತ.

ಗಣಪತಿ ಭಟ್ಟರು "ಸಣ್ಣ ಮನಸ್ಸಿನವರು ಸಣ್ಣ ಕೆಲಸ ಮಾಡುತ್ತಾರೆ" ಎಂಬ ತತ್ವವನ್ನನುಸರಿಸಿ ಆಳೆತ್ತರದ ಬೆನಕನನ್ನು ಕೇಳಿಕೊಂಡವರ ಮನೆಗೇ ಹೋಗಿ ಮೆತ್ತಿಕೊಟ್ಟು ಬರುತ್ತಾರೆ. ಬೆನಕನ ಹೊಟ್ಟೆ ಕೈ ಕಾಲುಗಳಿಗೆ ಕಾಯಿ ಸಿಪ್ಪೆ ಒಣಹುಲ್ಲುಗಳನ್ನು ಉಪಯೋಗಿಸಿ ಆವಲು ಮೂರ್ತಿಯನ್ನು ಎತ್ತಿಕೊಂಡು ಹೋಗಿ ಕೆರೆಯಲ್ಲಿ ಮುಳುಗಿಸಲು ಬರುವಷ್ಟು ಹಗುರ ಮಾಡಿ

ತ್ತಾನೆ. “ ಮೋಟಾರು ರೈಲುಗಳಲ್ಲಿ ಕುಳಿತು ಕಾಶೀಯಾತ್ರೆ ಮಾಡಿ ಬಂದರೆ ಪುಣ್ಯ ಎಲ್ಲಿದೆ ? ನಡೆದುಕೊಂಡು ಹೋಗಿ ಬಂದರೆ ಮಾತ್ರ ನಿಜ ವಾದ ಪುಣ್ಯ ದೊರೆಯುತ್ತದೆ. ಅದರಂತೆ ಅಚ್ಚಿನಿಂದ ಮೂರ್ತಿಗಳನ್ನು ಮಾಡಿದರ ಪುಣ್ಯ ಬರುವದಿಲ್ಲ. ಅಷ್ಟೇ ಅಲ್ಲ, ಒಂದೇ ನಮೂನೆಯ ಬೆನಕ ನನ್ನು ಅಗ್ಗವಾಗಿ ಮಾಡಿದ ಪಾಪ ಬರುತ್ತದೆ ಬೇರೆ. ” ಎಂದು ಅಭಿಪ್ರಾಯ ಪಡುತ್ತಾರೆ. ಇಷ್ಟಕ್ಕೇ ಅವರ ‘ ದೊಡ್ಡ ಬೆನಕನ ಪ್ರಚಾರ ’ ನಿಂತಿಲ್ಲ. “ ವಿನಾಯಕನು ಮಹಾಕುಕ್ಷಿಯು; ಹಸ್ತಿಮುಖನು. ತತ್‌ತತ್ ಪ್ರಮಾಣ ದಂತೆ ಮೂರ್ತಿ ಮಾಡಿದರೇನೇ ಪ್ರಯೋಜನ. ಇಲ್ಲದಿದ್ದರೆ ಅಣಕ. ” ಎಂದು ಸಾರುತ್ತಾರೆ. ಇದಕ್ಕೆಲ್ಲ ಗಣೇಶಭಟ್ಟರ ಉತ್ತರವಿಲ್ಲವೆಂದು ತಿಳಿಯ ಬಾರದು. “ ಈ ಸೃಷ್ಟಿಕರ್ತನು ಸಣ್ಣವನೆಂದರೆ ಸಣ್ಣವ, ದೊಡ್ಡವನೆಂದರೆ ದೊಡ್ಡವ. ಆದರೆ ಮಹಾ ವೃಕ್ಷಕ್ಕೆ ಬಿಜವೇ ಮೂಲವಿರುವಂತೆ ಅವನು ಸೂಕ್ಷ್ಮರೂಪಿಯೆಂದೂ ಮಹಾ ಶಕ್ತಿಯುಳ್ಳವನೆಂದೂ ಬಗೆದು ನಮ್ಮ ಹೃದಯ ಪೀಠದಲ್ಲಿ ಬಿಂಬಿಸಿ ನಿಲ್ಲುವಂತೆ ಚಿಕ್ಕದಾಗಿ ಅವನನ್ನು ನಿರ್ಮಿಸಿ ಕೊಳ್ಳುವದೇ ಲೇಸು. ಅದನ್ನು ಬಿಟ್ಟು ಕಾಯಿಸೊಪ್ಪೆ ಒಣಹುಲ್ಲುಗಳಿಂದ ಬೆಟ್ಟದಂಥ ಬೆನಕನನ್ನು ಮೆತ್ತಿದರೆ ಬಂತೇನು ? ” ಎಂದು ಮೊದಲಾಗಿ ಅವರು ಸವಾಲು ಹಾಕುತ್ತಾರೆ. ನಮ್ಮ ಪುಣ್ಯ ! ಇವರಿಬ್ಬರೂ ಊರಿನ ಎರಡು ತುದಿಗಳಲ್ಲಿದ್ದಾರೆ.

ಇವರ ದೇವಾಲಯಗಳ ಮೂರ್ತಿಯೂ ಹೀಗೇ. ಗಣೇಶಭಟ್ಟರ ಚಿಕ್ಕ ವಿನಾಯಕನ ಮೂರ್ತಿ ಮೂಡಿ ಬಂದುದಂತೆ. ಒಮ್ಮೆ ಅವರ ‘ ಗೋಪಿ ’ ಎಂಬ ಆಕಳು ಮೇಯುತ್ತಿದ್ದಾಗ ಒಂದು ಕಲ್ಲ ಬಳಿಗೆ ಬಂದು ಸುಮ್ಮನೆ ನಿಂತು ಬಿಟ್ಟಿತಂತೆ. ದನಗಾಹಿಯು ನೋಡುತ್ತಿದ್ದಂತೆ ಗೋಪಿ ತನ್ನಷ್ಟಕ್ಕೆ ಹಾಲಿನ ನಾರೆ ಸುರಿಸಿದಳಂತೆ ಆ ಕಲ್ಲಿನ ಮೇಲೆ. ಅದೇ ರಾತ್ರಿ (ಬಹುಶಃ ದನಗಾಹಿ ಯು ತಂದ ಸುದ್ದಿ ಕೇಳಿದ ನಂತರ) ಗಣೇಶಭಟ್ಟರಿಗೊಂದು ಕನಸು ಬಿತ್ತಂತೆ. ಅದರಲ್ಲಿ ಶ್ರೀ ವಿನಾಯಕದೇವರು ಪ್ರತ್ಯಕ್ಷನಾಗಿ ಅವರನ್ನು ಭಕ್ತಿ ಶಿಖಾಮಣಿ ಯನ್ನಾಗಿ ಮಾಡಿದನಂತೆ. ಮರುದಿನ ಹೋಗಿ ನೋಡಲಾಗಿ ಆ ಕಲ್ಲಿನ ಒಂದು ಬದಿಗೆ ಬೆನಕನ ಆಕೃತಿ ಮೂಡಿತ್ತಂತೆ.

ಗಣಪತಿ ಭಟ್ಟರದೂ ತುಸು ಹೆಚ್ಚುಕಡಿಮೆ ಇದೇ ಬಗೆಯ ಕತೆ. ಆದರೆ ಅವರ ಬೆನಕ ಮೂಡಿದುದು ಒಂದು ದೊಡ್ಡ ಮೂರ್ತಿಯಾಗಿ. ಅವರ ದೇವಸ್ಥಾನವನ್ನು ಹೊಕ್ಕು ನೋಡಿದರೆ ಈಗಲೂ ಕಾಣಬಹುದು. ಭವ್ಯ ಬಂಡೆ. ಸೊಂಡಿಲು ಒಂದು ಕಡೆಗೆ, ಹೊಟ್ಟೆ ಮಾತ್ರ ಸ್ವಲ್ಪ ಕಾಣುತ್ತದೆ ಇನ್ನೊಂದು ದಿಕ್ಕಿಗೆ. ಕೈಕಾಲುಗಳನ್ನು ಊಹೆಯಿಂದ ಪೂರ್ತಿಮಾಡಿಕೊಳ್ಳ ಬೇಕು. ಗಣೇಶಭಟ್ಟರದು ತೀರ ಸೂಕ್ಷ್ಮಮೂರ್ತಿಯಾದುದರಿಂದ ಪುಣ್ಯ ವಂತರಿಗೆ ಮಾತ್ರ ಬೆನಕನ ಪೂರ್ಣರೂಪ ಕಣ್ಣಿಟ್ಟು ಕಂಡಾಗ ಹೊಳೆದು ಹೋಗುತ್ತದಂತೆ.

ಕಳೆದ ನಾಲ್ಕು ವರುಷಗಳ ವರೆಗೆ ಈ ಇಬ್ಬರು ವಿನಾಯಕಭಕ್ತರು ಮೂರ್ತಿಗಳು (ಗಣಪತಿಯದು—ಎಂದು ಬೇರೆ ಹೇಳಬೇಕೇ?) ಸಣ್ಣವಿರ ಬೇಕೋ ದೊಡ್ಡವಿರಬೇಕೋ ಎಂಬ ಬಗ್ಗೆ ಚರ್ಚಾಕೂಟಗಳನ್ನೇರ್ಪಡಿಸಿ ಹೋರಾಡಿದರು. ಒಮ್ಮೆಯಂತೂ ಗುರುಗಳ ಅಧ್ಯಕ್ಷತೆಯಲ್ಲಿ ಹಾಣಾ ಹಾಣಿ ತಿಕ್ಕಾಟವಾಯಿತು. ಇಬ್ಬರು ಭಕ್ತರ ಆವೇಶಯುಕ್ತ ಭಾಷಣಗಳ ನಡುವೆ ಗುರುಗಳು ಗಣಪತಿಯಂತೆ ಕುಳಿತು ಬಿಟ್ಟರು! ಒಂದು ನಿಶ್ಚಯಕ್ಕೆ ಅವರನ್ನು ತರಲು ಇವರಿಗಾಗಲಿಲ್ಲ. ಮೂರ್ತಿಯ ಆಕಾರ — ಗಾತ್ರ - ಮಹತ್ವದ್ದಲ್ಲ ಎಂದು ತೀರ್ಪು ಕೊಟ್ಟರು "ಇದನ್ನು ಯಾರು ಬೇಕಾದರೂ ಹೇಳಬಹುದು! ಹೀಗೆ ಹೇಳುವದೆಂದರೆ ಅಜ್ಞಾನವನ್ನು ಹೇಗಾದರೂ ಅಡಗಿಸಿದಂತೆ. ಸತ್ಯಕ್ಕೆ ಒಂದು ಮುಖ ಇದ್ದೇ ಇದೆ. ಇಲ್ಲ ಎಂದರೆ ಹೇಗೆ?" ಎಂದು ಭಕ್ತರು ಗುರುಗಳ ಅಭಿಪ್ರಾಯವನ್ನು ಗಾಳಿಗೊಡ್ಡಿಬಿಟ್ಟರು.

ಇವರ ಕದನದ ಕಿಡಿ ಗಣಪತಿಯ ಸೊಂಡಿಲಿಗೆ ತಾಗಿರಬೇಕು. ಅಲ್ಲ ದಿದ್ದರೆ ಈ ಸಂಗ್ರಾಮ ನಿಲ್ಲುತಿತ್ತೆಲ್ಲಿ? ಇತ್ತಲಾಗಿ ಚೌತಿ ಹಬ್ಬದಲ್ಲಿಯೂ ಈ ಕೋಳಿ ಅಂಕವಿಲ್ಲದ್ದರಿಂದ ಊರಿನ ಒಂದು ನಾಡೀಸ್ಪಂದವೇ ನಿಂತ ಹಾಗಾ ಗಿದೆ. ನಿಂತುದಕ್ಕೆ ಒಂದು —ಅಲ್ಲ ಎರಡು— ಕಾರಣ ಇದೆ.

ಒಂದೇ ಚೌತಿಯಲ್ಲಿ ಈ ಎರಡೂ ಘಟನೆ ಸಂಭವಿಸಬೇಕೇ? ಇಬ್ಬರ ಬೆನಕನ ಮೂರ್ತಿಗಳಿಗೂ ಈ ಗತಿಯಾಗಬೇಕೇ? ಬಹುಶಃ ಶ್ರೀ ವಿನಾಯಕ

ಯಿಗೆ ಇವರ ಕಲಹ ಸರಿಸೋರಲಿಕ್ಕಿಲ್ಲ. ಅಂತೆಯೇ ಹೀಗೆ ಮಾಡಿಸಿ ಇವರಲ್ಲಿ ತಿಳಿವು ಮೂಡಿಸಿರಬೇಕು.

ಹೀಗಾಗಿ ಬಿಟ್ಟಿತು ನೋಡಿ. ಗಣೇಶ ಭಟ್ಟರ ಅಚ್ಚಿನ ಗಣಪತಿ ಯೊಂದನ್ನೊಯ್ದವರ ಮನೆಯಲ್ಲಿ ಇಲಿ ಬಹಳ. ಪೂಜೆ ಮುಗಿಸಿ ಊಟ ಮಾಡಿ ಬರುವುದರೊಳಗೆ ಪುಟ್ಟ ಗಣಪತಿ ಹೆಬ್ಬಾಗಿಲಿನಲ್ಲಿ ಹೊರಳಾಡುತ್ತಿದ್ದ! ಎಲ್ಲಿ ನೈವೇದ್ಯಕ್ಕೆ ತಂದ ಪಂಚಕಜ್ಜಾಯ ತಾಗಿತ್ತೋ ಏನೋ. ಸೊಂಡಿಲನ್ನು ಊನ ಮಾಡಿತ್ತು ಇಲಿ. ಕೇರಿಯಲ್ಲೆಲ್ಲ ಹಾಹಾಕಾರ ಎದ್ದಿತು. ಬೆನಕ ಸಣ್ಣದಿದ್ದರೆ ಇಲಿ ಮನಬಂದಂತೆ ಅವನನ್ನು ಒಯ್ದಾಡುತ್ತದೆ. ಗಣಪತಿ ಭಟ್ಟರ ಬೆನಕನನ್ನು ಹಂದಾಡಿಸಲು ಹುಲಿ ಸಿಂಹಗಳಿಗೂ ಸಾಧ್ಯವಿಲ್ಲ. ನಿಜ ವಾಗಿ ನೋಡಿದರೆ ಅದೇ ಲೇಸು.

ಗಣಪತಿ ಭಟ್ಟರ ಪಕ್ಷಕ್ಕೆ ಊರೆಲ್ಲ ಬರುವದಿತ್ತು. ಆದರೆ—

ಅವರು ಒಬ್ಬರ ಮನೆಯ ಕೋಣೆಯೊಳಗೆ ಅಂಕಣ ತುಂಬ ಪೀಠದ ಮೇಲೆ ತಮ್ಮ ಕೌಶಲ್ಯವನ್ನೆಲ್ಲ ತೋರಿಸಿ—ಮೀರಿಸಿ—ಆಳೆತ್ತರದ ಬೆನಕನನ್ನು ಮಾಡಿದ್ದರು. ಅಲ್ಲಿಯೇ ಬೆನಕನ ಪೂಜೆಯಾಗುವದಿತ್ತು. ಆದ್ದರಿಂದ ಮೂರ್ತಿಯನ್ನು ಕದಲಿಸಲೇ ಇಲ್ಲ. ಮುಳುಗಿಸುವಾಗ ಹೊಳೆಯಿತು. ಓಹೋ ಬಾಗಿಲೇ ಸಣ್ಣವಾಗಿದೆ! ಬೆನಕನನ್ನು ಹೊರಗೆ ತರಲೇ ಸಾಧ್ಯವಿಲ್ಲ. ಬಾಗಿಲು, ಗೋಡೆ ಕಿತ್ತನಕ ಗತಿಯಿಲ್ಲ. ಅದನ್ನು ಮಾಡಲು ಮನೆಯವರು ಬಿಟ್ಟಾರೇ ಸ್ವತಃ ವಿನಾಯಕ ದೇವರೇ ಕೂಗಿ ಕೊಂಡರೂ? ಕೆಲವರು ಸೂಚಿಸಿ ದರು—ಮಂತ್ರದಿಂದ ವಿಸರ್ಜನೆ ಮಾಡಿದ ಮೂರ್ತಿಯನ್ನು ಬೇಕಾದಹಾಗೆ ಮಾಡಬಹುದು. ಆದ್ದರಿಂದ ಬೆನಕನ ತೋಳನ್ನು ತೆಗೆದೇ ಹೊರಗೆ ಒಯ್ಯ ಬಹುದು. ಈ ಸುದ್ದಿ ಗಣಪತಿ ಭಟ್ಟರಿಗೆ ಹತ್ತಿತು. ಅವರ ಜೀವ ನೊಂದಿತು. ಬೆನಕನ ತೋಳು ಮುರಿಯುವದುಂಟೇ? ಅಂತೂ ಕೊನೆಗೆ ಅದೇ ಗತಿ ಯಾಯಿತು ಬೆನಕನಿಗೆ! ಕೆರೆಯಲ್ಲಿ ಹರಹರ ಮಹದೇವ ಎಂದು ಮುಳುಗಿಸಿ ದರೆ ಬೆನಕ ಮುಳುಗಬೇಕಲ್ಲ. ಸೊಂಡಿಲ ಬುಡ ನೀರಿನಿಂದ ಮೇಲೇ ಉಳಿ ಯಿತು. ಕೊನೆಗೆ ಬೆನಕನನ್ನು ಜೊಟ್ಟಿಗುಂಡಿಗೆ ದೂಡಿ ಮಲಗಿಸಲಾಯಿತು.

ಈ ಸಂಗತಿ ಕೇಳಿ ಗಣೇಶಭಟ್ಟರು ಬದುಕಿದರು. ತನ್ನ ಬೆನಕನ ಮೂರ್ತಿಯಿಂದ ಬಂದ ಕುಂದನ್ನು ಈ ಸುದ್ದಿಯ ಆನಂದದಿಂದ ತೊಳೆದರು.

ಈಗ ಈ ಭಕ್ತರಿಬ್ಬರೂ ಶಾಂತರಾಗಿದ್ದಾರೆ. ಬಹುಶಃ ಅವರವರ ವಿನಾಯಕರು ಕನಸಿನಲ್ಲಿ ಬಂದು ಏನೇನೋ ಮಾಡಿ ಸಂತೈಸಿ ಹೋಗಿರಬೇಕು. ಇಬ್ಬರಿಗೂ ತಂತಮ್ಮ ದೇವಾಲಯಗಳ ಮೂರ್ತಿಯಲ್ಲಿಯೂ ಇತ್ತಿತ್ತಲಾಗಿ ಮುಂಚಿನ ವಿಶ್ವಾಸವಿಲ್ಲ. ಒಂದು ಬಗೆಯ ವೈರಾಗ್ಯ ಮೂಡಿದೆ. ಆದರೆ ಎಂದಿನಿಂದಲೂ ಪೂಜಿಸುತ್ತ ಬಂದ ಮೂರ್ತಿಗಳಿಂದು—ತಾವು ಬಿಟ್ಟರೆ ಬೇರೆ ಯಾರೂ ಪೂಜಿಸಲಿಕ್ಕಿಲ್ಲೆಂದು ಕರುಣೆಗೊಂಡು— ಅದೇ ಶಂಖಗಂಟೆ ಬಾರಿಸುತ್ತಿದ್ದಾರೆ.

# ಸಕಲವಿದ್ಯೆ ಸಣ್ಣಪ್ಪ

●

ನಾನು ರಜೆಯಲ್ಲಿ ಊರಿಗೆ ಹೋದಾಗ ಸಣ್ಣಪ್ಪನ ಮನೆಗೆ ಹೋಗದೇ ಇರುವದುಂಟೆ? ನಾನು ಎಂ ಎ. ಆಗಿದ್ದೇನೆಂಬ ಹೆಮ್ಮೆಯಾಗಲಿ ಅವನು ಎಮ್ಮೆಯನ್ನು ಕಾಯುತ್ತಾನೆಂಬ ಕೀಳು ಭಾವನೆಯಾಗಲಿ ನಾವಿಬ್ಬರೂ ಕೂಡಿದಾಗ ಮೂಡುವದೇ ಇಲ್ಲ. ನಾನು ಒಂದು ಬೀಡಿ ಎಳೆದು ಅವನ ಕವಳದ ಚೀಲಕ್ಕೆ ಕೈ ಹಾಕಿದರೆ ತೀರಿತು ಮತ್ತೆ ಲಂಗೋಟಿ ಗೆಳೆಯರಾಗಿ ಬಿಡುತ್ತೇವೆ! ನಾನು ಕಲಿತವನೆಂದು ನನ್ನ ತಂದೆ ತಾಯಿಗಳಿಗೂ ನನ್ನೊಡನೆ ಮಾತಾಡುವಾಗ ಒಂದು ಬಗೆಯ ಇದು. ಕಾಲೇಜಿನ ಸ್ವಚ್ಛಂದಕ್ಕಾಗಿ ಸಣ್ಣಪ್ಪನ ಮನೆಗೇ ಹೋಗಬೇಕು. ನಾವು ಆಡದ ಮಾತಿಲ್ಲ ನಾನು ಬ್ರಹ್ಮಚಾರಿ. ಅವಗ್ರಾಸ್ತ, ಅವನ ಅನುಭವಾಮೃತ ನನಗೆ. ನನ್ನ ಉತ್ಸಾಹದ ಇಂಜೆಕ್ಶನ್ ಅವನಿಗೆ. ಅಂತೂ ಅದೊಂದು ನಮ್ಮಿಬ್ಬರ ಪರಸ್ಪರ ಸಹಕಾರೀ ಮಿತ್ರ ಸಂಘ.

ನಾನು ಸಣ್ಣಪ್ಪನ ಮನೆಗೆ ಹೋದಾಗ ನನಗೆ ಸರಬರಾಯಿ ಮಾಡಿದಷ್ಟು ಸಾಲ ಅವನಿಗೆ. ಮೊದಲು ಚಹ ಅವಲಕ್ಕಿ, ನಂತರ ತಂಪಾಗಿ ಪಾನಕ. ಬಾಳೆಯ ಹಣ್ಣು, ಜೇನುತುಪ್ಪ. ಅವನ ಮಕ್ಕಳಿಗೆ ತೋರಿಸದೆ ಕಾದಿಟ್ಟ ಎಷ್ಟೋ ಕಜ್ಜಾಯಗಳೂ ಬರುತ್ತವೆ. ನಾನು ಬಾಳೆಯ ಹಣ್ಣನ್ನು ತುಪ್ಪ, ಜೇನುತುಪ್ಪಗಳಲ್ಲಿ ಅದ್ದಿಸಿ ತಿಂದರೂ ಸಣ್ಣಪ್ಪನಿಗೆ ತೃಪ್ತಿಯಿಲ್ಲ. ಅದರ ಜತೆಗೆ ಅವನ ಖಾಸ ಕಬ್ಬಿನ ಹಕ್ಕಲಲ್ಲಿ ತಯಾರಾದ ಹೊಯಿಗೆಯಂಥ ಬೆಳ್ಳಗಿನ ಬೆಲ್ಲವನ್ನೂ ಒಂದು ತಟ್ಟೆ ಕುಡಿದರೆ ಮಾತ್ರ ಆತನ ಆತ್ಮಕ್ಕೆ ಒಂದು ಬಗೆಯ ಶಾಂತಿ. ಕಲಿತ ನಾವೆಲ್ಲ ತಿನ್ನುಣ್ಣುವ ಆಳಲ್ಲವೆಂದು ಅವ ಎಂದೋ ಹೇಳಿಬಿಟ್ಟಿದ್ದಾನೆ.

ಮೊನ್ನೆ ಹೋದಾಗ ಮಾತ್ರ ನನಗೇಕೋ ಮನಸ್ಸು ನೊಂದಿತು. ಅವನ ಹೆಂಡತಿ ಸಕ್ಕರೆ ಇಲ್ಲವೆಂದು ಬೆಲ್ಲಹಾಕಿ ಚಹ ಮಾಡಿದ್ದಳು. ಜೇನು ತುಪ್ಪವನ್ನಾದರೂ ಹಾಕಿ ಮಾಡಬಾರದಿತ್ತೇ ಎಂದು ಸಣ್ಣಪ್ಪ ಕೋಪಿಸಿಕೊಂಡು ಚಹವನ್ನು ಹೆಂಡತಿಯ ಮೈಗೆ ತೋಕಿ ಬಿಟ್ಟ. ರೇಶನ್ ಕಾಲ ಸಕ್ಕರೆ ಸಿಗುವ ದಿಲ್ಲ ಎಂಬುದು ಗೊತ್ತಿದ್ದರೂ ನನಗೆ ಸತ್ಕಾರ ಮಾಡಬೇಕೆಂಬ ಉತ್ಸಾಹ ಅವನನ್ನು ರೇಗಿಸಿಬಿಟ್ಟಿತು. ನಾನು "ಹಾಗೆ ಮಾಡಬಾರದಿತ್ತು ಸಣ್ಣಪ್ಪ." ಅಂದೆ. "ಥೇ, ಈ Uncultured, uneducated ಹೆಂಗಸರಿಗೆ ಬುದ್ಧಿ ಯೆಲ್ಲಾ ಮೊಳಕಾಲ ಕೆಳಗೇ ಅಂದು ಬಿಟ್ಟ. ನಾನು ಮನೆಗೆ ಬಂದ ಮೇಲೆ ಅವ ಹೆಂಡತಿಯನ್ನು ತಮ್ಮಣೆ ಮಾಡಿದನಂತೆ.

ತೊಟ್ಟಿಲಲ್ಲಿ ಚೀರುವ ಒಂದು ಕೂಸು ಜ್ವರಗಡ್ಡೆ ಬೆಳೆದು ಬೊಡ್ಡೆಯಂತೆ ಕುಳಿತ ಇನ್ನೊಬ್ಬ ಮಗ. ಬಡಕಾಟೆ ಬಸರಿ ಹೆಂಡತಿ. ಮನೆಯಲ್ಲೆಲ್ಲ ಬಂವ್ ಎಂದು ಹಾರುವ ನೊಣ. ಒಂದು ಮುರಕು ಸ್ಲ್ಯಾಕಲ್ಲು, ಒಂದು ಹಿಂದೀ ಸ್ವಯಂಬೋಧಿನಿ. ಒಂದು ಚರಕ, ಹಳೇ ಮೊಳೆಗಳ ಪೆಟ್ಟಿಗೆಯೊಂದು. ಒಂದೇ ಎರಡೇ ಅವನ ಹೊಳ್ಳೆಯ ಮೇಲೆ ? ಇವುಗಳ ಮೇಲೆ ನಿಂತು ಸಣ್ಣಪ್ಪ "Hopeless ಮಂದಿ Education ಇಲ್ಲ Common Sense ಏ ನಾಸ್ತಿ" ಎಂದು ಕನಲ ಜಗಿಯುವ ಠೀವಿಗಳನ್ನೆಲ್ಲ ಕಂಡು ನಾನು ಹಲವು ಸಲ ತತ್ವಜ್ಞಾನಿಯಾಗಿ ಬಿಟ್ಟಿದ್ದೆ ! ಮನೆಯಲ್ಲಿ ಏನೇ ಇರಲಿ ಬಿಡಲಿ, ಒಬ್ಬರು ಬೇಕಾದರೆ ಸಾಯಲಿ, ಬಾಳು ಅಸಹ್ಯವಾಗಲಿ ಸಣ್ಣಪ್ಪನಿಗೆ ಇವೆಲ್ಲ ಕೇವಲ ಒಂದು "Hopeless" ಇನ ಕೆಳಗೆ ಬಿದ್ದು ಕೊಳೆಯುವ ಕ್ಷಣಿಕ ವಿಷಯ ಗಳು. ಅವನಿಗೆ ಚಿರಂತನವಾದುದು ಒಂದೇ—Hopeless !

ನನ್ನ ಜತೆಗೆ ಕನ್ನಡ ಏಳಿತ್ತಿವರೆಗೆ ಕಲಿತ ಸಣ್ಣಪ್ಪ. ನಂತರ ಮನೆ ತನದ ಗೌರವಕ್ಕೆ ತಕ್ಕಂತೆ ನಾಲ್ಕು ಮಂತ್ರ ಕಲಿತ. ಆದರೆ ಸಂಸ್ಕೃತ ವಿದ್ಯೆ ಯಿಂದ ಲಾಭವಿಲ್ಲವೆನ್ನುವ ಗುಟ್ಟು ಅವನ ತೀರ್ಥಸ್ವರೂಪಿಗಳಿಗೆ ಹೊಳೆದು ಹೋಗಿ ಅವರು ತನ್ನ ಚಿರಂಜೀವಿಗೆ ಇಂಗ್ಲೀಷನ್ನೂ ತುಸು ಕಲಿಸಲು ಪ್ರಯತ್ನಿ ಸಿದರು. ಆದರೆ ಅಜ್ಜಿ—ಒಬ್ಬನೇ ಒಬ್ಬನಾದ ಮೊಮ್ಮಗನನ್ನು ಬಿಟ್ಟು ಬದುಕಬಾರೆನೆಂದು ಹೇಳಿದುದರಿಂದಲೂ, ಮೊಮ್ಮಗನಿಗೆ ಮದುವೆಯಾದು

ದನ್ನು ಕಣ್ತುಂಬ ನೋಡಿ ಹರಸಿದತನಕ ಸಾಯುವದಿಲ್ಲವೆಂದು ಪ್ರತಿಜ್ಞೆ ಮಾಡಿ ಸಾಧಿಸಿದುದರಿಂದಲೂ ಸಣ್ಣಪ್ಪ ಈ ರೀತಿ "Hopeless" ಅನ್ನುತ್ತಿರ ಬೇಕಾಗಿದೆ. ಅವನು ಕಲಿತ ಅನೇಕ ಇಂಗ್ಲೀಶು ಶಬ್ದಗಳಲ್ಲಿ ಆತನ ಆ ಭಾಷೆಯ ಜ್ಞಾನಕ್ಕೆ ಸಾಕ್ಷಿಯಾಗಿ ಇದೊಂದೇ ಶಬ್ದ ಮಂತ್ರಾಕ್ಷರವಾಗಿ ಉಳಿದುಕೊಂಡಿದೆ. Common Sensew ಇನ್ನೊಂದು ಹಿಂದಿ, ಚರಕ ಗಳೆಲ್ಲ ದೇಶಾಭಿಮಾನದ ಕುದಿಯ ನೊರೆಗಳಾಗಿ ಬಂದವು. ಮೊಳೆಗಳು, ಸುತ್ತಿಗೆ, ಮುರುಕು ಸ್ಪ್ಯಾಕಲ್ಲು—ಇವೆಲ್ಲ ಅವನಿಗೆ ಯಾಂತ್ರಿಕ ಶಿಕ್ಷಣದಲ್ಲಿ ರುವ ಆಸ್ಥೆಯನ್ನು ತೋರಿಸುವ ಸಾಕ್ಷಿಗಳು.

ಏನೋ ಗಡಿಬಿಡಿಯಲ್ಲಿ ಸಣ್ಣಪ್ಪನ ವಿಷಯವಾಗಿ ನಾಲ್ಕು ಮಾತು ಹೇಳಿದೆ. ಅವನ ಜೀವನ ಸಾಗರಪ್ರಾಯವಾದುದು. ಅದನ್ನೆಲ್ಲ ಚಿತ್ರಿಸಲು ಸಾವಿರ ಪುಟದ ಕಾದಂಬರಿಯನ್ನೇ ಬರೆಯಬೇಕಾದೀತು. ಆದರೆ ಕಾದಂಬರಿ ನನ್ನ ಕ್ಷೇತ್ರವಲ್ಲ. ಒಂದು ಮಾತು ಹೇಳದಿದ್ದರೆ ಸಣ್ಣಪ್ಪನ ವಿಷಯ ಸರಿ ಯಾಗಿ ತಿಳಿಯಲಿಕ್ಕಿಲ್ಲ. ಅವ ಸಣ್ಣಂದ ಜಾಣ. ನಮ್ಮ ಕ್ಲಾಸಿನಲ್ಲಿ ಅವನೇ ಮೊದಲನೆಯ ನಂಬರು ಬರುತ್ತಿದ್ದ.

ಈಗಲೂ ಸಣ್ಣಪ್ಪ ಗ್ರಾಮಸುಧಾರಣೆಗಾಗಿ, ಸ್ತ್ರೀಯರ ಉದ್ಧಾರಕ್ಕಾಗಿ, ಮಕ್ಕಳ ಶಿಕ್ಷಣಕ್ಕಾಗಿ ಅನೇಕ ಯೋಜನೆಗಳನ್ನು ಮಾಡಿಟ್ಟಿದ್ದಾನೆ. ಕೆಲವನ್ನು ನನಗೆ ತಿಳಿಸಿ ಹೇಳಿದ್ದಾನೆ. ಅವುಗಳನ್ನೆಲ್ಲ ನಾನೇ ಬರೆದು ಬೆಳಕಿಗೆ ತರ ಬೇಕೆಂದು ನಿಶ್ಚಯಿಸಿದ್ದೇನೆ. ಆವಾಗಲಾದರೂ ಸಣ್ಣಪ್ಪ ಸಕಲವಿದ್ಯೆಯವ ನೆಂಬ ಮಾತು ಖಾತ್ರಿಯಾಗಬಹುದಲ್ಲವೇ ?

# ಕಂತ್ರದಲಿ

●

ನಮ್ಮೂರ ಸುತ್ತಲೆಲ್ಲೂ ' ಬಂಡಿ ಅರೆ ' ಯಷ್ಟು ಬಿಸಿಲು ಕಾಯವದಿಲ್ಲ. ಬೆಳಗಿನ ಹತ್ತು–ಸಂಜೆಯ ನಾಲ್ಕು ಘಂಟೆಗಳ ನಡುವೆ ಅಲ್ಲಿ ನಡೆಯುವು ದೆಂದರೆ ಉರಿಯುವ ಒಲೆಯೇರಿದಂತೆ; ಕೋಟ್ಯಾಧೀಶನು ಕಾಲವಶಾತ್ ಕಡು ಬಡತನದಲ್ಲಿ ಕಾಲೂರಿದಂತೆ. ಅರೆಯ ಓರೆಯಲ್ಲಿ ಕಿರುಜಾಡಿ. ಇಳುಕಲಿಳಿ ದರೆ ಬರುವುದೇ ನಮ್ಮೂರು.

ವೈಶಾಖದ ನಡುದಿನ. ಗಾಳಿಯೂ ಬಳಲಿ ನೆಳಲಿನಲ್ಲಿಳಿದು ವಿಶ್ರಮಿಸು ತ್ತಿತ್ತು. ತಪತಪ ಎನ್ನುವ ಆತಪದಲ್ಲಿ ಕಲ್ಲುಪರೆಯ ಮೇಲೆ ವ್ಯಕ್ತಿಯೊಂದು '' ಹ್ಹ ! ಹ್ಹ ! ಹ್ಹ ! ಇಕೋಳಿ ಕಲ್ಲು ! ಮನೆಕಟ್ಟ !.... ಕಟ್ರೋಕಟ್ಟ ! ನಮ್ಮನೆ ನೆಲಗುಂದದ ಕಲ್ಲು ! " ....ಎಂದು ವಿಕಟಾಸ್ಯದಲ್ಲಿ ಕೂಗುತ್ತಾ ಉಂಡೆಗಲ್ಲುಗಳನ್ನುರುಳಿಸುತ್ತಿತ್ತು. ಉಟ್ಟ ಲಂಗೋಟಿಯೊಂದನ್ನು ಬಿಟ್ಟರೆ ಆ ವ್ಯಕ್ತಿ ದುಂಡಗೆ. ಕೆದರಿದ ಕರಡಗೂದಲು ಎಂಟೂ ದಿಕ್ಕಿಗೆ ಕೈಬೀಸು ತ್ತಿತ್ತು. ಬೆವತ ಮೈದೊಗಲು ಎಲುಬನ್ನು ಅಪ್ಪಿತು. ಹಣೆಯ ಮೇಲೆ ಹಳಗು ಕಿರುಗಾಲುವೆ ಕೊರೆದಿತ್ತು. ಅವನನ್ನು ನೋಡಿದೊಡನೆಯೆ ವಿನಾ ಯಕರ '' ಹಂದರೋ ಹಂದರ ! ಕಂಬನಿಗಳ ಕಂದರ ! ಮೈಬೆವರಿನ ಬಂದರ ! ನೋಡು ನೀ ವಸುಂದರಾ ! '' ಮುಂತಾದ ಉದ್ಗಾರಗಳನ್ನು ಆಕಾಶವೇ ಉದ್ಘೋಷಿಸುವಂತಿತ್ತು. ಇಷ್ಟರಿಂದಲೇ ಆ ವ್ಯಕ್ತಿಗೆ ಮಳ್ಳು ಹಿಡಿದಿತ್ತೋ, ಅವನು ಕಳ್ಳು ಕುಡಿದಿದ್ದನೋ ಹೇಳಿಕೊಳ್ಳಬಹುದಾಗಿತ್ತು.

ಬೀರನೆಂದು ಆವನಿಗೆ ಹೆಸರು. ಬೀರ ಉಪ್ಪಾರ. ಸುಬ್ಬಿ (ಸೊಸೆ), ಕುಪ್ಪ (ಮಗ) ಇವರು ಆವನ ಪಂಚಪ್ರಾಣಗಳಲ್ಲೆರಡು. ಕಲ್ಲು ಕಡಿಯುವ ಮಚ್ಚಿ ಸುಣ್ಣ–ಮಣ್ಣು ಕಲಿಸುವ ತಾಪಿ, ಅಳತೆಯ ನೂಲು, ಇವು ಉಳಿದ ಮೂರು.

ಒಕ್ಕಲಿಗರ ಕೊಪ್ಪದ ಕೊನೆಗೆ ಅವನ ಬಿಡಾರ; ಒಂದು 'ದರೆ' ಯ ಬುಡದಲ್ಲಿ ಹುಲ್ಲಿನ ಗುಡಿಸಿಲು.

ಬೀರನು ಕುಪ್ಪನೊಡನೆ ಕಲ್ಲು ಕಡಿಯುತ್ತ ಬಿದುರಿನ 'ಅಂಡೆ' ಯಲ್ಲಿ ಬರೇ ಪಾವಲಿಗಳನ್ನು ತುಂಬುತ್ತಿದ್ದ. ಹೊಟ್ಟೆಯನ್ನು ನೀರಿನಿಂದಲಾದರೂ ಸಂತಯಿಸಿ ಮೊಟ್ಟೆ ಕಟ್ಟುತ್ತಿದ್ದ–ಮಗನಿಗಾಗಿ, ಜೀವನ ಜೀವಕ್ಕಾಗಿ. ಕುಪ್ಪನಿಗೆ ಇಪ್ಪತ್ತು ವರುಷವಾಗಲು, ಆಚೆ ಕೇರಿಯ ಸುಬ್ಬಿಯನ್ನು ತಂದು ಮದುವೆ ಮಾಡಿದನು. ಭತ್ತಕುಟ್ಟಿ ಅಬ್ಬೆಯೊಡನೆ ಜೀವಿಸುತ್ತಿದ್ದ ಸುಬ್ಬಿ, ಕಲ್ಲು ಕಡಿಯುವ ಕುಪ್ಪನ ಕೈ ಹಿಡಿದಳು. ಅವರ ಮದುವೆಯ ಸಂಗತಿಯನ್ನು ಬರೆದರೆ ಅದೊಂದು 'ಜೀವನ ಸಂಗೀತ' ವಾಗುವದು.

ಸುಬ್ಬಿ, ಅವಳ ತಾಯಿ, ಬೀರ, ಕುಪ್ಪ—ಎಲ್ಲರೂ ಒಂದೇ ಗುಡಿಸಲಲ್ಲಿ,—ಅಂಬಲಿಯ ಕ್ಷೀರಸಾಗರದಲ್ಲಿ, ಹುಲ್ಲಿನ ಇಂದ್ರಾಗಾರದಲ್ಲಿ, ಸಿರಿವಂತರು ಸಹ ಮಚ್ಚರಿಸುವ ಮಹಾನಂದದಲ್ಲಿ ನಗುತ್ತಿರಲು, ಸುಬ್ಬಿಯ ಮುದಿ ತಾಯಿ ತೀರಿ, ಆರು ಕಂಬನಿ ಬಿಂದುಗಳನ್ನು ನೆಲಹೀರಿತು.

ಕುಪ್ಪನು ಉಪ್ಪಾರ ಕೆಲಸಕ್ಕೆ ಹೋಗುವುದು; ಮುದಿಬೀರ ಮನೆಕಾಯುವುದು,—ಗುಡಿಸಿಲ ಸುತ್ತಲೂ ತುಳಸೀ ವನ ಬೆಳಸುವುದು, ದೊಡ್ಡ ಕಟ್ಟಡಗಳನ್ನು ಕಟ್ಟುವ ಸಮಯದಲ್ಲಿ ಕುಪ್ಪನಿಗೆ 'ಅರಲು' ಹಾಕಿಕೊಡುವುದು; ಸುಬ್ಬಿ ಬ್ರಾಹ್ಮಣರ ಮನೆಗೆ ಹುಲ್ಲು ಕೊಯ್ದು ಹಾಕುವುದು; ಶ್ರಾಯ ಬಂದಾಗ ನಟ್ಟಿಗ ಕರಡದ ಕಂಬಳಕ್ಕೆ ಮುಂತಾದ ಆಳು-ತಂಡ ಬೇಕಾಗುವ ಕೆಲಸಗಳಿಗೆ ಹೋಗಿ ಬಂದ ಸಂಬಳದಿಂದ ಉಪ್ಪು–ಮೆಣಸು ತರುವುದು; ಕುಪ್ಪನು ತನ್ನ ಗಳಿಕೆಯನ್ನು ದೇವರ ಭಾಂಡಾರದಂತಿದ್ದ ಬಿದಿರಿನ ಪೊಳ್ಳಿನಲ್ಲಿ ಕೂಡಿಡುವದು — ಈ ರೀತಿ ಅವರ ಜೀವನವು ಶಾಂತವಾಗಿ ಅಡೆತಡೆಗಳಿಲ್ಲದೆ ಮುರಿಕೆ ತಿರುಗಣಿ, ಮಹಾಪೂರಗಳೂ ಇಲ್ಲದೆ, ನಿತ್ಯನೀರವವಾಗಿ ನಗೆಯಾಗಿ ಸಾಗಿತ್ತು.

ಸುಬ್ಬಿ ನಾಲ್ಕು ತಿಂಗಳ ಬಸುರಿ. ಕುಪ್ಪನು ಚೊಚ್ಚಲು ಸಂಭ್ರಮದ ಮುನ್ನವಿಯನ್ನು ದುಡಿದು ಬಂದು ನೀರು ಕುಡಿಯುವಾಗ, ನಾಲಗೆಗೆ ಹನಿ ಹನಿಯಾಗಿ ಬಿಡುವ ಬೆಲ್ಲಕ್ಕಿಂತ ಹೆಚ್ಚಾಗಿ ಕಾಣಹತ್ತಿದನು. ಬೀರನಿಗಂತೂ

“ ಸಾಯೂ ಮುಂಚೆ ಮೊಮ್ಮಗ್ನೊಂದ್ ನೋಡ್ದ್ರೆ !” ಎಂದು ತುಳಸೀ ಕಟ್ಟೆಯೆದುರು ಬೇಡಿ, ಸುಬ್ಬಿಗೆ ಒಂಭತ್ತು ತಿಂಗಳೆಂದು ತುಂಬೀತೆಂದು ದಿನ ಲೆಕ್ಕ ಮಾಡಿದಂತೆಲ್ಲ ತನ್ನ ಮರಣವನ್ನು ದೇವರು ಮುಂದೂಡಿದಂತೆನಿಸುವುದು. ಗಂಡು ಹುಟ್ಟಿದರೆ ‘ ಶಿವು ’ ಎಂದೂ, ಹೆಣ್ಣು ಆದರೆ ‘ ತುಳಸಿ ’ ಯೆಂದೂ ಹೆಸರಿಡಬೇಕೆಂದು ಮುದುಕ ಮನಸ್ಸಿನಲ್ಲಿಯೇ ಮುಂಜಾತಕ ಬರೆದಿದ್ದ ! ಕುಪ್ಪನಂತೂ ಸುಬ್ಬಿಯ ಬಾಳಂತನಕ್ಕೆ, ಶಿಶುವಿನ ಪಾಲನೆಗೆ ಬೇಕಾಗುವ ಸಾಧನ ಸಾಮಗ್ರಿಯಗಳನ್ನೆಲ್ಲಾ ಒಟ್ಟುಗೂಲಿಸುವುದರಲ್ಲಿ ಅಂಡೆಯೊಳಗೆ ಪಾವಲೀ ತುಂಬುವದನ್ನು ಮರೆತಿದ್ದ ! ಪ್ರತಿದಿನವೂ ಸಿಗುವ ಸಂಬಳದಿಂದ ಹೊಸ ಹೊಸ ಸಾಮಾನು ತರತೊಡಗಿದ.

ನಮ್ಮೂರ ಹಳೆಯ ಗುಡಿಯನ್ನು ದುರಸ್ತು ಮಾಡಬೇಕೆಂದು ಮೊಕ್ತೇಸರರು ಕುಪ್ಪನಿಗೆ ಹೇಳಿ ಗುತ್ತಿಗೆ ಕೊಟ್ಟರು. ‘ ಮಗ ಹುಟ್ಟುವುದರೊಳಗೇ ದೇವರ ಕೆಲಸ ಮಾಡಿದಂತಾಗುವುದು ’ ಎಂದು ಹಿಗ್ಗಿ ಕುಪ್ಪನು ಹಗಲು-ರಾತ್ರಿಯೆನ್ನದೆ ಮೂವರು ಸಹಾಯಕರೊಡನೆ ಗುಡಿಯ ಗೋಡೆಯನ್ನು ಕಟ್ಟಹತ್ತಿದನು. “ ಬಿರೀನ್ ಮುಗಿಸ್ಬಿಟ್ರೆ ಗುತ್ಗೆ ಹಣ ಸಿಗ್ತದೆ; ಅದ್ರಿಂದ ಹೆಂಡ್ತಿಗೆ ಸೀರೆ, ರೌಕೆ,........” ಇತ್ಯಾದಿ ಲೆಕ್ಕ ಹಾಕುತ್ತ ಕುಪ್ಪನು ಒಂದು ಮಧ್ಯಾಹ್ನ ದೇವರ ಮುಂದೆ ಬೆವರು ಸುರಿಸುತ್ತಿರಲು, ಹಸಿಗೋಡೆ ಕುಸಿದು ಬಿದ್ದು ಸ್ವರ್ಗ ಸೇರಿದನು. ತನ್ನ ಗುಡಿ ಕಟ್ಟುತ್ತಿರುವ ಉಪ್ಪಾರನ ಮೇಲೆ ದೇವರೆನ್ನುವ ಬಂಡೆಗೆ ದಯೆಯೆಲ್ಲಿದೆ ? ಕಲ್ಲಮೂರ್ತಿಗೆ ಕಲ್ಲೆದೆ !

ಸುಬ್ಬಿಯು ಗರ್ಭಿಣಿಯಿಲ್ಲದಿದ್ದರೆ ಎರಡು ಜೀವಗಳು ಕುಪ್ಪನನ್ನು ಹಿಂಬಾಲಿಸುತ್ತಿದ್ದವೋ ಏನೋ ! ಆದರೆ ಗುಡಿಯಲ್ಲಿ ಹುಗಿದು ಬಿದ್ದ ಕುಪ್ಪನ ಮೂರ್ತಿ ಸುಬ್ಬಿಯ ಗರ್ಭ–ಗುಡಿಯಲ್ಲಿ ಹುದುಗಿತ್ತು. ಬೀರ-ಸುಬ್ಬಿಯರು ಕಂಬನಿಯಲ್ಲಿ ಮುಳುಗಿದರೂ ಆ ಶಿಶುವಿಗಾಗಿ ಅದು ಹುಟ್ಟಿದನಂತರ ಪೋಷಿಸುವುದಕ್ಕಾಗಿ ತುಸು ಕತ್ತೆತ್ತಿ ಶ್ವಾಸವಾಡಿಸುವವರಾದರು.

* * * *

ಶಿವು ಬಂದು ಗುಡಿಸಿಲನ್ನು ಬೆಳಗಿಸಿದರೂ ಬೀರ ಸುಬ್ಬಿಯರೆದೆಯಲ್ಲಿ ಕುಪ್ಪನ ನೆಳಲು ಜೋಲುಮೋರೆ ಹಾಕಿ ಕೂತಳುತ್ತಿತ್ತು. ದುಃಖದ ತೊರೆಯು

ಒರತೆ ಕಣ್ಣು ಕೊರೆಯುತ್ತಿತ್ತು. ಆನಂದಾಶ್ರುವು ಅದನ್ನು ಮಾಯಿಸ ಲೆಳಸುತ್ತಿತ್ತು.

ಶಿವುಗೆಂದು ಬೇಡಿ ತಂದ ಹಾಲಿನಲ್ಲಿ ತುಸುವನ್ನು ಸುಬ್ಬಿಯು ಗುಡಿಸಿಲ ಬಲಗಡೆಯ ನಾಗರ ನೈವೇದ್ಯಕ್ಕಿಡುತ್ತಿದ್ದಳು. ಶಿಶುವಿನ ತಲೆಗೆ ತಂದ ತೈಲ ದಿಂದ ಹದಿನೈದು ದಿನಕ್ಕೊಮ್ಮೆ ಹಾವಿನ ಹುತ್ತಕ್ಕೆ ಹಣತೆ ಹಚ್ಚುತ್ತಿದ್ದಳು. “ ಸುಬ್ರಾಯಾ, ನನ್ನ ಶಿವೂನ್ನ ಸುಖ್ವಾಗ್ಬೆಳ್ಸಿ ಬಾಳ್ಸಪ್ಪಾ !” ಎಂದು ಬೇಡು ವಾಗ, ಬೀರನು ಹುತ್ತದೆದುರು ಕೈಜೋಡಿಸಿ ಜೋಲುಮೊಗದಲ್ಲಿ ಕಂಬನಿ ಗರೆಯುತ್ತಿದ್ದನು. ಭಕ್ತಿಯಲ್ಲಿ ಬೆರೆತು ಪ್ರಸಾದ ಸೂಡಿ, ಶಿಶುವನ್ನು ಹುತ್ತ ದೆದುರು ಹಿಡಿದು “ ನೋಡಪ್ಪಾ ನಿನ್ನ ಕೂಸು ” ಎಂದು ತೋರಿಸಿ ತರುತ್ತಿ ದ್ದರು. ಚೌಡಿ ಮಾಸ್ತಿಗಳಿಗೂ ಇದೇ ಪ್ರಕಾರ ಮೊರೆಹೋಗುತ್ತಿದ್ದರು.

* * * * *

ನಮ್ಮೂರ ಜೋಯಿಸರಿಗೆ ಅಂಜನ ಹಚ್ಚಿ ಗಂಟು ಕೀಳುವ ಹುಚ್ಚು ಬಹಳ. ಅಂದು ಅವರು ಬೇಣದ ಬುಡದಲ್ಲಿ ಒಂದು ಕಾಸಕನ ಮರದ ಕೆಳಗೆ ಗಂಟಿದೆಯೆಂದು ಅಂಜನದಿಂದ ತಿಳಿದು, ಅಲ್ಲಿಗೆ ಗುಪ್ತದಲ್ಲಿ ಹೋಗಿ ಅಗೆದರು; ಅಗೆದ ಹಾಗೆಲ್ಲ ಮಣ್ಣೋ ಮಣ್ಣು, ಕಲ್ಲೋ ಕಲ್ಲು ! ನಿಕ್ಷೇಪ ಮಾತ್ರ ಕಾಣಿಸಲಿಲ್ಲ. ನಿಷ್ಫಲಪ್ರಯತ್ನರಾಗಿ ಮನೆಗೆ ಬಂದರು.

ಮರುದಿನ ಸುಮಾರು ೧೨ ಗಂಟೆಗೆ, ಶಿಶುವನ್ನು ತೊಟ್ಟಿಲಲ್ಲಿ ಮಲಗಿಸಿ ಬೀರನಿಗೆ ತೂಗಹೇಳಿ, ಸುಬ್ಬಿಯು ಒಡೆಯರ ಮನೆಗಾಗಿ ಹುಲ್ಲು ತರಲು ಅದೇ ಬೇಣಕ್ಕೆ ನಡೆದಳು. ಹುಲ್ಲು ಕೊಯ್ಯುತ್ತಿರುವಾಗ ಸುಗಂಧಿ ಬಳ್ಳಿ ಗಳನ್ನು ಕಂಡು, ಅವುಗಳ ಬೇರನ್ನು ಕಿತ್ತೊಯ್ದು ಒಣಗಿಸಿ ಹುಡಿಮಾಡಿ, ಹಾಲೊಳಗೆ ಕೂಡಿಸಿ ಮಗುವಿಗೆ ಕುಡಿಸಿ ಚೆನ್ನಾಗಿ ಬೆಳೆಯಿಸಬೇಕೆಂಬ ವಿಚಾರ ತಲೆಯಲ್ಲಿ ನುಗ್ಗಿ, ಹಿಗ್ಗಿ, ಬೇರು ಕೀಳ ತೊಡಗಿದಳು. ಗಂಟಿಗಾಗಿ ಜೋಯಿಸರಗೆದ ಕಡೆಗೂ ತುಂಬಾ ಸುಗಂಧಿ ಕಂಡು, ಅಲ್ಲಿ ಕತ್ತಿಯಿಂದ ನೆಲ ಕೆದರ ಹತ್ತಿದಳು. ಗಂಟಿಗಗೆದಗುಂಡಿಯ ಬದಿಯನ್ನು ಕೆದರುತ್ತಿರುವಾಗ ‘ ಕಟ್ ’ ಎಂದು ಸಪ್ಪಳವಾಯಿತು ! ಕುತೂಹಲ ಹೆಚ್ಚಿ ಅಗೆಯಲು, ಹಿತ್ತಾ ಳಿಯ ಚೆಂಬೊಂದು ಕಂಡಿತು.

ಜೋಯಿಸರಗೆದ ಜಾಗಕ್ಕೂ ಗಂಟಿದ್ದ ಸ್ಥಳಕ್ಕೂ ಕೇವಲ ಒಂದು ಅಂಗುಲ, ಆದರೆ ಅದು ಅವರಿಗೆ ಸಿಗತಕ್ಕ ದ್ರವ್ಯವಾಗಿದ್ದಿಲ್ಲವಾದುದರಿಂದಲೇ ಕಾಣಿಸಲಿಲ್ಲ. ಅಂಗುಲ ಅಗಲ ಮಣ್ಣೇ ನಿಕ್ಷೇಪವನ್ನು ಮರೆಮಾಡಿತು.

ಸುಬ್ಬಿಯು ಸಂತೋಷದಿಂದುಬ್ಬಿ, ಚೆಂಬನ್ನು ಹುಲ್ಲುಚೂಳಿಯೊಳಗಡಗಿಸಿ, ನೆಟ್ಟಗೆ ಗುಡಿಸಿಲಿಗೆ ನುಗ್ಗಿದಳು. ಅವಳ ವೇಗಕ್ಕೆ ಗಾಳಿ ಸಹ ತಡೆಯೆನಿಸಿತು. ಚೂಳಿಯನ್ನು ನೆಲಕ್ಕಿಳಿಸಿ ಚೆಂಬು ಹಿಡಿದು "ಮಾವಾ ಮಾವಾ" ಎನ್ನುತ್ತಾ ಒಳಗೆ ಓಡಿದಳು. ಆದರೆ—

ಬೀರ ನಿದ್ದೆ ಹೋಗಿದ್ದಾನೆ. ತೊಟ್ಟಿಲ ಶಿಶುವನ್ನು ಇಲಿ-ಹೆಗ್ಗಣಗಳ ಬೇಟೆಗೆ ಬಂದ ಹಸಿದ ಹಾವು ಕಡಿದು ಶಿವು ಶವವಾಗಿ ಬಿದ್ದಿದ್ದಾನೆ.

ನೆಲ-ಬಾನಗಳು ತಾಗಿ ಸುಬ್ಬಿಯನ್ನು ಹಿಸುಕಿದುವು; ಎದೆಯೊಡೆದು "ಮಾವಾ" ಎಂದು ಮೂರ್ಛೆ ಹೋದಳು ಸುಬ್ಬಿ ತೊಟ್ಟಿಲ ಕೆಳಗೆ.

ಬೀರ ಎಚ್ಚತ್ತ. ಹುಚ್ಚು ಹಿಡಿಯಿತು. ಅಲೆದಾಡ ಹತ್ತಿದ. ಆಗಷ್ಟೇ ಬಂಡಿ ಅರೆಗೆ ಬಂದು ಕೂಗುತ್ತಿದ್ದ.

ಸುಬ್ಬಿಯು ಶಿವು-ಶವವನ್ನೆತ್ತಿಕೊಂಡು, ಹೊನ್ನಿನ ತಂಬಿಗೆ ಹಿಡಿದು ಊರೊಳಗಿಂದ ಚೀರುತ್ತ ಬಂದಳು: "ತಕೋಳಿ ಹೊನ್ನು....ಉಣ್ಣಿ ತಿನ್ನಿ ಬೆಳೀರಿ!....ನನಗೆ ಬೇಡಾ. ನನಗೆ ನನ್ನಿವೂ....ನನ್ನಿವೂ...." ಎಂದು ಹೊನ್ನುಗಳನ್ನು ತೂರುತ್ತಾ, ಗುಡ್ಡ-ಕಂದರಗಳಲ್ಲಿ "ನನ್ನಿವೂ" ಮಾರ್ದನಿಗೊಳ್ಳಿಸಿ, ಕಂದಕದ ಕಡೆಗೆ ಓಡುತ್ತಿರುವಾಗ "ಹ್ಹ! ಹ್ಹ! ಹ್ಹ! ನಾನೂ ಬಂದೆ" ಎಂದು ಬೀರನೂ ಹಿಂಬಾಲಿಸಿದನು. ಇಬ್ಬರೂ ಕುಪ್ಪನನ್ನು ಕಂಡರು.

ಸುಬ್ಬಿ ತೂರಿದ ಹೊನ್ನು ಯಾರಿಗಾದರೂ ಬೇಕೆ? ಕಂದರದಲ್ಲಿ ಸಿಗಬಹುದು.

ಕಂಬನಿ ಕಡಲಿಗೆ

ಜೀವನ ತೊರೆಗಳು

ಹರಿವವು ಗಿರಿ-ಝರಿ-ಹೊಂತದಲಿ

— ೮೪ —

ಲಂಗರುಗಲ್ಲ,
ಈಜುಗಳಿಲ್ಲ
ನೂಕುವ ಸೆಳವಿದೆ ಕಂತದಲಿ.
ಹಾಯಿಯ ಹರಿಯುವ
ಗಾಳಿಯು ಗವಿಗಳ
ಕೊರೆದಿದೆ ದೂರದಿಗಂತದಲಿ

# ಹೊಯ್ಗೆರೆಯಲ್ಲಿ

‘ ಹೊಯ್ಗೆರೆ ’ ಯಲ್ಲಿ ಹಗಲಹೊತ್ತೂ ಹುಲಿ ತಿರುಗಾಡುತ್ತದೆ. ಹುಲ್ಲಿನಾಸೆಯಿಂದ ಅಲ್ಲಿಗೇ ದನಕರುಗಳು ಓಡುತ್ತವೆ. ಎಷ್ಟೋ ದನಕಾಯುವವರು ಧೈರ್ಯದಿಂದ ಅಲ್ಲಿಗೇ ತಮ್ಮ ಹಿಂಡನ್ನು ಹೊಡೆದುಕೊಂಡು ಹೋಗುತ್ತಾರೆ. ಎರಡು ಗುಡ್ಡಗಳ ನಡುವಿನ ಬಯಲಾದ ಹೊಯ್ಗೆರೆಯಲ್ಲಿ ಸದಾ ಜುಳು ಜುಳು ನೀರು ಹರಿಯುತ್ತಿರುತ್ತದೆ. ಹಸಿರು ಮುರಿದಿರುತ್ತದೆ.

ಸುಬ್ಬಣ್ಣ ನಮ್ಮೂರಿನ ಹುಲಿಹೊಡೆಯುವ ಬಂದೂಕಿನ ಮನುಷ್ಯ. ಒಕ್ಕಲಿಗರೇ ನಿಜವಾದ ಹುಲಿ ಹೊಡೆಯುವವರಾದರೂ ಬಂದೂಕಿನ ಸಂಕೇತದಿಂದ ಸುಬ್ಬಣ್ಣ ಅವರ ಮುಂದಾಳು. ಅವನು ಹತ್ತೆಂಟು ಹುಲಿಗಳನ್ನು ಢಂ ಮಾಡಿದ್ದಾನೆ. ಬಹಳ ಎದೆಗಾರ. ಎದುರಿಗೆ ಹುಲಿಬಂದರೂ ಹೆದರದೆ ಅದರ ತೆರೆದ ಬಾಯಿಯೊಳಗೇ ಗುಂಡು ನಾಟಿಸುತ್ತಾನೆ. ಅವರೂ ಹುಲಿ ಹೊಡೆಯುವ ಕಾರ್ಯ ಮರದ ಮೇಲಿಂದ ಅಥವಾ ಒಂದು ಹೊಂಡ ತೆಗೆದು, ಅದಕ್ಕೆ ಒಂದು ಕೊಪ್ಪರಿಗೆಯನ್ನು ಡಬ್ಬು ಹಾಕಿ ಮುಚ್ಚಿ, ಸಣ್ಣ ಬಿಲಗಳನ್ನು ಇಟ್ಟು ಅವುಗಳಿಂದ ಸುರಕ್ಷಿತವಾಗಿ ಇಂಥದೊಂದು ಸ್ಥಳವನ್ನು ಬಡೆಬಿದ್ದ ಜಾಗದಬಳಿಗೆ ಮಾಡಿ ಕುಳಿತರೆ ಹುಲಿಯು ಸತ್ತಿತೆಂದೇ ತಿಳಿಯಬೇಕು.

ಇರಲಿ ಮೊನ್ನೆ ಮೊನ್ನೆ ಅವನ ಜತೆಗೆ ಹುಲಿಯ ಬೇಟೆಗೆ ಹೋದಾಗ ಒಂದು ಆಶ್ಚರ್ಯವನ್ನು ಕಂಡೆ. ಒಂದು ಮುದುಕಿ—ವಿಧವೆ—ಹುಲ್ಲು ಕಿತ್ತು ಅಲ್ಲಿ ಮೇಯುವ ದನಕರುಗಳಿಗೆ ಕೊಡುತ್ತ ಹುಚ್ಚು ಹುಚ್ಚೇ ಹಾಡುತ್ತ ಆಟದಾಡುತ್ತಿದ್ದಳು. ಹುಲಿಯು ಕೂಗಿದುದನ್ನು ಕೇಳಿ ಹುಲ್ಲು ಹಿಡಿದು “ ಬಂದೇ ಹುಲಿಯಣ್ಣಾ; ತಡೆ, ಹುಲ್ಲು ತಂದೇ ಹುಲಿಯಣ್ಣಾ ” ಎಂದು ಹಾಡುತ್ತಿದ್ದಳು. ನನಗೆ ಏನೂ ತಿಳಿಯದಂತಾಯಿತು. ಇಂಥ ನಿರ್ಜನ ಪ್ರದೇಶ

ದಲ್ಲಿ ಹುಚ್ಚಿ! ಹುಲಿ ಹುಲ್ಲೆಗಳಿಗೆ ಹುಲ್ಲು ಹರಿದು ಕೊಡುವ ಮುದುಕಿ! ಸುಬ್ಬಣ್ಣ ಅಂದ "ಪಾಪ, ಹುಚ್ಚಿ ಎಲ್ಲೆಲ್ಲಾ ಅಲೆದಾಡುತ್ತಾಳೆ. ಯಾರೂ ಇಲ್ಲ" ಬಂದೂಕು ಏರಿಸಿ ಹುಲಿಯ ಹಾದಿ ನೋಡುವ ಮುಂಚೆ ಸುಬ್ಬಣ್ಣ ಈ ಹುಚ್ಚಿಯ ಕತೆ ಹೇಳಿದ.

ಪಿತ್ರಾರ್ಜಿತ ಸಾಲಕ್ಕಾಗಿ ಮನೆಮಾರುಗಳನ್ನೆಲ್ಲ ಕಳೆದುಕೊಂಡ ಮೇಲೆ ಹುಚ್ಚಿ 'ಬಾಗಿ'ಯ ಮಗ 'ಶಂಕ್ರ' ಊರು ಕೇರಿಯನ್ನೇ ಬಿಟ್ಟು ಕುಚ್ಚೀ ನಾಡಿನ ಕಡೆಗೆ ಒಂದು ಮೂಲೆಯಲ್ಲಿ ತಾಯಿಯೊಡನೆ ಇರಹತ್ತಿದ. ಒಂದು ಗುಬ್ಬೆಯಲ್ಲಿ ತಾಯಿ ಮಕ್ಕಳು ನೆಲೆಸಿದರು. ಸುತ್ತಲಿನ ಬಯಲಿನಲ್ಲಿ ಏನಾದರೂ ಬೆಳೆದು ಜೀವಿಸಬಹುದೆಂದು ಶಂಕ್ರ ನಿಶ್ಚಯಿಸಿ ಅಗೆಯಹತ್ತಿದ. ಗಡ್ಡೆ ಗೆಣಸಿನ ಮೇಲೆ ಜೀವನ ನಡೆಸುತ್ತಿದ್ದ ಅವರ ಸ್ವಭಾವ ಇನ್ನಿಷ್ಟು ವಿಚಿತ್ರವಾಗಹತ್ತಿತು. ಯಾರೋ ಮಾಡಿದ ಸಾಲಕ್ಕಾಗಿ ತಾನು ಈ ಸ್ಥಿತಿಗೆ ಬರಬೇಕಾಯಿತೆಂದು ನೊಂದುಕೊಂಡಿದ್ದರೂ ಕಣ್ಣೀರು ತೆಗೆದು ಅವನಿಗೆ ಗೊತ್ತಿಲ್ಲ. ತೀರ ಕ್ಷುಲ್ಲಕ ಸಂಗತಿಗಳಿಗೂ ಅವನು ಕೋಪಿಸಿಕೊಂಡು ಏನಾದರೂ ಮಾಡಿಬಿಡುತ್ತಿದ್ದ. ಒಮ್ಮೆ ಮರದ ತುದಿಗಿದ್ದ ಹಲಸಿನ ಹಣ್ಣು ಕೊಯ್ಯಲಾಗದೆ ಸಿಟ್ಟಿನಿಂದ ಆ ಮರವನ್ನೇ ಕಡಿದನಂತೆ! ಅಂತೂ ಅವನು ಒಂದು ತಳಮಳದಿಂದ ಸ್ವಾಸ್ಥ್ಯ ಕಳೆದುಕೊಂಡು ಹುಚ್ಚಿನ ಸೀಮೆಯನ್ನು ಸಮೀಪಿಸುತ್ತಿದ್ದನೆಂದು ಹೇಳಬಹುದು.

ಗುಡಿಸಲಿನ ಎದುರು ಒಂದು ಸಣ್ಣ ಬಯಲು. ಸಮೀಪದಲ್ಲೇ ಒರತೆಯಿತ್ತು. ಗದ್ದೆ ಮಾಡಬಹುದೆಂದು ಅಗೆಯ ಹತ್ತಿದ. ನಡುವೆ ಒಂದು ಗುಂದವಿತ್ತು. ವರಲೆಯ ಹುತ್ತದಂತಿದ್ದ ಅದನ್ನು ಅಗೆದು ಹಾಕಿದರೆ ಒಂದು ಸಣ್ಣ ಗದ್ದೆಯಾಗಬಹುದೆಂದು ಆ ಗುಂದಕ್ಕೆ ಕುಠಾರಿ ಹಾಕಿದ. ಅಗೆಯುತ್ತಿದ್ದಂತೆ ಸರ್ಪಗಳು ಭೋರೆಂದು ಹೊರಬರಹತ್ತಿದವು. ಶಂಕ್ರನ ಪಿತ್ತ ನೆತ್ತಿಗೇರಿತು. ಹೇಗಾದರೂ ಬದುಕಬೇಕೆಂದು ಈ ಮೂಲೆಗೆ ಬಂದರೆ ಇಲ್ಲಿಯೂ ಶನಿ. ಸಿಟ್ಟಿನಿಂದ ಸರ್ಪಗಳು ಬಂದಂತೆ ಕಡಿದು ಹಾಕಿದ. ಎರಡು ತಾಸುಗಳ ವರೆಗೆ ಅದೇ ಕೆಲಸ, ಬಿಲದಿಂದ ಸರ್ಪ ಹೊರಗೆ ಹೆಡೆ ಹಾಕಿದೊಡನೆಯೋ ಅದರ ಕುತ್ತಿಗೆಗೇ ಕುಠಾರಿ. ೨೦–೨೫ ಸರ್ಪಗಳನ್ನು ಕೊಂದ ಮೇಲೆ ಒಂದು

ಮುದಿಸರ್ಪ ಬೇರೊಂದು ಬಿಲದಿಂದ ಬಂದು ಶಂಕ್ರನಿಗೆ ಹೊಡೆಯಿತು. ಚೀರಿ ನೆಲಕ್ಕೆ ಬಿದ್ದ.

'ಬಾಗಿ' ಮಗನ ಮರಣದ ನಂತರ ಹುಚ್ಚಿಯಾದಳು. ಅವಳು ಜೀವನದ ಕಹಿಗಳನ್ನೆಷ್ಟೋ ಉಂಡಿದ್ದಳು. ಅದನ್ನೆಲ್ಲ ಬರೆದರೆ ಇನ್ನೊಂದು ಗ್ರಂಥವಾಗಬಹುದು. ಮಗನ ಮೇಲಿನ ಮಮತೆಯೊಂದೇ ಅವಳನ್ನು ಜೀವಂತ ಇಟ್ಟಿತ್ತು.

ಹೊಯ್ಗೆರೆಯಲ್ಲಿ ಇನ್ನೂ ಆ ಗುಡಿಸಲಿನ ಅವಶೇಷವಿದೆ. ಅದರಲ್ಲಿ ಸರ್ಪ ನೆಲಸಿದೆಯೆಂದು ದನಕಾಯುವವರು ಹೇಳುತ್ತಾರೆ. 'ಬಾಗಿ' ಮಾತ್ರ ಹುಲ್ಲು ಹರಿದು ಕಂಡ ಕಂಡ ಪ್ರಾಣಿಗಳಿಗೆಲ್ಲ ಕೊಡುತ್ತ ಗುಡ್ಡ ಬಯಲುಗಳಲ್ಲಿ ಅಲೆದಾಡುತ್ತಿದ್ದಾಳೆ.

ಈ ಪುಟವನ್ನು ನಾನು ಬರೆಯುತ್ತಿರುವಾಗ ಅವಳು ಸತ್ತಿರುವಳೋ ನಾಗರ ಹಾವಿಗೆ ಹುಲ್ಲು ಹರಿದು ಕೊಡುತ್ತಿರುವಳೋ ಹೇಳಲಾರೆ. ಅವಳ ಚಿತ್ರ ಮಾತ್ರ ನನ್ನ ಕಣ್ಣೆದುರು ಕಟ್ಟಿನಿಂತಿದೆ.



# ಕರಿಕಾನಮ್ಮ

ಸಹ್ಯಾದ್ರಿಯ ಶಿಖರದಲ್ಲ ಒಂದು ಗುಡಿ. ಆರೆಂಟು ಮೈಲಿನ ಹಳ್ಳಿಗಳಿಂದ ಒಂದು ಬಿಳೀ ಬಿಂದುವಿನಂತೆ ಕಾಣಿಸುತ್ತದೆ. ಅಂಥ ನಿರ್ಜನ ಪ್ರದೇಶದಲ್ಲಿ ಕರಿಕಾನಮ್ಮನ ಗುಡಿ. ಶುಕ್ರವಾರ ಮಂಗಳವಾರ ದೂರ ದೂರದ ಹಳ್ಳಿಗಳಿಂದ ಪೂಜೆಗೆ ಬರುತ್ತಾರೆ. ನವರಾತ್ರಿಯಲ್ಲಿ ಒಂದೇ ಸವನೆ ಉತ್ಸವ. ಮಕ್ಕಳಾದರೆ ಬೆಳ್ಳಿಯ ತೊಟ್ಟಿಲು ಬಟ್ಟಲು ಕಾಣಿಕೆ ಕೊಡುವೆನೆಂದು ಬೇಡಿಕೊಳ್ಳುವರು. ಮತ್ತೇನೇನೋ ಆದರೆ ಅಮ್ಮನ ಮೋರೆಗೆ ಅರಿಸಿಣ ಹಚ್ಚಿಸಿ ಕೊಡುವೆನೆಂದು ಹೇಳಿಕೊಳ್ಳುವವರು, ಸೀರೆ ರವಕೆಯ ಕಾಣಿಕೆಯವರು— ಒಂದಲ್ಲ ಎರಡಲ್ಲ.

ಗುಡಿಗೆ ಮೂರು ನಾಲ್ಕು ಮೈಲು ಬೆಟ್ಟ ಹತ್ತಿ ಹೋಗಬೇಕು. ಮಳೆಗಾಲದಲ್ಲಿ ಅಂಬುಳಗಳ ಕಾಟ. ದಾರಿಯಲ್ಲಿ ಎರಡೂ ಕೈ ಕತ್ತರಿಸಿಹೋದ ಒಂದು ಮೂರ್ತಿ ಕಾಣುತ್ತದೆ. ಟೀಪೂಸುಲ್ತಾನನ ಸೈನಿಕರು ಅಮ್ಮನ ಭಾಂಡಾರ ಸುಲಿಯಲು ಹೋದರಂತೆ. ಯಾವದೋ ಒಂದು ದೇವತೆ (ನನಗೆ ಅದರ ಹೆಸರು ಗೊತ್ತಿಲ್ಲ.) ಸೈನಿಕರನ್ನು ತಡೆದಳಂತೆ. ಆ ದುಷ್ಟರು ಅವಳ ಎರಡೂ ಕೈ ಕತ್ತರಿಸಿ ಮುಂದೆ ನಡೆದರಂತೆ. ದೇವತೆ ಮೂರ್ತಿಯಾಗಿ ನಿಂತಿತು. ಆದರೆ ಅವರಿಗೆ ಗುಡಿಗೆ ಹೋಗಲು ದಾರಿಯೇ ಸಿಗಲಿಲ್ಲವಂತೆ. ಸುತ್ತಿ ಸುತ್ತಿ ಕೈ ಕಡಿದು ಹೋದ ದೇವತೆಯ ಬಳಿಗೇ ಅವರು ಬಂದರಂತೆ. ಮುಂದೇನಾಯಿತೋ ಗೊತ್ತಿಲ್ಲ. ಈಗಂತೂ ಗುಡಿಗೆ ಹೋಗುವವರು ಒಂದು ಎಲೆಯನ್ನಾದರೂ ಆ ಮೂರ್ತಿಗೆ ಸೂಡಿಸಿಯೇ ಮುಂದೆ ಹೋಗಬೇಕು. ಹಾಗೆ ಮಾಡದಿದ್ದರೆ ಅವರ ದಾರಿಯೂ ತಪ್ಪಿ ಅವರು ಮತ್ತೆ ಅದೇ ಸ್ಥಳಕ್ಕೆ ಬರುತ್ತಾರಂತೆ.

ಗುಡಿಗಳು ಇರುವದಾದರೆ ಇಂಥ ಸ್ಥಳದಲ್ಲಿರಬೇಕೆನ್ನುವಂತಿದೆ ಆ ಸ್ಥಳ. ಕನ್ನಡದ ವರ್ಡ್ಸ್‌ವರ್ಥ ಎನಿಸಿಕೊಳ್ಳುವ ಹಲವರಲ್ಲಿ ಒಬ್ಬರು ಹೇಳುವಂತೆ ದಿಗಂತವು ಆ ಸ್ಥಳಕ್ಕೆ ಸಮೀಪ. (ಅನಂತವೂ ಇರಬಹುದು.)

ಸಮುದ್ರ, ಹೊಳೆ, ಹೊಲ, ತೋಟ, ಗುಡ್ಡಗಳ ಸಾಲು ಕವಿಗಳು ಬಣ್ಣಿಸಲು ಯತ್ನಿಸುವ ಕಾವ್ಯಗಳನ್ನೆಲ್ಲ ಮೀರಿಸಿ ಹಬ್ಬಿದುದು ಕಾಣುತ್ತದೆ. ಜುಟ್ಟದಲ್ಲಿ ಚುಕ್ಕೆ ಸಿಲುಕಿಕೊಳ್ಳುವಷ್ಟು ಎತ್ತರ ಆ ಶಿಖರ. ಇರುಳಿನಲ್ಲಂತೂ ಮೇಲೆ ನಕ್ಷತ್ರ ಸುತ್ತಲೂ ಹಲವು ಮೈಲುಗಳಾಚೆ ದೀಪಗಳ ದಿಬ್ಬಣ.

ಆ ಸ್ಥಳದ ಮಹಿಮೆಯೆಂದರೆ ಅಷ್ಟಿಷ್ಟಲ್ಲ. ಮೊದಲನೆಯದಾಗಿ ಯಾರಿಗೂ ಅಂಥ ಕಟ್ಟಡವಿಯಲ್ಲಿಯೂ ಹೆದರಿಕೆ ಅನಿಸುವದಿಲ್ಲ. ಎರಡನೆಯ ದಾಗಿ ಅಲ್ಲಿಯ ಪೂಜಾರಿಯ ದನಕರುಗಳನ್ನು ಹುಲಿಗಳು ಮೂಸುವದೂ ಇಲ್ಲ. ಸಂಜೆಯ ಮುಂದೆ ಅಂಗಳದಲ್ಲಿಯೇ ಹುಲಿಗಳು ಸುಳಿದಾಡುತ್ತವಂತೆ ಇದಕ್ಕೆ ಕಾರಣ ದೇವಿಯ ಎದುರು ಪ್ರತಿನಿತ್ಯ ಪೂಜೆ ಪಡೆಯುತ್ತಿರುವ ಹುಲಿದೇವರೆಂದು ಹೇಳುತ್ತಾರೆ. ಮೂರನೆಯದಾಗಿ ಗುಡಿಯ ಸುತ್ತಲೂ ಹಬ್ಬಿದ ಬಂಡೆಯಲ್ಲಿ ಜೀವವಿದೆಯಂತೆ. ಒಮ್ಮೆ ಆ ಬಂಡೆಗಳನ್ನು ಕಡಿದು ಬಯಲು ಮಾಡಬೇಕೆಂದು ಹಾರೆ ಹೊಡೆದ ಕೂಡಲೇ ರಕ್ತ ಚಿಮ್ಮಿ ಬಂದಿತಂತೆ. ಆ ಸ್ಥಳದಲ್ಲಿ ಇನ್ನೂ ಪೂಜೆ ನಡೆದಿದೆ.

ಅಮ್ಮನ ಮೂರ್ತಿ (ಅದು ಮೂಡಿಬಂದುದು. ಆಕಾರವಿಲ್ಲ. ನಾಸ್ತಿಕರ ಮಾತಿನಲ್ಲಿ ಅದು ಒಂದು 'ಬಂಡೆ'ಯಂತಿದೆ) ಅದಕ್ಕೆ ನೀರು ಹಾಕಿ ತೊಳೆದು ಆ ಮೋರೆಗೆ ಮನುಷ್ಯರ ಮುಖದಂತೆ ಅರಿಸಿನದ ಮುದ್ದೆಯಿಂದ ಮೆತ್ತಿ ಅದಕ್ಕೆ ಬೆಳ್ಳಿಯ ಕಣ್ಣು ಕೂಡಿಸಿ ಸೀರೆ ಉಡಿಸಿ—ಇವುಗಳಲ್ಲಿಯೇ ಪೂಜಾರಿಯ ಹೊತ್ತು ಹೋಗುತ್ತದೆ. ತಗ್ಗಿನಿಂದ ನೀರು ತರಬೇಕು.

ಕಳೆದಸಲ ನಾನು ಅದನ್ನು ನೋಡಲು ಹೋಗಿದ್ದೆ ಒಂದೂ ಎಲೆ ಸೂಡಿಸದೆ ಹೋದರೆ ದಾರಿ ತಪ್ಪಬಹುದೇ? ಗುಡಿಯ ಸುತ್ತಲಿನ ಬಂಡೆಯನ್ನು ಕಡಿದರೆ ಈಗಲೂ ರಕ್ತ ಬರಬಹುದೇ? ರಾತ್ರಿಯಲ್ಲಿ ದನಕರುಗಳನ್ನು ಹೊರಗೆ ಬಿಟ್ಟರೆ ಹುಲಿ ಮುರಿಯುವದಿಲ್ಲವೇ? —ಇವುಗಳ ಪ್ರಯೋಗ ಮಾಡಿ ನೋಡಬಹುದೇ? ಎಂದೆಲ್ಲ ಯೋಚಿಸುತ್ತ ಒಳಗೆ ಕಿಡಕಿಯೊಳಗಿಂದ ನೋಡಿದೆ. ನನ್ನ ಕಣ್ಣನ್ನು ನಾನೇ ನಂಬದಾದೆ. ಅಂಥ ತೇಜಸ್ವೀ ಜೀವಿಯನ್ನು ನಾನು ಎಲ್ಲೆಲ್ಲೂ ನೋಡಿದ್ದಿಲ್ಲ. ಹರಕು ಬಟ್ಟೆಯಲ್ಲಿ ಮಿಂಚಿನ ಮೂರ್ತಿಯಂತೆ ಕುಳಿತಿದ್ದಳು. ಹಣೆಯಲ್ಲಿ ವಿಭೂತಿ, ಕೈಯಲ್ಲಿ ಜಪದ ಸರ.

“ಯಾರು ಅದು?” ಎಂದು ಪೂಜಾರಿಯನ್ನು ಕೇಳಿದೆ.

“ ನನ್ನ ಮಗಳು ” ಅಂದ.

“ ನಿಮ್ಮ ಮಗಳು ! ”

“ ಯಾಕೆ ಹಾಗೆ ? ”

“ ಅವಳು ವಿಧವೆ....ಮದುವೆಯ ಮರುದಿನವೇ ವಿಧವೆಯಾದಳು........ ಎಂಟನೆಯ ವರುಷದಲ್ಲಿಯೇ ಮದುವೆ ಮಾಡಿದೆವು. ” ಅವನ ಕಣ್ಣಿನಿಂದ ಎರಡು ಹನಿಗಳುದುರಿದವು; ಬಾಯಿಯಿಂದ ಮಾತು ಹೊರಡಲಿಲ್ಲ.

“ ಅವಳ ಹೆಸರು ? ”

“ಏನೋ ಇಟ್ಟಿದ್ದೆವು. ಈಗ ನಾನು ಕರೆಯುವದು ‘ಸಹ್ಯಾದ್ರಿ’ ಎಂದು”

ಸಂಜೆಯಾಗಿತ್ತು. ಹುಲಿಯ ಮರಿಯೊಂದು ನನ್ನ ಸಮೀಪದಲ್ಲಿಯೇ ಹೋಯಿತು. ಬಳಿಯ ಆಕಳ ಕರು ಕಂಡರೂ ಕೂಗಲಿಲ್ಲ.